بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 42

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

21 ಅಕ್ಟೊಬರ್ 2021, 21 ಅಖಾ 1400 ತಬ್‌ಲೀಗ್ ಹಿಜರಿ ಶಮ್‌ಸಿ,
14 ರಬೀಉಲ್ ಅವ್ವಲ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْۤا اِنَّمَا الْخَمْرُ وَالْمَيْسِرُ
وَالْاَنْصَابُ وَالْاَزْلَامُ رِجْسٌ مِّنْ عَمَلِ
الشَّيْطٰنِ فَاجْتَنِبُوْهُ لَعَلَّكُمْ تُفْلِحُوْنَ

(ಅಲ್‌ಮಾಇದ: 91)

ಅಂದರೆ: ಎಲ್ಲೈ ವಿಶ್ವಾಸಿಗಳೇ, ನಿಸ್ಸಂಶಯವಾಗಿಯೂ, ಮದ್ಯಪಾನ, ಜೂಜಾಟ, ಮೂರ್ತಿಪೂಜೆ, ಬಾಣವೆಸೆದು ಶಕುನ ನೋಡುವುದು ಇವೆಲ್ಲ ಹೇಯವಾದ ಪೈಶಾಚಿಕ ಕೃತ್ಯಗಳಾಗಿವೆ. ಆದ್ದರಿಂದ ನೀವು ಏಳಿಗೆ ಹೊಂದಲಿಕ್ಕಾಗಿ ಅವುಗಳಿಂದೆಲ್ಲ ದೂರವಿರಿ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಬೇಡುವುದರಿಂದ ದೂರವಿರಬೇಕು.

1469) ಹಝ್ರತ್ ಅಬೂ ಸಯೀದ್ ಖುದರಿಯಿಂದ ವರದಿಯಿದೆ. ಅನ್ಸಾರ್‌ರಲ್ಲಿ ಕೆಲ ಜನರು ರಸೂಲುಲ್ಲಾಹ್(ಸ) ರವರೊಂದಿಗೆ ಏನು ಬೇಡಿದರು ಅವರಿಗೆ ನೀಡಿದರು. ಮತ್ತೆ ಅವರು ಪ್ರವಾದಿಯರೊಂದಿಗೆ ಬೇಡಿದಾಗ ಪ್ರವಾದಿಯವರು ನೀಡಿದರು. ಮತ್ತೆ ಅವರು ಬೇಡಿದರು. ಆಗಲು ಅವರು ನೀಡಿದರು. ಯಾವ ಸಂಪತ್ತು ನನ್ನಲ್ಲಿದ್ದರು ನಾನದನ್ನು ಮುಚ್ಚಿಡುವುದಿಲ್ಲ. ಯಾರು ಬೇಡುವುದಿಲ್ಲವೋ, ಅಲ್ಲಾಹನು ಸಹ ಅವನನ್ನು ಬೇಡುವುದರಿಂದ ರಕ್ಷಿಸುವನು ಮತ್ತು ಯಾರು (ಲೌಕಿಕ ಸಂಪತ್ತಿನಿಂದ) ನಿರಪೇಕ್ಷೆ ಹೊಂದುವನೋ ಅಲ್ಲಾಹನು ಸಹ ಅವನಿಗೆ ನಿರಪೇಕ್ಷೆಯಿಂದಿರಿಸುವನು. ಯಾರು ತನ್ನ ಆತ್ಮದ ಮೇಲೆ ಒತ್ತಡ ಹೇರಿ ಸಬರ್ (ತಾಳ್ಮೆ) ವಹಿಸುವನೋ ಅಲ್ಲಾಹನು ಅವನಿಗೆ ತಾಳುವ ಶಕ್ತಿ ನೀಡುವನು. ತಾಳ್ಮೆಗಿಂತ ಮಿಗಿಲಾದ ಉತ್ತಮ ಅನುಗ್ರಹ ಬೇರೆ ಇಲ್ಲ.

(1470) ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನಾಣೆ ನಿಮ್ಮ ಪೈಕಿ ಒಬ್ಬನು ತನ್ನ ಹಗ್ಗ ತೆಗೆದುಕೊಳ್ಳಲಿ ಮತ್ತು ತನ್ನ ಬೆನ್ನ ಮೇಲೆ ಕಟ್ಟಿಗೆಗಳನ್ನು ಹೊತ್ತು ತರಲಿ, ಅದು ಯವುದೇ ವ್ಯಕ್ತಿಯ ಬಳಿ ಹೋಗಿ ಅವನಿಂದ ಬೇಡುವುದಕ್ಕಿಂತ ಅವನು ಕೊಡಲು ಕೆಡದಿರಲಿ, ಅದಕ್ಕಿಂತ ಉತ್ತಮವಾಗಿರುವುದು, (ಅಂದರೆ ಬೇಡಬಾರದು ಎಂಬ ತಾತ್ಪರ್ಯ) **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝುಕಾತ್, ಮುದ್ರಣ 2008 ಖಾದಿಯಾನದ)**

**"ಸಿದ್ದೀಖ್" (ಸತ್ಯಸಂದ) ಎಂಬುದು ಅಲಂಕಾರಿಕ ಪದವಾಗಿದೆ. ಅಂದರೆ ಮಹೋನ್ನತ ದರ್ಜೆಯ ಪ್ರಮಾಣಿಕ ಸತ್ಯಸಂದ ಮತ್ತು ಸತ್ಯದೊಂದಿಗೆ ಪ್ರೇಮ ಹೊಂದಿದವನಾಗಿರಬೇಕು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಸಿದ್ದೀಖ್ (ಸತ್ಯಸಂಧ) ಅಲಂಕಾರಿಕ ಪದವಾಗಿದೆ. ಅಂದರೆ ಮಹೋನ್ನತ ದರ್ಜೆಯ ಪ್ರಮಾಣಿಕ ಅಥವಾ ಸತ್ಯಸಂಧ ಮತ್ತು ಸತ್ಯದೊಂದಿಗೆ ಪ್ರೇಮ ಹೊಂದಿದವರು "ಸತ್ಯಸಂಧರು' ಎನಿಸಿಕೊಳ್ಳುತ್ತಾರೆ. ಇದೊಂದು ಎಂತಹ ಸ್ಥಾನವಾಗಿದೆ ಎಂದರೆ, ಒಬ್ಬ ವ್ಯಕ್ತಿಯು ಈ ಸ್ಥಾನವನ್ನು ಪಡೆದಾಗ ಎಲ್ಲಾ ರೀತಿ ಸತ್ಯಸಾಕ್ಷ್ಯಗಳನ್ನು ಮತ್ತು ಪ್ರಮಾಣಿಕತೆಗಳನ್ನು ಕ್ರೂಡಿಸಿಕೊಂಡು ತನ್ನೆಡೆ ಸೆಳೆಯುವ ವ್ಯಕ್ತಿಯಾಗುತ್ತಾನೆ. ಯಾವ ರೀತಿ ಒಂದು ಗಾಜಿನ ಮೇಲೆ ಸೂರ್ಯನ ಕಿರಣಗಳು ಬಿದ್ದಾಗ ಬೆಳಕು ಪ್ರಖರಗೊಳ್ಳುತ್ತದೆ. ಅದೇ ರೀತಿ ಸತ್ಯವಂತನ ಸತ್ಯಸಂಧತೆಯು ಸ್ಥಿತಿಯಾಗಿರುತ್ತದೆ. ಅವನು ತನ್ನ ಸತ್ಯಸಂದ ಗುಣದಿಂದಾಗಿ ಪ್ರಖರಗೊಳ್ಳುತ್ತಾನೆ.

### ಸತ್ಯಸಂಧತೆ ಪಡೆಯುವ ತತ್ವ

ಸತ್ಯಸಂಧತೆಯ ಗುಣವನ್ನು ಪಡೆವ ತತ್ವವೇನೆಂದರೆ ತನ್ನ ನ್ಯೂನತೆ ಮತ್ತು ದುರ್ಬಲತೆಯನ್ನು ಅರಿತುಕೊಂಡು ಸಾಧ್ಯವಾದಷ್ಟು ಮಟ್ಟಿಗೆ "ಇಯ್ಯಾಕ ನಅಬುದೂ" ಎಂದು ಹೇಳುತ್ತಾನೆ ಮತ್ತು ನಿಷ್ಠೆ ತೋರುತ್ತಾನೆ. ಸುಳ್ಳನ್ನು ತ್ಯಜಿಸುತ್ತಾನೆ, ಸುಳ್ಳಿನೊಂದಿಗಿರುವ ಎಲ್ಲಾ ರೀತಿಯ ಅಪವಿತ್ರ ಗುಣಗಳಿಂದ ದೂರ ಉಳಿಯುತ್ತಾನೆ ಮತ್ತು ಪ್ರತಿಜ್ಞೆಗೈಯುತ್ತಾನೆ. ತಾನು ಎಂದೂ ಸುಳ್ಳು, ಸುಳ್ಳು ಸಾಕ್ಷಿ, ತಮಾಷೆಗೆ ಆಗಲಿ ಅಥವಾ ಯಾವ ಉದ್ದೇಶ ಸಾಧನೆಗಾಗಲಿ, ಅಂದರೆ ಯಾವ ರೂಪದಲ್ಲೂ ಯಾವ ಸ್ಥಿತಿಯಲ್ಲೂ ಸುಳ್ಳು ಉಪಯೋಗಿಸುವುದಿಲ್ಲ. ಈ ಮಟ್ಟಕ್ಕೆ ಬಂದು ತಲುಪಿದಾಗ "ಇಯ್ಯಾಕ ನಅಬುದೂ" ಒಂದು ವಿಶೇಷವಾದ ಪ್ರಭಾವಿ ಕ್ರಿಯೆಯಾಗುತ್ತದೆ. ಆ ಕ್ರಿಯೆ ಉನ್ನತ ದರ್ಜೆಯ ಆರಾಧನೆಯಾಗಿದೆ. "ಇಯ್ಯಾಕ ನಅಬುದು" ಮುಂದೆ "ಇಯ್ಯಾಕ ನಸ್ತಯೀನ್" ಇದೆ. ಅದು ಅವನ ಬಾಯಿಯಿಂದ ಉಚ್ಚರಿಸಲ್ಪಡಲಿ ಅಥವಾ ಪಡದಿರಲಿ, ಅಲ್ಲಾಹನ ಎಲ್ಲಾ ಅನುಗ್ರಹಗಳ ಮತ್ತು ಸತ್ಯ ಹಾಗೂ ಪ್ರಮಾಣಿಕ ಗುಣಗಳ ಮೂಲವಾದವನು ಅವನಿಗೆ ಅವಶ್ಯವಾಗಿ ಸಹಕರಿಸುವನು. ಸತ್ಯಸಂಧತೆಯ ಉನ್ನತಮಯ ತತ್ವ ಮತ್ತು ರಹಸ್ಯ ಅವನ ಮೇಲೆ ಬಿಚ್ಚಿಡುವನು. ಅಂದ ಹಾಗೆ ಅದೊಂದು ಅನುಭವದ ಮಾತಾಗಿದೆ. ಒಬ್ಬ ಒಳ್ಳೆಯ ಪ್ರಮಾಣಿಕತೆ ಹೊಂದಿದ ವ್ಯಾಪಾರಿ ಎಂದೂ ತನ್ನ ಸದ್ಗುಣ, ಪ್ರಮಾಣಿಕತೆ ಮತ್ತು ಸತ್ಯ ಕೈಬಿಡುವುದಿಲ್ಲ, ಅವನು ಒಂದು ಪೈಸೆಯಿಂದ ವ್ಯಾಪಾರ ಮಾಡಲಿ. ಅಲ್ಲಾಹನು ಆ ಒಂದು ಪೈಸೆಯ ವ್ಯಾಪಾರವನ್ನು ತನ್ನ ಅನುಗ್ರಹದಿಂದ ಲಕ್ಷಾಂತರ ರೂಪಾಯಿಗಳಲ್ಲಿ ಪರಿವರ್ತಿಸುತ್ತಾನೆ.

**(ಮಲ್ಫೂಝಾತ್, ಸಂಪುಟ-1, ಪುಟ 321, ಮುದ್ರಣ 2018 ಖಾದಿಯಾನ್)**

**ಇದೀಗ ಕೇವಲ ಪವಿತ್ರ ಖುರ್‌ಆನ್‌ಗೆ ಮಾತ್ರ ಈ ಸುರಕ್ಷತೆ ದೊರೆತಿದೆ. ಅದರ ಅನುಯಾಯಿಗಳು ಎಲ್ಲಾ ಕಾಲಘಟ್ಟಗಳಲ್ಲೂ ಅಲ್ಲಾಹನಿಂದ ನೇರವಾಗಿ ದಿವ್ಯವಾಣಿ ಪಡೆಯುವ ವಾದ, ದಾವೆದರರು ಬರುತ್ತಿದ್ದಾರೆ.**

**ಅಲ್ಲಾಹನ ಅನುಗ್ರಹದಿಂದ ನನ್ನ ದಾವೆಯೇನೆಂದರೆ. ಯಾವುದೇ ವಿದ್ಯೆಯ ಪರಿಣಿತನು, ಪವಿತ್ರ ಖುರ್‌ಆನ್‌ನ ಯಾವುದೇ ಸಮಸ್ಯೆಯ ಬಗ್ಗೆಯೂ ಆಕ್ಷೇಪ ಎತ್ತಿದರೆ ನಾನು ಅದಕ್ಕೆ ಸಮಂಜಸವಾದ ಮತ್ತು ಸಾಕ್ಷ್ಯಸಹಿತ ಉತ್ತರ ನಿಡಬಲ್ಲೆನು. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ವಿದ್ಯೆಯಲ್ಲಿಯೂ ಮೌನವಾಗುವಂತೆ ಮಾಡಬಲ್ಲೆನು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಅಲ್-ಹಿಜರ ವಚನ 10, **ಇನ್ನ ನಹನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

ಪವಿತ್ರ ಖುರ್‌ಆನ್‌ನ ಸುರಕ್ಷತೆಗೆ ಒಂದು ಬಹು ದೊಡ್ಡ ಮಾಧ್ಯಮ ಆದದ್ದೇನೆಂದರೆ– ಖುರ್‌ಆನ್ ಅವತರಣೆಯ ನಂತರ ಅರಬಿ ಶೈಕ್ಷಣಿಕ ಭಾಷೆಯಲ್ಲಿ ಪರಿವರ್ತನೆಯಾಗುವುದು ನಿಂತುಬಿಟ್ಟಿತು. ಅರಬಿ ಹೊರತು ಲೋಕದಲ್ಲಿ ಯಾವ ಭಾಷೆಯು ಮೊದಲಿದ್ದಂತೆ ಇಂದು ಇಲ್ಲ. ಅದು ಹರಿಮೂರು ನೂರು ವರ್ಷಗಳಿಂದಲೂ ಹಾಗೆಯೇ ಇದೆ. ಬೌಸರ್ ಮತ್ತು ಶೇಕ್ಸ್‌ಪಿಯರ್ ಮೂರು ನೂರು ವರ್ಷಗಳ ಹಿಂದೆ ಬರೆದ ಇಂಗ್ಲೀಷ್ ಭಾಷೆಗೆ ವಿವರಣೆ ನೀಡುವ ಅಗತ್ಯವಿದೆ. ಏಕೆಂದರೆ ಈಗ ಬಹಳಷ್ಟು ಬದಲಾವಣೆ ಹೊಂದಿದೆ. ಆದರೆ ಪವಿತ್ರ ಖುರ್‌ಆನ್ ತಿಳಿದುಕೊಳ್ಳಲು ಪುರಾತನ ನಿಘಂಟುಗಳನ್ನು ಹುಡುಕುವ ಅವಶ್ಯಕತೆಗಳಿಲ್ಲ. ಏಕೆಂದರೆ ಯಾವ ವ್ಯಕ್ತಿ ಇಂದು ಅರಬಿಯನ್ನು ಓದುತ್ತಿದ್ದಾನೆ. ಅವನು ಪವಿತ್ರ ಖುರ್‌ಆನ್ ಸಹ ಯಾರ ಸಹಾಯವಿಲ್ಲದೆ ತಿಳಿದುಕೊಳ್ಳಬಹುದು.

ಈ ಬಾಹ್ಯ ಸಾಮಗ್ರಿಗಳಲ್ಲದೇ ಅಲ್ಲಾಹನು ಪವಿತ್ರ ಖುರ್‌ಆನ್‌ನ ಸುರಕ್ಷತೆಗಾಗಿ ಒಂದು ಎಂತಹ ಮಾಧ್ಯಮ ನಿಗದಿಪಡಿಸಿದ್ದಾನೆಂದರೆ ಅದರಲ್ಲಿ ದೇವದೂತರ ಸಹ ಹಸ್ತಕ್ಷೇಪವಿಲ್ಲ. ಅದು ದಿವ್ಯವಾಣಿಯಾಗಿದೆ. ದಿವ್ಯವಾಣಿಯಲ್ಲಿ

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಓ ಇಸ್ಲಾಂ ಧರ್ಮದ ರಕ್ಷಕರೇ! ನಾನು ಬೈತೆ ಅಖಬದಲ್ಲಿ ನಿಷ್ಠೆಯ ಪ್ರಮಾಣವಚನ ಸ್ವೀಕರಿಸಿದ ನಕಾಬ್‌ಗಳಲ್ಲಿ ಕಿರಿಯವನಾಗಿದ್ದೆ, ಆದರೆ ನಾನು ಸುದೀರ್ಘ ಜೀವನವನ್ನು ಪಡೆದಿದ್ದೇನೆ....... ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಆತನ ಮೇಲೆ ನಾನು ಪ್ರತಿಜ್ಞೆ ಮಾಡುತ್ತೇನೆ! (ಹಝ್ರತ್ ಉಬಾದ ಬಿನ್ ಸಾಮಿತ್[ರ])**

**ರಸೂಲುಲ್ಲಾಹ್[ಸ] ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ವಶಪಡಿಸಿಕೊಂಡ ಇತರ ಪ್ರಾಂತ್ಯಗಳಂತೆ, ಇಲ್ಲಿಯ ಜನರನ್ನು ಉತ್ತಮ ರೀತಿಯಲ್ಲಿ ಪರಿಗಣಿಸಲಾಯಿತು ಮತ್ತು ಅವರ ನಡುವೆ ನ್ಯಾಯವನ್ನು ಸಮಾನ ಸಮಾನತೆಯ ಆಧಾರದ ಮೇಲೆ ಸ್ಥಾಪಿಸಲಾಯಿತು, ಇದರಲ್ಲಿ ಯಾವುದೇ ಬಲವಂತರು ದುರ್ಬಲರನ್ನು ದಮನಿಸಲು ಸಾಧ್ಯವಿಲ್ಲ.**

**ಡಮಾಸ್ಕಸ್ ವಿಜಯದ ನಂತರ ನಡೆದ ಘಟನೆಗಳ ವಿವರವಾದ ವಿವರ, ಫಿಹಲ್, ಬೆಸನ್, ತಬರಿಯ, ಹಿಮಸ್, ಮಾರ್ಜ್ ಅಲ್-ರಮ್, ಹಮಾ, ಲತಾಕಿಯಾ, ಕನ್ಸಾರಿನ್ ಮತ್ತು ಖಿಸೇರಿಯಾದ ವಿಜಯದ ಕುರಿತು ವಿವರತ್ಮಕ ಪ್ರಸ್ತವನೆ**

**ನಾಲ್ಕು ದಿವಂಗತರಾದ ಕೇರಳದ ಮುಬಲ್ಲಿಗ್‌ರಾದ ಸನ್ಮಾನ್ಯ ಮೌಲವಿ ಕೆ. ಮುಹಮ್ಮದ್ ಅಲವಿ ಸಾಹಿಬ್‌ರ ಪತ್ನಿ ಖ಼ದೀಜ ಸಾಹಿಬ, ಅಟಕಿನ ಮಾಜಿ ಜಿಲ್ಲಾ ಅಮೀರ್ ಆದ ಸನ್ಮಾನ್ಯ ಮಲಿಕ್ ಸುಲ್ತಾನ್ ರಶೀದ್ ಸಾಹಿಬ್, ಇಂಡೋನೇಶಿಯದ ಅಬ್ದುಲ್‌ಖಯ್ಯೂಮ್ ಸಾಹಿಬ್ ಮತ್ತು ಬೆನಿನಿನ ದಾವೂದ ರಝ್ಝಾಕಿ ಯೂನುಸ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10-09-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲ ಮತ್ತು ಆಗ ನಡೆದ ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಚರಿತ್ರೆಯ ಪುಸ್ತಕಗಳಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರರ(ರ) ಖಿಲಾಫತ್ ಕಾಲದಲ್ಲಿ ಡಮಸ್ಕಸ್ ಮೇಲಿನ ಮುತ್ತಿಗೆ ಹಲವು ತಿಂಗಳ ತನಕ ಮುಂದುವರೆದಿತ್ತು. ಹಝ್ರತ್ ಅಬೂಬಕರರ(ರ) ನಿಧನದ ನಂತರ ಮುಸ್ಲಿಮರಿಗೆ ಡಮಸ್ಕಸಿನ ಮೇಲೆ ವಿಜಯ ಲಭಿಸಿತು. ಆ ಘಟನೆ ಹಝ್ರತ್ ಅಬೂಬಕರರ(ರ) ಕಾಲದ್ದಾಗಿದೆ. ಆದರಿಂದ ಅದರ ಬಗ್ಗೆಗಿನ ವಿವರಣೆಯನ್ನು ಅವರ ಪ್ರಸ್ತಾಪದಲ್ಲಿ ಮುಂದಿರಿಸಲಾಗುವುದು. ಇನ್‌ಶಾ ಅಲ್ಲಾಹ್. ಈಗ ಡಮಸ್ಕಸಿನ ವಿಜಯದ ನಂತರ ಉಂಟಾದ ಘಟನೆಗಳ ಬಗ್ಗೆ ವಿವರಿಸುತ್ತೇನೆ.

ಡಮಸ್ಕಸಿನ ಮೇಲೆ ವಿಜಯ ಸಾಧಿಸಿದ ನಂತರ ಹಝ್ರತ್ ಖಾ಼ಲಿದ್ ಬಿನ್ ವಲೀದ್‌ರನ್ನು(ರ) ಹಝ್ರತ್ ಅಬೂಉಬೈದ(ರ) ಬಿಖಾಅ್‌ದ ಯುದ್ಧಕ್ಕಾಗಿ ಕಳುಹಿಸಿದರು. ಬಿಖಾಅ್ ಎಂಬುದು ಬಾಲಬಕ್ ಮತ್ತು ಹಿಮಸ್ ನಡುವೆ ಇರುವ ಒಂದು ವಿಶಾಲವಾದ ಪ್ರದೇಶವಾಗಿದೆ. ಅದರಲ್ಲಿ ಅನೇಕ ಗ್ರಾಮಗಳು ಇವೆ. ಅವರು ಅಲ್ಲಿನ ವಿಜಯದ ನಂತರ ಮೀಸ್‌ನೂನ್ ಎಂಬ ಹೆಸರಿನ ಚಿಲುಮೆಯ ಕಡೆಗೆ ಹಝ್ರತ್ ಖಾ಼ಲಿದ್(ರ) ಒಂದು ಸಣ್ಣ ಸೈನ್ಯವನ್ನು ಕಳುಹಿಸಿದರು. ರೋಮನ್ನರ ಒಂದು ಸೈನಿಕ ಸಂಘವು ಮುಸ್ಲಿಮರ ಸೈನ್ಯದ ಹಿಂದಿನಿಂದ ಹಲ್ಲೆ ನಡೆಸಿತು. ಅದರ ಕಾರಣದಿಂದ ಅನೇಕ ಮುಸ್ಲಿಮರು ಶಹೀದ್ ಆದರು. ಆ ಹುತಾತ್ಮರ ಕಾರಣದಿಂದ ಆ ಚಿಲುಮೆಯ ಹೆಸರು **ಐನುಶ್ಶುಹದಾ** ಎಂದಾಯಿತು. ಹಝ್ರತ್ ಅಬೂಉಬೈದ(ರ) ಡಮಸ್ಕಸಿನ ಮೇಲೆ ಯಝೀ಼ದ್ ಬಿನ್ ಅಬೂಸೂಫ್‌ಯಾನ್‌ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಯಝೀ಼ದ್ ಎಂಬುದು ಹಝ್ರತ್ ಅಬೂಸೂಫ್‌ಯಾನ್‌ರ ಮಗನ ಬಗ್ಗೆಯಾಗಿದೆ. ಅವರು ದೇಹ್ ಬಿನ್ ಖ಼ಲೀಫರನ್ನು ಒಂದು ಸೈನ್ಯತುಕಡಿಯೊಂದಿಗೆ ತುದ್‌ಮರಿಗೆ ಕಳುಹಿಸಿದರು.

ಅದೇ ರೀತಿಯಲ್ಲಿ ಅಬೂಝುಹರ್ ಖಶೀರಿಯನ್ನು ಬಸನಿಯ ಮತ್ತು ಹವಾರನಿಗೆ ರವಾನೆ ಮಾಡಿದರು. ಆದರೆ ಅಲ್ಲಿಯ ಜನರು ಸಂಧಾನ ಮಾಡಿಕೊಂಡರು. ಅವರ ಮೇಲೆ ಹೊರಿಸಲಾದ ಯುದ್ಧದ ಕಾರಣದಿಂದ ಶರ್‌ಹ್‌ಬೀಲ್ ಬಿನ್ ಹಸನ(ರ) ಜೋರ್ದಾನಿನ ರಾಜಧಾನಿ ತಬರಿಯನ್ನು ಬಿಟ್ಟು ಬಾಕಿ ಪೂರ್ತಿ ದೇಶವನ್ನು ವಶಪಡಿಸಿಕೊಂಡರು. ಬಖಾಅ್‌ದ ಪ್ರದೇಶದಿಂದ ವಿಜಯಿಯಾಗಿ ಹಝ್ರತ್ ಖಾ಼ಲಿದ್(ರ) ಸಹ ಮರಳಿದರು. ಬಾಲಬಕಿನ ಜನರು ಅವರೊಡನೆ ಸಂಧಾನ ಮಾಡಿಕೊಂಡರು. ಅವರು ಅಲ್ಲಿಯ ನಿವಾಸಿಗಳೊಡನೆ ಒಪ್ಪಂದ ಬರೆಸಿದರು. ತಬರಿಯದ ಜನರು ಸಂಧಾನ ಮಾಡಿಕೊಂಡರು. (ಸಯ್ಯದುನಾ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಭರ್ ಕಾರ್ನಾಮೆ, ಅಸ್ಸಲಾಬಿ, ಪುಟ-730, ಮಕ್ತಬ ಅಲ್‌ಫುರ್‌ಖಾನ್ ಖಾನ್‌ಗಢ್) (ಮುಜಮುಲ್ ಬಲದಾನ್, ಸಂಪುಟ-1, ಪುಟ-402,557,623) (ಮುಜಮುಲ್ ಬಲದಾನ್, ಸಂಪುಟ-2, ಪುಟ-20,364)

ಬಾಲಬ ಸಹ ಡಮಸ್ಕಸ್‌ನಿಂದ ಮೂರು ದಿವಸದ ಪ್ರಯಾಣದ ದೂರದ ಒಂದು ಪುರಾತನ ಸ್ಥಳವಾಗಿದೆ. (ಮುಜಮುಲ್ ಬಲದಾನ್, ಸಂಪುಟ-1, ಪುಟ-537-538)

ಫಿಹಲ್ ಒಂದು ಸ್ಥಳವಾಗಿದೆ. ಅದರ ವಿಜಯವು 14 ಹಿಜರಿನಲ್ಲಿ ನಡೆಯಿತು. ಹಝ್ರತ್ ಅಬು ಉಬೈದ(ರ)ರವರು ಹಝ್ರತ್ ಉಮರ್(ರ) ಅವರ ಸೇವೆಯಲ್ಲಿ ಹರ್ಖಲ್ ಹಿಮಸ್‌ನಲ್ಲಿ ತಂಗಿದ್ದಾನೆ ಮತ್ತು ಅಲ್ಲಿಂದ ಡಮಾಸ್ಕಸ್‌ಗೆ ಸೈನ್ಯವನ್ನು ಕಳುಹಿಸುತ್ತಿದ್ದಾನೆ ಎಂದು ತಿಳಿದು ಬಂದಿದೆ ಆದರೆ ಡಮಾಸ್ಕಸ್‌ನ ಮೇಲೆ ಮೊದಲು ದಾಳಿ ಮಾಡಬೇಕೇ ಅಥವಾ ಫಿಹಲ್‌ನ ಮೇಲೆ ಎಂದು ನಿರ್ಧರಿಸಲು ನನಗೆ ಕಷ್ಟವಾಗುತ್ತಿದೆ ಎಂದು ಬರೆಯುತ್ತಾರೆ. ಫಿಹಲ್ ಸೀರಿಯಾದ ಒಂದು ಒಂದು ಸ್ಥಳದ ಹೆಸರಾಗಿದೆ. ಹಝ್ರತ್ ಉಮರ್(ರ) ಪ್ರತ್ಯುತ್ತರವಾಗಿ ಹೀಗೆ ಅರೆಯುತ್ತಾರೆ: ಮೊದಲು ಡಮಾಸ್ಕಸ್ ಮೇಲೆ ದಾಳಿ ಮಾಡಿ ಮತ್ತು ಅದನ್ನು ವಶಪಡಿಸಿಕೊಳ್ಳಿ ಏಕೆಂದರೆ ಅದು ಸಿರಿಯಾದ ಕೋಟೆ ಮತ್ತು ಅದರ ರಾಜಧಾನಿಯಾಗಿದೆ. ಅದೇ ಸಮಯದಲ್ಲಿ, ಅವರು ನಿಮ್ಮ ಕಡೆಗೆ ಮುನ್ನಡೆಯುವುದನ್ನು ತಡೆಯಲು ಸೈನ್ಯವನ್ನು ಫಹ್ಲ್‌ಗೆ ಕಳುಹಿಸಿ. ಡಮಾಸ್ಕಸ್‌ಗೆ ಮುಂಚೆ ಫಹಲ್ ಅನ್ನು ವಶಪಡಿಸಿಕೊಂಡರೆ ಅದು ಉತ್ತಮ, ಇಲ್ಲದಿದ್ದರೆ, ಡಮಾಸ್ಕಸ್ ಅನ್ನು ವಶಪಡಿಸಿಕೊಂಡ ನಂತರ, ಅಲ್ಲಿ ಒಂದು ಸಣ್ಣ ಸೈನ್ಯವನ್ನು ಬಿಟ್ಟು ನಿಮ್ಮೊಂದಿಗೆ ಎಲ್ಲಾ ಮುಖ್ಯಸ್ಥರೊಂದಿಗೆ ಫಹಲ್‌ಗೆ ಹೋಗಿರಿ. ಸರ್ವಶಕ್ತನಾದ ಅಲ್ಲಾಹನು ನಿಮಗೆ ಫಿಹಲ್ ಅನ್ನು ಜಯಿಸಿದರೆ ಖಾಲಿದ್ ಮತ್ತು ನೀವು ಹಿಮ್ಸ್‌ಗೆ ಹೋಗಿರಿ ಮತ್ತು ಶುರಾಹ್‌ಬಿಲ್ ಮತ್ತು ಅಮರ್ ಅನ್ನು ಅರ್ದನ್ ಮತ್ತು ಪ್ಯಾಲೆಸ್ಟೈನ್‌ಗೆ ಕಳುಹಿಸಿರಿ. ಹಝ್ರತ್ ಉಮರ್(ರ) ಅವರ ಪತ್ರವನ್ನು ಹಝ್ರತ್ ಅಬು ಉಬೈದ(ರ) ಸ್ವೀಕರಿಸಿದಾಗ, ಅವರು ಸೈನ್ಯದ ಹತ್ತು ಅಧಿಕಾರಿಗಳನ್ನು ಕಳುಹಿಸಿದರು, ಅವರಲ್ಲಿ ಪ್ರಮುಖರಾದ ಅಬು ಅಲ್-ಅವರ್ ಸುಲಮಿರವರಾಗಿದ್ದರು ಅವರನ್ನು ಫಹಲ್‌ಗೆ ಕಳುಹಿಸಿದರು ಮತ್ತು ಸ್ವತಃ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರೊಂದಿಗೆ ಡಮಾಸ್ಕಸ್‌ಗೆ ತೆರಳಿದರು. ರೋಮನ್ ಸೇನೆಗಳು ಮುಸ್ಲಿಮರು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದಾಗ, ಅವರು ತಬರಿಯಾ ಮತ್ತು ಜೋರ್ಡಾನ್ ನದಿಯ ನೀರನ್ನು ತಮ್ಮ ಸುತ್ತಲಿನ ಭೂಮಿಯಲ್ಲಿ ಬಿಟ್ಟರು, ಅದು ಇಡೀ ಭೂಮಿಯನ್ನು ಜೌಗು ಪ್ರದೇಶವನ್ನಾಗಿ ಮಾಡಿ ಅದನ್ನು ದಾಟಲು ಕಷ್ಟವಾಯಿತು. (ಸಯ್ಯದುನಾ ಉಮರ್ ಫಾರೂಕ್ ಅಜಮ್ ಮುಹಮ್ಮದ್ ಹುಸೇನ್ ಹೈಕಲ್‌ನ ಅನುವಾದಕರಿಂದ, ಪುಟ:194-195, ಇಸ್ಲಾಮಿಕ್ ಲೈಬ್ರರಿ ಲಾಹೋರ್) (ಅಲ್-ಫಾರೂಕ್ ಅವರಿಂದ ಅಲ್ಲಮ ಶಿಬ್ಲಿ, ಪು. 114, ದಾರುಲ್ ಇಶಾಅತ್ ಕರಾಚಿ 1991) (ಮುಜಮುಲ್ ಬಲದಾನ್, ಸಂಪುಟ-4, ಪುಟ-268)

ಹೇಗಿದ್ದರೂ ಹರ್ಖಲ್ ಕಳುಹಿಸಿದ ಸಹಾಯಕ ಸೈನ್ಯಕ್ಕೆ ಕೂಡ ಡಮಸ್ಕಸಿಗೆ ಬರಲು ಸಾಧ್ಯವಾಗಲಿಲ್ಲ. ಇನ್ನೊಂದೆಡೆ ಮುಸ್ಲಿಮರು ಈ ಅವಸ್ಥೆಯಲ್ಲೂ ಸ್ಥಿರತೆಯಿಂದ ಇದ್ದರು. ಅದನ್ನು ನೋಡಿ ಕ್ರೈಸ್ತರು ಸಂಧಾನಕ್ಕೆ

ತಯಾರಾದರು ಮತ್ತು ಯಾರಾದರೂ ರಾಯಭಾರಿಯಾಗಿ ಬರಲು ಅವರು ವಿನಂತಿಸಿದರು. ಹಝ್ರತ್ ಮುಆಧ್ ಬಿನ್ ಜಬಲ್‌ರನ್ನು ಹಝ್ರತ್ ಅಬೂಉಬೈದ(ರ) ರಾಯಭಾರಿಯಾಗಿ ಕಳುಹಿಸಿದರು. ಹಝ್ರತ್ ಮುಆಧ್ ಬಿನ್ ಜಬಲ್ ಇಸ್ಲಾಮಿನ ಸಂದೇಶವನ್ನು ಎದುರಾಳಿಗಳ ಮುಂದೆ ಇರಿಸಿದರು. ಆದರೆ ಅವರು ಅದನ್ನು ಸ್ವೀಕರಿಸಲಿಲ್ಲ. ಇತರ ವಿಷಯಗಳಲ್ಲದೆ ರೋಮನರು ಹಝ್ರತ್ ಮುಆಧ್ ಬಿನ್ ಜಬಲ್‌ರ ಮುಂದೆ ಹೀಗೆ ಬೇಡಿಕೆ ಇಟ್ಟರು: ನಾವು ನಿಮಗೆ ಬಲ್‌ಖಾದ ಜಿಲ್ಲೆ ಮತ್ತು ನಿಮ್ಮ ಪ್ರದೇಶದೊಂದಿಗೆ ಸೇರಿರುವ ಜೋರ್ದಾನಿನ ಭಾಗವನ್ನು ಕೊಡುವೆವು. ನೀವು ದೇಶವನ್ನು ಬಿಟ್ಟು ಹೋಗಿರಿ. ಈ ಜನರು ಮೊದಲು ಸ್ವತಃ ಸೈನ್ಯವನ್ನು ಒಟ್ಟುಸೇರಿಸಿದ್ದರು. ಆದರೆ ಸೋಲುವ ಸಮಯ ಬಂದಾಗ ಹೀಗೆ ಬೇಡಿಕೆ ಇಟ್ಟರು. ಹಝ್ರತ್ ಮುಆಧ್ ಅದನ್ನು ನಿರಾಕರಿಸಿದರು ಮತ್ತು ಅದು ಸಾಧ್ಯವಲ್ಲವೆಂದು ಹೇಳಿ ಮರಳಿ ಬಂದರು. ರೋಮನರು ನೇರವಾಗಿ ಅಬೂಉಬೈದರೊಡನೆ ಮಾತುಕತೆ ನಡೆಸಲು ಬಯಸಿದರು. ಈ ಉದ್ದೇಶಕ್ಕಾಗಿ ಅವರು ಒಬ್ಬ ವಿಶಿಷ್ಟ ದೂತನನ್ನು ಕಳುಹಿಸಿದರು. ದೂತನು ಮುಸ್ಲಿಮರ ಕ್ಯಾಂಪಿಗೆ ತಲುಪಿದಾಗ, ಅಬೂ ಉಬೈದ ನೆಲದಲ್ಲಿ ಕುಳಿತಿರುವುದನ್ನು ಕಂಡರು. ಅವರ ಕೈಯಲ್ಲಿ ಈಟಿಯಿತ್ತು. ಅದನ್ನು ತಿರುಗಿಸುತ್ತಿದ್ದರು. ಸೇನಾಧಿಪತಿ ಬಹಳ ವೈಭವಶಾಲಿ ನೆಲೆಯ ವ್ಯಕ್ತಿಯಾಗಿರಬಹುದು. ಹಾಗೆ ಅವರನ್ನು ಗುರುತಿಸಬಹುದು ಎಂದು ದೂತನು ಭಾವಿಸಿದ್ದನು. ಆದರೆ ದೂತನು ಎತ್ತಕಡೆಗೆ ಕಣ್ಣು ಹಾಯಿಸಿ ನೋಡುವಾಗಲೂ ಎಲ್ಲರನ್ನು ಸಮಾನರಾಗಿ ಕಾಣುತ್ತಿದ್ದನು. ಕೊನೆಗೆ ಹೆದರಿಕೊಂಡು ನಿಮ್ಮ ಸರದಾರ ಯಾರೆಂದು ಕೇಳಿದನು. ಅಬೂಉಬೈದರ ಕಡೆಗೆ ಜನರು ಬೊಟ್ಟು ಮಾಡಿ ತೋರಿಸಿದರು. ಅವನು ಬಹಳ ಅಚ್ಚರಿಗೊಂಡನು ಮತ್ತು ಬಹಳ ಆಶ್ಚರ್ಯದಿಂದ ಹೀಗೆ ಕೇಳಿದನು: ಸತ್ಯದಲ್ಲಿ ಸರದಾರ ನೀವೇ ಏನು? ಹೌದೆಂದು ಅಬೂಉಬೈದ ಹೇಳಿದರು. ದೂತನು ಹೇಳಿದನು: ನಾನು ನಿಮ್ಮ ಪ್ರತಿಯೊಬ್ಬ ಸೈನಿಕನಿಗೆ ತಲಾ ಎರಡು ಎರಡು ಅಶ್ರಫಿಗಳನ್ನು ಕೊಡುವೆವು. ನೀವು ಇಲ್ಲಿಂದ ಹೊರಟುಹೋಗಿರಿ. ಹಝ್ರತ್ ಅಬೂಉಬೈದ ಅದನ್ನು ನಿರಾಕರಿಸಿದರು. ಅದರಿಂದ ದೂತನು ಬಹಳ ಕೋಪಗೊಂಡನು ಮತ್ತು ಎದ್ದು ಹೊರಟುಹೋದನು. ಅವನು ದಿಟ್ಟಿಸಿ ನೋಡಿ ಹೋಗುವುದನ್ನು ಕಂಡು ತನ್ನ ಸೈನ್ಯದೊಡನೆ ತಯಾರಾಗಲು ಅಬೂಉಬೈದ(ರ) ಹೇಳಿದರು. ಎಲ್ಲ ಸ್ಥಿತಿಗತಿಗಳ ಬಗ್ಗೆ ಹಝ್ರತ್ ಉಮರ್‌ರಿಗೆ ಬರೆದರು. ಯುದ್ಧಕ್ಕಾಗಿ ಹೊರಡಲು ಹಝ್ರತ್ ಉಮರ್(ರ) ಅನುಮತಿ ಕೊಟ್ಟರು. ಏಕೆಂದರೆ ರೋಮನ್ನರು ಒಟ್ಟುಸೇರುತ್ತಿದ್ದರು. ಸ್ಥಿರತೆಯಿಂದ ಇರಲು ಹೇಳಿದರು ಮತ್ತು ಅಲ್ಲಾಹನು ನಿಮ್ಮ ಜೊತೆಗೆ ಇದ್ದಾನೆ ಎಂದು ಹೇಳಿ ಧೈರ್ಯಕೊಟ್ಟರು. ಯುದ್ಧಕ್ಕಾಗಿ ತಯಾರಾಗಲು ಹಝ್ರತ್ ಅಬೂಉಬೈದ(ರ) ಆದೇಶ ನೀಡಿದ್ದರು. ಆದರೆ ಆ ದಿನ ರೋಮನ್ನರು ಹೋರಾಡಲು ಬಂದಿರಲಿಲ್ಲ. ಮರುದಿನ ಬೆಳಿಗ್ಗೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಕೇವಲ ಸವಾರರೊಡನೆ ಮೈದಾನಕ್ಕೆ ಹೋದರು. ರೋಮಿನ ಸೈನ್ಯ ಕೂಡ ತಯಾರಾಗಿದ್ದರು. ಉಭಯ ಪಕ್ಷಗಳ ನಡುವೆ ಯುದ್ಧ ನಡೆಯಿತು. ರೋಮನ್ ಸೈನಿಕರ ಸಂಖ್ಯೆ 50 ಸಾವಿರದಿಂದ ಒಂದು ಲಕ್ಷದಷ್ಟು ಇತ್ತು ಎಂದು ಚರಿತ್ರೆಯಲ್ಲಿ ಹೇಳಲಾಗಿದೆ. ಯುದ್ಧ ಶುರುವಾದಾಗ ಮುಸ್ಲಿಮರ ಸ್ಥೈರ್ಯವನ್ನು ಕಂಡು ರೋಮನಿನ ಸೇನಾಧಿಪತಿ ಮರಳಿ ಹೋಗಲು ಬಯಸಿದರು. ಆದರೆ ಖಾಲಿದ್‌ರ(ರ) ಯುದ್ಧ ಗರ್ಜನೆಯ ಕಾರಣದಿಂದ ಮುಸ್ಲಿಮರು ಎಂತಹ ದಾಳಿ ನಡೆಸಿದರು ಎಂದರೆ, ರೋಮನ್ನರು ಅಲ್ಲೇ ಸೋತು ಹೋದರು. ಕ್ರೈಸ್ತರ ಸಹಾಯ ಲಭಿಸುವ ಪ್ರತೀಕ್ಷೆಯಿಂದ ರೋಮನ್ನರು ಯುದ್ಧವನ್ನು ಮುಂದೂಡುತ್ತಿದ್ದರು. ಅವರ ಈ ತಂತ್ರವನ್ನು ಅರಿತಿದ್ದ ಹಝ್ರತ್ ಖಾಲಿದ್(ರ) ಹಝ್ರತ್ ಅಬೂಉಬೈದರೊಡನೆ ಹೇಳಿದರು: ರೋಮನ್ನರು ಭಯಗೊಂಡಿರುವರು. ಇದೇ ದಾಳಿ ನಡೆಸಲು ತಕ್ಕ ಸಮಯ. ಹೀಗೆ ಅವರ ಸಲಹೆ ಪ್ರಕಾರ, ಮರುದಿನ ದಾಳಿ ನಡೆಸಲು ತಯಾರಾಗಲು ಸೈನ್ಯದೊಡನೆ ಹೇಳಲಾಯಿತು. ಹೀಗೆ ಮರುದಿನ ಒಂದು ಗಂಟೆಯ ಘೋರ ಯುದ್ಧ ನಡೆಯಿತು. ಅನಂತರ ರೋಮನ್ನರು ಪರಾಜಿತಗೊಂಡು ಪರಾರಿಯಾಗಲು ತಯಾರಾದರು. ಹಝ್ರತ್ ಉಮರರ(ರ) ಆದೇಶ ಪ್ರಕಾರ ಪ್ರಾದೇಶಿಕ ಜನರ ಜೀವ, ಸಂಪತ್ತು, ಭೂಸ್ವತ್ತು, ಮನೆಗಳು ಮತ್ತು ಆರಾಧನಾ ಮಂದಿರಗಳು ಅವರ ಬಳಿಯಲ್ಲೇ ಇರಿಸಲಾದುವು. ಮುಸ್ಲಿಮರು ಕೇವಲ ಮಸೀದಿಗಳಿಗಾಗಿ ಜಾಗವನ್ನು ಪಡೆದರು. (ಅಲ್‌ಫಾರೂಖ್, ಅಲ್ಲಾಮ ಶಿಬ್ಲಿ ನುಮಾನಿ, ಪುಟ-114-118, ದಾರುಲ್ ಇಶಾಅತ್ ಕರಾಚಿ 1991) (ಸಯ್ಯದುನಾ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಮುಹಮ್ಮದ್ ಸಲಾಬಿ, ಪುಟ-730, ಮಕ್ತಬ ಅಲ್‌ಫುರ್‌ಖಾನ್ ಖಾನ್ ಗಡ್) (ಸಯ್ಯದುನ ಉಮರ್ ಫಾರೂಖ್ ಅಝುವ್ ಮಯಹಮ್ಮದ್ ಹುಸೈನ್ ಹೈಕಲ್ ಅನುವಾದಕರಿಂದ, ಪುಟ-213, ಇಸ್ಲಾಮಿ ಕುತುಬ್ ಖಾನ ಲಾಹೋರ್)

ನೀವು ಯಾವುದೇ ಭೂಮಿಯನ್ನು ತೆಗೆದುಕೊಳ್ಳಲು ಬಯಸಿದರೆ, ನೀವು ಅದನ್ನು ಮಸೀದಿಗಳಿಗೆ ತೆಗೆದುಕೊಳ್ಳಬೇಕು. ಉಳಿದ ಭೂಮಿಯು ಅವುಗಳ ಮಾಲೀಕರ ಬಳಿ ಉಳಿಯುತ್ತದೆ. ನಂತರ ಬೈಸಾನ್ ವಿಜಯ: ಶರಹ್‌ಬೀಲ್ ಫಹಲ್ ಯುದ್ಧದಲ್ಲಿ ಜಯಿಸಿ ತನ್ನ ಸೈನ್ಯದೊಂದಿಗೆ ಬೈಸಾನ್ ಕಡೆಗೆ ಹೋಗಿ ಅದನ್ನು ಮುತ್ತಿಗೆ ಹಾಕಿದ ಅದೇ ವೇಳೆ, ಅಬುಲ್ ಅಲ್‌ವರ್ ಮತ್ತು ಅವರ ಜೊತೆ ಕೆಲವು ಬೇರೆ ಸರದಾರರು ತಬರಿಯವನ್ನು ಮುತ್ತಿಗೆ ಹಾಕಿದ್ದರು. ಡಮಸ್ಕಸ್ ಮತ್ತು ಅದರ ನಂತರದ ಯುದ್ಧಗಳಲ್ಲಿ ರೋಮನ್ನರ ಸತತ ಸೋಲುಗಳ ಸುದ್ದಿ ಜೋರ್ದಾನಿನ ಪ್ರದೇಶಗಳಲ್ಲಿ ಹರಡಿತ್ತು. ಆದ್ದರಿಂದ ಶರಹ್‌ಬೀಲ್ ಮತ್ತು ಸಹಲ್ ಬಿನ್ ಅಮ್ರ್ ತಮ್ಮ ಸೈನ್ಯದ ಜೊತೆಗೆ ಬೈಸಾನಿನ ಕಡೆಗೆ ಬರುತ್ತಿರುವುದಾಗಿ ಜನರಿಗೆ ಗೊತ್ತಾದಾಗ ಅವರು ಕೋಟೆಯನ್ನು ಮುಚ್ಚಿದರು. ಶರಹ್‌ಬೀಲ್ ಬೈಸಾನಿಗೆ ತಲುಪಿ ಮುತ್ತಿಗೆ ಹಾಕಿದರು. ಕೆಲವು ದಿನಗಳ ತನಕ ಮುತ್ತಿಗೆ ಜಾರಿಯಲ್ಲಿತ್ತು. ಆದರೆ ಅಲ್ಲಿಯ ಕೆಲವು ಜನರು ಹೋರಾಟಕ್ಕಾಗಿ ಹೊರಗೆ ಬಂದರು. ಮುಸ್ಲಿಮರು ಅವರೊಡನೆ ಯುದ್ಧ ಮಾಡಿ ಕೊನೆಗೊಳಿಸಿದರು. ಉಳಿದ ಜನರು ಸಂಧಾನ ಮಾಡಲು ವಿನಂತಿಸಿದರು. ಅದನ್ನು ಮುಸ್ಲಿಮರು ಡಮಸ್ಕಸಿನ ನಿಬಂಧನೆಯೊಂದಿಗೆ ಅಂಗೀಕರಿಸಿದರು. ಎಂದರೆ, ಡಮಸ್ಕಸ್ ವಿಜಯದ ವೇಳೆ ಮಾಡಲಾದ ಶರತ್ತುಗಳ ಪ್ರಕಾರವೇ ಇದನ್ನೂ ಅಂಗೀಕರಿಸಲಾಯಿತು. (ತಾರೀಖ್ ಅತ್ತಿಬರಿ(ಅನುವಾದ) ಸಂಪುಟ-2, ಭಾಗ-2, ಪುಟ-216, ನಫೀಸ್ ಅಕಾಡಮಿ ಕರಾಚಿ) (ಅಲ್‌ಫಾರೂಖ್, ಶಿಬ್ಲಿ ನುಮಾನಿ, ಪುಟ-114, ದಾರುಲ್ ಇಶಾಅತ್ ಕರಾಚಿ 1991)

ತಬರಿಯದ ಮೇಲಿನ ವಿಜಯ: ಬೈಸಾನ್ ವಿಜಯ ಮತ್ತು ಅದರ ಒಪ್ಪಂದದ ಬಗ್ಗೆ ತಬರಿಯದ ಜನರಿಗೆ ಗೊತ್ತಾದಾಗ ಅವರನ್ನು ಸಹ ಶರಹ್‌ಬೀಲ್‌ರ ಸನ್ನಿಧಿಗೆ ಕೊಂಡುಹೋಗಲು ಅಬಲ್ ಅಲ್‌ವರ್‌ರೊಡನೆ ವಿನಂತಿಸಿದರು. ಅಬುಲ್ ಅಲ್‌ವರ್ ಅದನ್ನು ಅಂಗೀಕರಿಸಿದರು. ಹೀಗೆ ತಬರಿಯದ ಜನರೊಡನೆ ಸಹ ಡಮಸ್ಕಸಿನ ಶರತ್ತುಗಳ ಪ್ರಕಾರ ಸಂಧಾನ ಮಾಡಲಾಯಿತು. ಅದೇ ರೀತಿಯಲ್ಲಿ ಪಟ್ಟಣಗಳ ಮತ್ತು ಸಮೀಪ ಗ್ರಾಮದ ಮನೆಗಳಲ್ಲಿ ಅರ್ಧದಷ್ಟನ್ನು ಮುಸ್ಲಿಮರಿಗಾಗಿ ಖಾಲಿ ಮಾಡಲು ಮತ್ತು ಬಾಕಿ ಅರ್ಧದಲ್ಲಿ ಸ್ವತಃ ರೋಮನ್ನರು ವಾಸಿಸಲು ತೀರ್ಮಾನಿಸಲಾಯಿತು. ಅದೇ ರೀತಿಯಲ್ಲಿ ಪ್ರತಿಯೊಬ್ಬರು ವಾರ್ಷಿಕ ಒಂದು ದೀನಾರ್ ಮತ್ತು ಕೃಷಿ ಉತ್ಪನ್ನಗಳಿಂದ ಒಂದು ನಿರ್ದಿಷ್ಟ ಭಾಗವನ್ನು ಕೊಡಬೇಕೆಂದು ಒಪ್ಪಂದ ಮಾಡಲಾಯಿತು. ಹೀಗೆ ಮುಸ್ಲಿಂ ಸರದಾರರು ಮತ್ತು ಅವರ ಸೈನಿಕರು ಅಲ್ಲಿ ತಂಗಿದರು. ಜೋರ್ದಾನಿನ ಒಪ್ಪಂದ ಸಂಪೂರ್ಣಗೊಂಡಿತು. ಎಲ್ಲ ಸಹಾಯಕ ಸೈನ್ಯಗಳು ಜೋರ್ದಾನಿನ ಪ್ರದೇಶದಲ್ಲಿ ವಿವಿಧ ಸ್ಥಳಗಳಲ್ಲಿ ನೆಲೆಸಿದರು. ವಿಜಯದ ಸುವಾರ್ತೆಯನ್ನು ಹಝ್ರತ್ ಉಮರ್‌ರಿಗೆ(ರ) ತಿಳಿಸಲಾಯಿತು.

(ತಾರೀಖ್ ಅತ್ತಿಬರಿ (ಅನುವಾದ) ಸಂಪುಟ-2, ಭಾಗ-2, ಪುಟ-216-217, ನಫೀಸ್ ಅಕಾಡಮಿ ಕರಾಚಿ)

ಹಿಜರಿ 14ರಲ್ಲಿ ಹಿಮಸ್ ವಿಜಯ: ಅದರ ನಂತರ ಹಝ್ರತ್ ಅಬೂಉಬೈದ(ರ) ಹಿಮಸ್ ಕಡೆಗೆ ಹೋದರು. ಅದು ಸಿರಿಯದ ಪ್ರಸಿದ್ಧ ನಗರವಾಗಿತ್ತು. ಹಿಮಸಿನ ಸಮೀಪ ರೋಮನರು ಸ್ವತಃ ಮುಂದೆ ಬಂದು ಹೋರಾಡಲು ಬಯಸಿ ಯುದ್ಧಕ್ಕಾಗಿ ಮುಂದಾದರು. ಹೀಗೆ ದೊಡ್ಡದಾದ ಒಂದು ಸೈನ್ಯ ಹಿಮಸಿನಿಂದ ಹೊರಟು ಜೋಸಿಯದಲ್ಲಿ ಮುಸ್ಲಿಮರೊಡನೆ ಮುಖಾಮುಖಿಯಾಯಿತು. ಆದರೆ ಅದು ಸೋತು ಹೋಯಿತು. ಹಝ್ರತ್ ಅಬೂಉಬೈದ(ರ) ಮತ್ತು ಹಝ್ರತ್ ಖಾಲಿದ್ ಬಿನ್ ವಲೀದ್ ಹಿಮಸನ್ನು ಸುತ್ತುವರೆದಾಗ ಅವು ತೀವ್ರ ಚಳಿಯ ದಿನಗಳಾಗಿದ್ದುವು. ಮುಸ್ಲಿಂ ಸೈನಿಕರ ಬಳಿ ಚಳಿಯಿಂದ ರಕ್ಷಣೆ ಪಡೆಯಲು ಏನೂ ಇರಲಿಲ್ಲ. ಆದ್ದರಿಂದ ಮುಸ್ಲಿಮರು ಹೆಚ್ಚು ಸಮಯಕ್ಕೆ ತೆರೆದ ಮೈದಾನದಲ್ಲಿ ಯುದ್ಧ ಮಾಡಲಾರರು ಎಂದು ರೋಮನ್ನರಿಗೆ ಭರವಸೆಯಿತ್ತು. ಅದಲ್ಲದೆ ಹರ್ಖಲ್ ಕಡೆಯಿಂದ ಸಹಾಯದ ಪ್ರತೀಕ್ಷೆ ಸಹ ಇತ್ತು. ಹೀಗೆ ಹಿಮಸಿನ ಜನರ ಸಹಾಯಕ್ಕಾಗಿ ಹರ್ಖಲ್ ಒಂದು ಸೈನ್ಯವನ್ನು ಕಳುಹಿಸಿದನು. ಆದರೆ ಇರಾಕಿನಲ್ಲಿ ಸೇನಾಧಿಪತಿಯಾಗಿದ್ದ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಆ ಸೈನ್ಯವನ್ನು ಅಲ್ಲೇ ತಡೆದರು.

(ಅಲ್‌ಫಾರೂಖ್, ಮೌಲಾನ ಶಿಬ್ಲಿ ನುಮಾನಿ, ಪುಟ-118-119, ದಾರುಲ್ ಇಶಾಅತ್ ಕರಾಚಿ 1991) (ಮುಜಮುಲದ ಬಲದಾನ್, ಸಂಪುಟ-02, ಪುಟ-347)

ಚರಿತ್ರೆಗಾರರು ಹೀಗೆ ಬರೆದಿರುವರು: ರೋಮನರ ಕಾಲುಗಳಲ್ಲಿ ಬೂಟಿನೊಳಗೆ ಚರ್ಮದ ಸೋಕ್ಸ್‌ಗಳು ಸಹ ಇದ್ದುವು. ಆದರೂ ಅವರ ಕಾಲುಗಳು ಮರಗಟ್ಟುತ್ತಿದ್ದುವು. ಆದರೆ ಮುಸ್ಲಿಮರ ಸೈನಿಕರ ಕಾಲುಗಳಲ್ಲಿ ಬೂಟುಗಳಲ್ಲದೆ ಬೇರೇನೂ ಇರಲಿಲ್ಲ. (ಸಯ್ಯದುನ ಉಮರ್ ಬಿನ್ ಖತ್ತಾಬ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಮುಹಮ್ಮದ್ ಅಸ್ಸಲಾಬಿ, ಪುಟ-734)

ಹಿಮಸಿನ ಜನರನ್ನು ಸಹಾಯ ಮಾಡುವುದಾಗಿ ವಾಗ್ದಾನ ಮಾಡಿ, ಅವರೊಡನೆ ಯುದ್ಧ ಮಾಡಲು ಧೈರ್ಯಕೊಟ್ಟು ಹರ್ಖಲ್ ಸ್ವತಃ ರುಹಾಗೆ ಹೋದರು. ವಾಗ್ದಾನ ಮಾಡಿ ಸ್ವತಃ ಅಲ್ಲಿಂದ ಪರಾರಿಯಾದನು. ಹಿಮಸಿನ ಜನರು ಕೋಟೆಯ ಬಾಗಿಲುಗಳನ್ನು ಮುಚ್ಚಿ ಕುಳಿತುಕೊಂಡರು. ತೀವ್ರ ಚಳಿಯಿದ್ದ ದಿನಗಳಲ್ಲಿ ಮಾತ್ರ ಅಲ್ಲಿಯ ಜನರು ಮುಸ್ಲಿಮರೊಡನೆ ಯುದ್ಧಕ್ಕಾಗಿ ಹೊರಗೆ ಬರುತ್ತಿದ್ದರು. ಹರ್ಖಲಿನ ಸಹಾಯಕ್ಕಾಗಿ ಕಾಯುತ್ತಿದ್ದರು. ಮುಸ್ಲಿಮರು ಚಳಿಯನ್ನು ತಡೆಯಲಾಗದೆ ಪರಾರಿಯಾಗಲಿ ಎಂದು ಅವರು ಬಯಸುತ್ತಿದ್ದರು. ಆದರೆ ಹಿಮಸಿನ ಜನರು ಮುಸ್ಲಿಮರ ಸ್ಥಿರತೆಯನ್ನು ತೋರಿಸಿದರು ಮತ್ತು ಹರ್ಖಲಿನ ಸಹಾಯ ಕೂಡ ಅವರಿಗೆ ತಲುಪಲಿಲ್ಲ. ಹೀಗೆ ಚಳಿಗಾಲ ಸಹ

ಮುಗಿದುಹೋಯಿತು. ಈಗ ಮುಸ್ಲಿಮರೊಡನೆ ಹೋರಾಡಲು ಸಾಧ್ಯವಲ್ಲವೆಂದು ಅವರಿಗೆ ಗೊತ್ತಾಯಿತು. ಹೀಗೆ ಅವರು ನೋಡಿ ಸಂಧಾನಕ್ಕೆ ಮುಂದಾದರು. ಮುಸ್ಲಿಮರು ಅದನ್ನು ಅಂಗೀಕರಿಸಿದರು. ಪಟ್ಟಣದ ಎಲ್ಲ ಮನೆಗಳನ್ನು ಅಲ್ಲಿಯ ನಿವಾಸಿಗಳಿಗೆಯೇ ಬಿಟ್ಟುಕೊಡಲಾದವು. ಹೀಗೆ ಕಂದಾಯ ಮತ್ತು ಜಿಝ್ಯಿಯದ ನಿಬಂಧನೆಯೊಂದಿಗೆ ಸಂಧಾನವಾಯಿತು. ಎಲ್ಲ ಸಂಗತಿಗಳನ್ನು ಹಝ್ರ್‌ರತ್ ಅಬೂಉಬೈದ(ರ) ಹಝ್ರ್‌ರತ್ ಉಮರ್‌ರಿಗೆ(ರ) ತಿಳಿಸಿದರು. ಆಗ ಹಝ್ರ್‌ರತ್ ಉಮರರ(ರ) ಹೀಗೆ ಆದೇಶ ಬಂತು: ನೀವು ಈಗ ಅಲ್ಲೇ ತಂಗಿರಿ. ಸಿರಿಯದ ಶಕ್ತಿಶಾಲಿ ಅರೇಬಿಯ ಗೋತ್ರಗಳನ್ನು ಒಟ್ಟುಸೇರಿಸು. ನಾನು ಇನ್‌ಶಾ ಅಲ್ಲಾಹ್ ಇಲ್ಲಿಂದ ಸತತವಾಗಿ ಸಹಾಯಕ ಸೈನ್ಯವನ್ನು ಕಳುಹಿಸುತ್ತಿರುವೆನು.

(ಸಯ್ಯದುನಾ ಉಮರ್ ಫಾರೂಖ್ ಅಝಿಮ್, ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–331–332, ಇಸ್ಲಾಮಿ ಕುತುಬ್ ಖಾನ ಲಾಹೋರ್)

ಮರ್ಜುರ್‍ರೂಮಿನ ಘಟನೆ ಅದೇ ವರ್ಷ ನಡೆಯಿತು. ಅದೇನೆಂದರೆ, ಹಝ್ರ್‌ರತ್ ಅಬೂಉಬೈದ ಫಹಲ್‌ನಿಂದ ಹಿಮಸಿಗೆ ಹೋಗಲಿಕ್ಕಾಗಿ ಹಝ್ರ್‌ರತ್ ಖಾಲಿದ್ ಬಿನ್ ವಲೀದ್‌ರೊಂದಿಗೆ ರವಾನೆಯಾದರು. ಎಲ್ಲರೂ ಧುಲ್‌ಕಿಲಾಅ್ ಎಂಬ ಸ್ಥಳದಲ್ಲಿ ತಂಗಿದರು. ಅವರು ತಂಗಿರುವುದಾಗಿ ಹರ್ಖಲಿಗೆ ಮಾಹಿತಿ ಲಭಿಸಿದಾಗ ಅವನು ತೂಝ್ಹುರನನ್ನು ಹೋರಾಟಕ್ಕಾಗಿ ಕಳುಹಿಸಿದನು. ಅವನು ಮರ್ಜುರ್‍ರೂಮಿಗೆ ತಲುಪಿದಾಗ ಶನಸ್ ರೂಮಿ ಸಹ ಅಲ್ಲಿಗೆ ಬಂದನು. ಅವನು ತೂಧ್ಹರನ ಸಮೀಪವೇ ಕುದುರೆ ಸವಾರರೊಂದಿಗೆ ಅಲ್ಲಿ ಡೇರೆ ಹಾಕಿದನು. ಶನಸ್ ಸತ್ಯದಲ್ಲಿ, ತೂಧ್ಹರನ ಸಹಾಯಕ್ಕಾಗಿ ಮತ್ತು ಹಿಮಸ್‌ನ ಜನರನ್ನು ರಕ್ಷಿಸಲು ಬಂದಿದ್ದನು. ಒಂದು ರಾತ್ರಿ ತೂಝ್ಹರ ತನ್ನ ಜಾಗವನ್ನು ಖಾಲಿ ಮಾಡಿ ಅಲ್ಲಿಂದ ರವಾನೆಯಾದಾಗ ಹಝ್ರ್‌ರತ್ ಖಾಲಿದ್(ರ) ಅವನನ್ನು ಹಿಂಬಾಲಿಸಿದರು. ಇನ್ನೊಂದೆಡೆ ಯಝೀದ್ ಬಿನ್ ಅಬೂಸೂಫ್‌ಯಾನಗೆ ತೂಝ್ಹುರನ ಕಾರ್ಯಚರಣೆಯ ಬಗ್ಗೆ ಮಾಹಿತಿ ಲಭಿಸಿದಾಗ ಅವರು ಮುಂದಿನಿಂದ ಅವನ ವಿರುದ್ಧ ಹೋರಾಡಲು ಬಂದರು. ಯುದ್ಧ ಮೈದಾನ ಬಿಸಿಯೇರಿತು. ಇವರ ಮಧ್ಯೆ ಯುದ್ಧ ನಡೆಯುತ್ತಿದ್ದಾಗ ಹಿಂದಿನಿಂದ ಖಾಲಿದ್ ಬಿನ್ ವಲೀದ್‌ರ ಸೈನ್ಯವೂ ಅಲ್ಲಿಗೆ ತಕ್ಕ ಸಮಯಕ್ಕೆ ಬಂತು. ಅವರು ತೂಧ್ಹರರ ಸೈನ್ಯದ ಹಿಂದಿನಿಂದ ಯುದ್ಧ ಗರ್ಜನೆಯನ್ನು ಕೂಗಿದರು. ಹೀಗೆ ಮೃತದೇಹಗಳ ರಾಶಿರಾಶಿಯಾಗಿ ಬಿದ್ದು ಗುಡ್ಡೆಯಾಯಿತು. ಶತ್ರುಗಳು ಮುಂದಿನಿಂದ ಮತ್ತು ಹಿಂದಿನಿಂದ ಕೊಲ್ಲಲ್ಪಟ್ಟರು. ಅವರಲ್ಲಲಿ ಪರಾರಿಯಾದವರು ಮಾತ್ರ ಜೀವಂತವಾಗಿ ಉಳಿದರು. ಮುಸ್ಲಿಮರಿಗೆ ಯುದ್ಧ ಸಂಪತ್ತಾಗಿ ಸವಾರಿ ಮೃಗಗಳು, ಆಯುಧಗಳು, ಬಟ್ಟೆಗಳು ಇತ್ಯಾದಿಗಳು ಲಭಿಸಿದವು. ಅದನ್ನು ಅದನ್ನು ಹಝ್ರ್‌ರತ್ ಯಝೀದ್ ಬಿನ್ ಅಬೂಸೂಫ್‌ಯಾನ್ ತನ್ನ ಮತ್ತು ಹಝ್ರ್‌ರತ್ ಖಾಲಿದ್ ಬಿನ್ ವಲೀದ್‌ರ ಸಿಪಾಯಿಗಳಿಗೆ ವಿತರಿಸಿದರು. ಅನಂತರ ಹಝ್ರ್‌ರತ್ ಯಝೀದ್(ರ) ಡಮಸ್ಕಸ್ ಕಡೆ ರವಾನೆಯಾದರು. ಇಸ್ಲಾಮಿನ ಚರಿತ್ರೆಯಲ್ಲಿ ಕುಪ್ರಸಿದ್ಧನಾದ ಯಝೀದ್ ಮುಆವಿಯರ ಮಗನಾಗಿದ್ದನು. ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಯಝೀದ್ ಅಬೂಸೂಫ್‌ಯಾನಿನ ಮಗನಾದ ಯಝೀದ್ ಬಗ್ಗೆಯಾಗಿದೆ. ಹಝ್ರ್‌ರತ್ ಖಾಲಿದ್ ಬಿನ್ ವಲೀದ್ ಹಝ್ರ್‌ರತ್ ಉಬೈದರ(ರ) ಬಳಿಗೆ ಮರಳಿಹೋದರು. ರೋಮನರ ಸರದಾರನಾದ ತೂಝ್ಹುರನನ್ನು ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ಕೊಂದುಹಾಕಿದ್ದರು. ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ತೂಧ್ಹರನನ್ನು ಹಿಂಬಾಲಿಸುತ್ತಿದ್ದಾಗ ಹಝ್ರ್‌ರತ್ ಅಬೂಉಬೈದ(ರ) ಶನಸ್‌ನ ವಿರುದ್ಧ ಹೋರಾಡಿದರು. ಎರಡೂ ಸೈನ್ಯಗಳು ಮರ್ಜುರ್‍ರೂಮಿನ ವಿರುದ್ಧ ಯುದ್ಧ ನಡೆಸಿದುವು. ಇಸ್ಲಾಮಿನ ಸೈನ್ಯ ಅನೇಕ ಜನರನ್ನು ಕೊಂದುಹಾಕಿದರು. ಹಝ್ರ್‌ರತ್ ಅಬೂಉಬೈದ(ರ) ಶನಸ್‌ನನ್ನು ಕೊಂದುಹಾಕಿದನು. ಮರ್ಜುರ್‍ರೂಂ ಶತ್ರುಗಳ ಶವಶರೀರಗಳಿಂದ ತುಂಬಿತ್ತು. ಆ ಮೃತದೇಹಗಳ ಕಾರಣ ಆ ಸ್ಥಳ ದುರ್ಗಂಧದಿಂದ ಕೂಡಿತ್ತು. ರೋಮನರಲ್ಲಿ ಓಡಿಹೋದವರು ಬಚಾವಾದರು. ಉಳಿದವರಿಗೆ ಮರಣದ ಬಾಯಿಯಿಂದ ರಕ್ಷಣೆ ಪಡೆಯಲು ಸಾಧ್ಯವಾಗಲಿಲ್ಲ. ಮುಸ್ಲಿಮರು ಓಡಿಹೋದವರನ್ನು ಹಿಮಸಿನ ತನಕ ಹಿಂಬಾಲಿಸಿದರು.

(ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ–2, ಪುಟ–321, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ತಾರೀಖ್ ಅತ್ತಿಬರಿ (ಅನುವಾದ) ಸಂಪುಟ–2, ಪುಟ–359–360, ನಫೀಸ್ ಅಕಡಮಿ ಕರಾಚಿ)

ಅನಂತರ ಹಝ್ರ್‌ರತ್ ಅಬೂಉಬೈದ(ರ) ಸೈನ್ಯದೊಂದಿಗೆ ಹಮ್ಮಾದಿನ ಕಡೆಗೆ ರವಾನೆಯಾದರು. ಹಮ್ಮಾದಿನ ಜನರು ಇವರ ಮುಂದೆ ಅನುಸರಣೆಯಿಂದ ತಲೆತಗ್ಗಿಸಿದರು. ಶೆಹ್‌ಝುರ್ ನಿವಾಸಿಗಳಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಸಹ ಹಮ್ಮಾದ್ ನಿವಾಸಿಗಳ ಹಾಗೆಯೇ ಸಂಧಾನ ಮಾಡಿಕೊಂಡರು. ಅನಂತರ ಹಝ್ರ್‌ರತ್ ಅಬೂಉಬೈದ(ರ) ಸಲ್ಮಿಯದ ಮೇಲೆ ವಿಜಯ ಸಾಧಿಸಿದರು. ಅನಂತರ ಸೀರಿಯದ ತೀರ ಪ್ರದೇಶದ ಪಟ್ಟಣವಾದ ಲಾಧ್‌ಖಿಯದ ಮೇಲೆ ವಿಜಯ ಸಾಧಿಸಿದರು.

(ಸಯ್ಯದುನಾ ಉಮರ್ ಫಾರೂಖ್, ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–333, ಇಸ್ಲಾಮಿ ಕುತುಬ್ ಖಾನ ಲಾಹೋರ್) (ಮುಜಮುಲ್ ಬಲದಾನ್, ಸಂಪುಟ–2, ಪುಟ–345) (ಮುಜಮುಲ್ ಬಲದಾನ್, ಸಂಪುಟ–3, ಪುಟ–272)

ಲಾಝ್‌ಖಿಯ ವಿಜಯ ಹಿಜರಿ 14ರಲ್ಲಿ ಉಂಟಾಯಿತು. ಇಸ್ಲಾಮಿನ ಸೈನ್ಯ ಬರುತ್ತಿರುವುದನ್ನು ನೋಡಿದಾಗ ಲಾಝ್‌ಕಿಯದ ಜನರು ಕೋಟೆಯೊಳಗೆ ಪ್ರವೇಶಿಸಿ ಕೋಟೆಯನ್ನು ಮುಚ್ಚಿದರು. ಪಟ್ಟಣದ ಬಾಗಿಲುಗಳನ್ನು ಮುಚ್ಚಿ ಹೋರಾಟಕ್ಕಾಗಿ ತಯಾರಾದರು. ಮುಸ್ಲಿಮರು ಅವರನ್ನು ಸುತ್ತುವರೆದರೂ ಅವರೊಡನೆ ಹೋರಾಡುವ ಶಕ್ತಿಯನ್ನು ಹೊಂದಿದ್ದೇವೆ ಎಂದು ಅವರು ಸಮಾಧಾನಪಟ್ಟಿದ್ದರು. ಅಷ್ಟರಲ್ಲಿ ಸಮುದ್ರ ಮಾರ್ಗದಿಂದ ಹರ್ಖಲಿನ ಸಹಾಯಕ ಸೈನ್ಯವು ಬರುವುದು ಎಂಬ ಭರವಸೆ ಹೊಂದಿದ್ದರು. ಮುಸ್ಲಿಮರು ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಸುರಕ್ಷಾ ವ್ಯವಸ್ಥೆಯ ದೃಷ್ಟಿಯಲ್ಲಿ ಈ ಪಟ್ಟಣ ಬಹಳ ಸುದೃಢವಾಗಿತ್ತು. ಯುದ್ಧತಂತ್ರ ಪ್ರಕಾರ ಹಝ್ರ್‌ರತ್ ಅಬೂಉಬೈದ(ರ) ಗುಹೆರೂಪದ ಹೊಂಡಗಳನ್ನು ಮಾಡಿದರು. ಬೆಳಿಗ್ಗೆಯಾಗುತ್ತಲೇ ಮುತ್ತಿಗೆಯನ್ನು ಕೊನೆಗೊಳಿಸಿದರು. ಮುತ್ತಿಗೆ ಮುಕ್ತಾಯಗೊಂಡಿರುವುದಾಗಿ ಕಂಡು ಪಟ್ಟಣವಾಸಿಗಳು ಬಾಗಿಲುಗಳನ್ನು ತೆರೆದರು. ಹಝ್ರ್‌ರತ್ ಅಬೂಉಬೈದ(ರ) ರಾತ್ರೋರಾತ್ರಿ ತನ್ನ ಸೈನ್ಯ ಸಮೇತ ಮರಳಿ ಬಂದಿದ್ದರು. ಆ ಹೊಂಡಗಳಲ್ಲಿ ಸೈನಿಕರು ಅಡಗಿ ಕುಳಿತಿದ್ದರು. ಬೆಳಿಗ್ಗೆ ಪಟ್ಟಣವಾಸಿಗಳು ಬಾಗಿಲುಗಳನ್ನು ತೆರೆದಾಗ ಮುಸ್ಲಿಮರು ದಾಳಿ ನಡೆಸಿದರು. ಹೀಗೆ ಪಟ್ಟಣದ ಮೇಲೆ ವಿಜಯ ಸಾಧಿಸಲಾಯಿತು. (ಹಝ್ರ್‌ರತ್ ಉಮರ್ ಫಾರೂಖ್ ಅಝಿಮ್, ಮುಹಮ್ಮದ್ ಹುಸೈನ್ ಹೈಕಲ್, ಅನುವಾದ, ಪುಟ–333–334, ಇಸ್ಲಾಮಿ ಕುತುಬ್ ಖಾನ ಲಾಹೋರ್) (ಅಲ್‌ಫಾರೂಖ್ ಶಿಬ್ಲಿ ನುಮಾನಿ, ಪುಟ–118–119, ದಾರುಲ್ ಇಶಾಅತ್ ಕರಾಚಿ 1991)

ನಂತರ ಗೆಲುವು ಕಿನ್ಸಿರಿನ್. ಇದು 15 ಹಿಜರಿಯಲ್ಲಿ ನಡೆಯಿತು. ಹಝ್ರ್‌ರತ್ ಅಬು ಉಬೈದ ಬಿನ್ ಜರಹ್(ರ) ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ರನ್ನು ಹಲಾಬ್ ಪ್ರಾಂತ್ಯದ ಸಮೃದ್ಧ ನಗರವಾಗಿದ್ದ ಕಿನ್ಸಿರಿನ್ ಗೆ ಕಳುಹಿಸಿದರು. ಹಲಪ್‌ಗೆ ಹೋಗುವ ದಾರಿಯಲ್ಲಿ ಪರ್ವತದ ಮಧ್ಯದಲ್ಲಿ ಕಿನ್ಸಿರಿನ್ ಕೋಟೆಯಿತ್ತು. ಹಝ್ರ್‌ರತ್ ಖಾಲಿದ್ ಬಿನ್ ವಲೀದ್(ರ) ಹಾಝಿರ್ ಸ್ಥಳಕ್ಕೆ ಬಂದರು. ಹಾಝಿರ್ ಸಹ ಹಾಲಬ್ ಬಳಿ ಇರುವ ಸ್ಥಳವಾಗಿದೆ, ರೋಮನ್ನರು ಮಿನಾಸ್ ನೇತೃತ್ವದಲ್ಲಿ ನಿಮ್ಮ ವಿರುದ್ಧ ಹೋರಾಡಲು ಎದುರಾದರು. ಹರ್ಕಮ್‌ನ ನಂತರ ಮಿನಾಸ್ ಬಹಳ ಶ್ರೇಷ್ಠ ರೋಮನ್ ಸೇನಾಧಿಪತಿಯಾಗಿದ್ದನು. ಆದಾಗ್ಯೂ, ಸ್ಥಳೀಯರು ಮತ್ತು ಅವರೊಂದಿಗೆ ಅರಬ್ ಕ್ರಿಶ್ಚಿಯನ್ನರನ್ನು ಹೊಂದಿದ್ದರು ಅವರೆಲ್ಲರು ಮುಸ್ಲಿಮರನ್ನು ವಿರೋಧಿಸಿದರು. ಅರಬರು ತಮ್ಮ ನಗರವನ್ನು ರಕ್ಷಿಸಲು ನಗರದ ಹೊರಗೆ ಡೇರೆಗಳನ್ನು ಹಾಕುತ್ತಿದ್ದರು. ಹಾಗಾಗಿ ಆ ಕ್ರಿಶ್ಚಿಯನ್ನರು ಸಹ ಆ ಪದ್ಧತಿಯನ್ನು ಅನುಸರಿಸಿ ನಗರದಿಂದ ಹೊರಗೆ ಹೋಗಿ ತಮ್ಮ ಡೇರೆಗಳನ್ನು ಹಾಕಿದರು. ಭೀಕರ ಯುದ್ಧದ ನಂತರ, ಹಝ್ರ್‌ರತ್ ಖಾಲಿದ್(ರ) ರೋಮನ್ನರ ದೊಡ್ಡ ಸೈನ್ಯವನ್ನು ವಧಿಸಿದರು ಮತ್ತು ಅವರ ಮುಖ್ಯಸ್ಥನಾದ ಮೀನ ಕೂಡ ವಧಿಸಲಯಿತು. ಆ ಪ್ರದೇಶದ ಜನರು ಹಜರತ್ ಖಾಲಿದ್ ಬಿನ್ ವಲೀದ್ ಅವರಿಗೆ ನಮಗೆ ಒತ್ತಾಯಪೂರ್ವಕವಾಗಿ ಈ ಯುದ್ಧದಲ್ಲಿ ಸೇರಿಸಲಾಗಿತ್ತು ಆದ್ದರಿಂದ ನಮಗೆ ಬಿಟ್ಟುಬಿಡಲು ಬೇಡಿಕೊಂಡರು. ಖಾಲಿದ್ ಅವರ ಬೇಡಿಕೆಯನ್ನು ಅಂಗೀಕರಿಸಿದರು.

ಆದರೆ ಕೆಲವು ರೋಮನ್ನರು ಅಲ್ಲಿಂದ ಪರಾರಿಯಾಗಿ ಖಿನ್ನಸರೀನ್‌ನಲ್ಲಿ ಅಭಯ ಪಡೆದರು. ಅಲ್ಲೂ ಬಚಾವು ಆಗುವ ಮಾರ್ಗ ಕಾಣದೆ ಕೆಲವು ದಿನಗಳ ನಂತರ ಸಂಧಾನಕ್ಕೆ ಮುಂದಾದರು. ಆದರೆ ಅವರಿಗೆ ಆಜ್ಞಾಲಂಘನೆಯ ಶಿಕ್ಷೆಯನ್ನು ನೀಡಲು ಹಝ್ರ್‌ರತ್ ಖಾಲಿದ್(ರ) ತೀರ್ಮಾನಿಸಿದರು. ಖಿನ್ನಸರೀನಿನ ನಿವಾಸಿಗಳು ಸಂಪತ್ತು, ಆಸ್ತಿ, ಕುಟುಂಬವನ್ನು ಉಪೇಕ್ಷಿಸಿ ಅಂತಾಕಿಯಗೆ ಓಡಿಹೋದರು. ಹಝ್ರ್‌ರತ್ ಅಬೂಉಬೈದ(ರ) ಅಲ್ಲಿಗೆ ತಲುಪಿದಾಗ ಹಝ್ರ್‌ರತ್ ಖಾಲಿದ್‌ರ(ರ) ತೀರ್ಮಾನವು ನ್ಯಾಯಯುತವಾಗಿತ್ತು ಎಂದು ಹೇಳಿದರು. ಆದರೂ ದಯೆಯಿಂದ ವರ್ತಿಸುತ್ತಾ ಪಟ್ಟಣ ನಿವಾಸಿಗಳಿಗೆ ಅಭಯ ನೀಡಿದರು. ಆಗ ಅಂತಾಕಿಯಗೆ ಪರಾರಿಯಾದ ಜನರು ಕೂಡ ಜಿಝ್ಯಿಯ ಪಾವತಿ ಮಾಡುವುದಾಗಿ ಹೇಳಿ ಮರಳಿ ಬಂದರು.

(ಸಯ್ಯದುನಾ ಉಮರ್ ಫಾರೂಖ್ ಅಝಿಮ್, ಮುಹಮ್ಮದ್ ಹುಸೈನ್ ಹೈಕಲ್ ಅನುವಾದ, ಪುಟ–333 ಯಿಂದ 339, ಇಸ್ಲಾಮಿ ಕುತುಬ್ ಖಾನ ಲಾಹೋರ್) (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–445, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 1987) (ಮುಜಮುಲ್ ಬಲದಾನ್, ಸಂಪುಟ–2, ಪುಟ–238, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅಲ್‌ಫಾರೂಖ್ ನಲ್ಲಿ ಹೀಗೆ ಬರೆಯಲಾಗಿದೆ: ಖಿಸಾರಿಯ ವಿಜಯ ಹಿಜರೀ 15ರಲ್ಲಿ ನಡೆಯಿತು. ಹಿಜರೀ 13ರಲ್ಲಿ ಅಮ್ರ್ ಬಿನ್ ಆಸ್(ರ) ಖಿಸಾರಿಯದ ಮೇಲೆ ದಾಳಿ ನಡೆಸಿದರು ಎಂದು ಅಲ್‌ಫಾರೂಖಿನಲ್ಲಿ ಬರೆಯಲಾಗಿದೆ. ಹಝ್ರ್‌ರತ್ ಅಬೂಉಬೈದರ(ರ) ಮರಣದ ನಂತರ ಹಝ್ರ್‌ರತ್ ಉಮರ್(ರ) ಯಝೀದ್ ಬಿನ್ ಅಬೂಸೂಫ್‌ಯಾನ್‌ರೊಡನೆ ಆಕ್ರಮಣ ನಡೆಸಲು ಆಜ್ಞಾಪಿಸಿದರು. ಅವರು 17 ಸಾವಿರ ಸೈನಿಕರೊಂದಿಗೆ ಮುತ್ತಿಗೆ ನಡೆಸಿದರು. ಆದರೆ ಹಿಜರಿ 18ರಲ್ಲಿ ತನ್ನ ರೋಗದ ಕಾರಣದಿಂದ ಸಹೋದರನಾದ ಅಮೀರ್ ಮುಆವಿಯನನ್ನು ಪ್ರತಿನಿಧಿಯನ್ನಾಗಿ ಮಾಡಿಕೊಂಡು ಡಮಸ್ಕಸಿಗೆ ಹೋದರು. ಅಲ್ಲಿ ಅವರು ನಿಧನರಾದರು.

ಹಝ್ರತ್ ಅಮೀರ್ ಮುಆವಿಯಾ(ರ) ಮುತ್ತಿಗೆಯನ್ನು ಮುಂದುವರೆಸಿದರು. ಅದೇ ಯುದ್ಧದ ವೇಳೆ ಒಂದು ದಿನ ಬದರೀ ಸಹಾಬಿಯಾದ ಹಝ್ರತ್ ಉಬಾದ ಬಿನ್ ಸಾಮಿತ್(ರ) ಮುಸ್ಲಿಮರನ್ನು ಸಂಬೋಧಿಸಿ ಭಾಷಣ ಮಾಡುತ್ತಾ ಹೇಳಿದರು: ಎಲೈ ಮುಸ್ಲಿಮರೇ, ಹಲ್ಲೆ ನಡೆಸಿ ರೋಮನ್ನರನ್ನು ತೊಲಗಿಸಲು ನಿಮ್ಮಿಂದ ಸಾಧ್ಯವಾಗದಿರಲು ಕಾರಣವೇನೆಂದರೆ, ನಿಮ್ಮಲ್ಲಿ ಯಾರೋ ಮೋಸಗಾರನಿದ್ದಾನೆ ಅಥವಾ ಪ್ರಾಮಾಣಿಕನಲ್ಲದವನು ಇದ್ದಾನೆ. ಸತ್ಯಹೃದಯದೊಂದಿಗೆ ಶಹಾದತ್ ಕಲಿಮ ಹೇಳಲು ಅವರು ಎಲ್ಲರೊಡನೆ ಹೇಳಿದರು. ಕೊನೆಗೆ ಒಂದು ದಿನ ರೋಮನ್ನರು ಹೋರಾಟಕ್ಕಾಗಿ ಹೊರಟರು ಮತ್ತು ಸೋಲನ್ನು ಅನುಭವಿಸಿದರು. ಹೀಗೆ ಅಂದು 80 ಸಾವಿರದಿಂದ ಒಂದು ಲಕ್ಷದಷ್ಟು ರೋಮನ್ ಸಿಪಾಯಿಗಳು ಕೊಲ್ಲಲ್ಪಟ್ಟರು.

ಹಝ್ರತ್ ಉಮರರ(ರ) ಖಿಲಾಫತ್ ಕಾಲದ ಪ್ರಸ್ತಾಪ ಮುಂದುವರೆಯುವುದು. ಈಗಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು ಮತ್ತು ಅವರ ಜನಾಝ಼ ಗ್ಹಾಯಿಬ್ ನಿರ್ವಹಿಸುವೆನು ಎಂದು ಹೇಳಿದರು:

ಮೊದಲ ಪ್ರಸ್ತಾಪ ಕೇರಳದ ಮುಬಲ್ಲಿಗ್‌ರಾದ ಸನ್ಮಾನ್ಯ ಮೌಲವಿ ಕೆ. ಮುಹಮ್ಮದ್ ಅಲವಿ ಸಾಹಿಬ್‌ರ ಪತ್ನಿ ಖ಼ದೀಜ ಸಾಹಿಬರು ಕಳೆದ ದಿನಗಳಲ್ಲಿ 80ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆಯಾದ ಕುಂಞಿ ಮುಹ್‌ಯುದ್ದೀನ್ ಸಾಹಿಬ್‌ರು ಕೇರಳದ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ದಿವಂಗತರಿಗೆ ಬಹಳ ಕಿರಿಯ ವಯಸ್ಸಿನಲ್ಲೇ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಲಭಿಸಿತ್ತು. ಬಹಳ ಸಹನೆಯುಳ್ಳ, ಕೃತಜ್ಞತೆಯುಳ್ಳ, ಉಪವಾಸ ಮತ್ತು ನಮಾಝಿನ ಪಾಲನೆ ಮಾಡುವ, ಧರ್ಮಿಷ್ಠೆಯಾದ, ಬಡವರನ್ನು ಸಹಾಯ ಮಾಡುವ, ಅತಿಥಿ ಸತ್ಕಾರ ಮಾಡುವ ಮತ್ತು ಇದ್ದುದರಲ್ಲಿ ತೃಪ್ತಿಪಡುವ ಮಹಿಳೆಯಾಗಿದ್ದರು. ದಿವಂಗತರ ಪತಿ ಮುಬಲ್ಲಿಗ್ ಆಗಿದ್ದರು. ಅನೇಕ ದಿನಗಳು ತಬ್ಲೀಗ್ ಪರ್ಯಟಣೆಗಳ ಕಾರಣ ಹೊರಗೆ ಇರುತ್ತಿದ್ದರು. ಆದರೆ ದಿವಂಗತರು ಯಾವಾಗಲೂ ಕೃತಜ್ಞತೆಯಿಂದ ಇದ್ದರು. ಯಾವುದೇ ದೂರು ಇರಲಿಲ್ಲ. ದಿವಂಗತರು ಒಬ್ಬರು ಪುತ್ರ ಮತ್ತು ಐವರು ಪುತ್ರಿಯರನ್ನು ಅಗಲಿರುವರು. ದಿವಂಗತರು ವಸಿಯ್ಯತ್ ಸಹ ಮಾಡಿದ್ದರು. ಮುಬಲ್ಲಿಗ್ ಆಗಿದ್ದ ಅವರ ಹಿರಿಯ ಪುತ್ರ ಕೆ. ಮಹ್ಮೂದ್ ಅಹ್ಮದ್ ಸಾಹಿಬ್‌ರು 54ನೇ ವಯಸ್ಸಿನಲ್ಲಿ ಕಿಡ್ನಿ ಫೇಲ್ ಆದ ಕಾರಣ ನಿಧನರಾಗಿದ್ದರು. ಅವರ ಕಿರಿಯ ಮಗನೂ ಮುಅಲ್ಲಿಂ ಆಗಿರುವರು ಹಾಗೂ ಐವರು ಪುತ್ರಿಯರು ಮುಬಲ್ಲಿಗರಿಗೆ ವಿವಾಹಗೊಂಡಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌಼ಫಿರತ್‌ನಂದ ವರ್ತಿಸಲಿ.

ಎರಡನೆಯದ್ದಾಗಿ ಅಟಕಿನ ಮಾಜಿ ಜಿಲ್ಲಾ ಅಮೀರ್ ಆದ ಸನ್ಮಾನ್ಯ ಮಲಿಕ್ ಸುಲ್ತಾನ್ ರಶೀದ್ ಸಾಹಿಬ್ ಆಫ್ ಕೋಟ್ ಫತಹ್‌ಖಾ಼ನಿನದ್ದಾಗಿದೆ. ಆಗಸ್ಟ್ 22 ಮತ್ತು 23ರ ರಾತ್ರಿ ನಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರ ತಂದೆಯಾದ ಕರ್ನಲ್ ಮಲಿಕ್ ಸುಲ್ತಾನ್ ಮುಹಮ್ಮದ್ ಖಾ಼ನ್ ಸಾಹಿಬ್‌ರು 23ನೇ ವಯಸ್ಸಿನಲ್ಲಿ 1923ರಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ತನ್ನ ಕುಟುಂಬದಲ್ಲಿ ಏಕ ಅಹ್ಮದಿಯಾಗಿದ್ದರು. ಅನಂತರ ಚೌಧರಿ ಮುಹಮ್ಮದ್ ಫತಹ್ ಅಹ್ಮದ್ ಸಿಯಾಲ್ ಸಾಹಿಬ್‌ರ ಮಗಳೊಂದಿಗೆ ಅವರ ವಿವಾಹ ನಡೆಯಿತು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿವಾಹ ನಡೆಸಿ ಕೊಟ್ಟಿದ್ದರು. ಅವರ ತಾತರ ಹೆಸರು ಮಲಿಕ್ ಸುಲ್ತಾನ್ ಸುರ್‌ಖ಼್‌ರೂಖ಼್ ಎಂದಾಗಿತ್ತು. ಅವರಿಗೆ ಬ್ರಿಟನನ ಅರಸನ ದರ್ಬಾರಿನಲ್ಲಿ ಶ್ರೇಷ್ಠ ಸ್ಥಾನವಿತ್ತು. ಅವರಿಗೆ ಅರಮನೆಯಲ್ಲಿ ಕುಳಿತುಕೊಳ್ಳಲು ಕುರ್ಸಿ ಕೊಡಲಾಗುತ್ತಿತ್ತು. ಅವರಿಗೆ ತನ್ನ ಮಗನಾಧ ಸುಲ್ತಾನ್ ಮುಹಮ್ಮದ್ ಖಾ಼ನ್ ಸಾಹಿಬ್‌ರು ಬೈಅತ್ ಮಾಡಿದ ನಾಲ್ಕು ವರ್ಷಗಳ ನಂತರ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಸಿಕ್ಕಿತ್ತು.

ಮಲಿಕ್ ಸುಲ್ತಾನ್ ರಶೀದ್ ಖಾ಼ನ್ ಸಾಹಿಬ್‌ರು ಜಮಾಅತಿಗೆ ಮಾಡಿದ ಸೇವೆಗಳು ಹೀಗಿವೆ. 1996ರಿಂದ 1999ರ ತನಕ ಮತ್ತು 2005ರಿಂದ 2014ರ ತನಕ ಅಟಕಿನ ಜಿಲ್ಲಾ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ನಿಧನದ ಸಮಯದಲ್ಲೂ ಕೋಟ್ ಫತಹ್ ಖಾ಼ನಿನ ಜಮಾಅತ್ ಸದರ್ ಆಗಿದ್ದರು. ಪಶ್ಚಿಮ ಪಾಕಿಸ್ತಾನದ ಮಾಜಿ ಗವರ್ನರ್  ಮೀರ್ ಮುಹಮ್ಮದ್ ಖಾನ್‌ರ ಸಂಬಂಧಿಕರಾಗಿದ್ದರು. ಆದರೆ ಅದು ಲೌಕಿಕತೆಯಲ್ಲಿ ಮುಳುಗಿದ್ದ ಕುಟುಂಬವಾಗಿತ್ತು. ಅವರ ತಂದೆ ಬೈಅತ್ ಮಾಡಿದ ನಂತರ ಸಂಪೂರ್ಣವಾಗಿ ಭೌತಿಕತೆಯನ್ನು ಬಿಡಲಿಲ್ಲ. ಬದಲಾಗಿ ದೀನಿಗೆ ಭೌತಿಕತೆಯ ಮೇಲೆ ಆದ್ಯತೆ ನೀಡುವವರಾದರು. ಅದೇ ವೈಶಿಷ್ಟ್ಯ ಮಲಿಕ್ ಸುಲ್ತಾನ್ ರಶೀದ್ ಸಾಹಿಬ್‌ರದ್ದಾಗಿತ್ತು. ಅವರು ಮೊದಲು 1/10 ಭಾಗದಷ್ಟು ವಸಿಯ್ಯತ್ ಮಾಡಿದರು. ಅನಂತರ 1/7 ಭಾಗದಷ್ಟು ವಸಿಯ್ಯತ್ ಮಾಡಿದರು. ಅನಂತರ ಸೊತ್ತಿನ 1/10 ಭಾಗದ ವಸಿಯ್ಯತ್ ಸಹ ಪಾವತಿ ಮಾಡಿದರು. ಅವರ ಸಹೋದರಿಯಾದ ರಾಶಿದ ಸಿಯಾಲ್ ಹೇಳುತ್ತಾರೆ: ನಿನ್ನ ತಂದೆ ಅಹ್ಮದಿಯತಿಗಾಗಿ ಒಂದು ತೆರೆದ ಖಡ್ಗವಾಗಿತ್ತು ಮತ್ತು ನಿನ್ನನ ಸಹೋದರರಲ್ಲೂ ಇದೇ ವೈಶಿಷ್ಟ್ಯವನ್ನು ನಾನು ನೋಡುತ್ತೇನೆ ಎಂದು ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್ ನನಗೆ ಪತ್ರ ಬರೆದು ಹೇಳಿದರು. ನನ್ನ ಸಹೋದರನಿಗೆ ಖಿಲಾಫತ್‌ನೊಂದಿಗೆ ಬಹಳ ಆಳವಾದ ಸಂಬಂಧವಿತ್ತು. ಖ಼ಲೀಫತುಲ್ ಮಸೀಹ್‌ರ ಪ್ರತಿಯೊಂದು ಆಜ್ಞೆಯನ್ನು ಬೇಗನೇ ಪಾಲಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ಖಿ಼ಲಾಫತಿನ ವಿಶ್ವಸ್ತ ಸೇವಕರಾಗಿದ್ದರುಕ. ಪೂರ್ಣ ಶ್ರದ್ಧೆಯಿಂದ ಸೇವೆಗಳನ್ನು ಮಾಡುತ್ತಿದ್ದರು. ಆಧ್ಯಾತ್ಮಿಕತೆಯು ಅವರಲ್ಲಿ ತುಂಬಿ ತುಳುಕುತ್ತಿತ್ತು. ಅವರಿಗೆ ಲೌಕಿಕ ಜೀವಿತದೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ಅವರನ್ನು ನೋಡುವ ಎಲ್ಲರಿಗೂ ಅನಿಸುತ್ತಿತ್ತು. ಬಹಳ ಹೆಚ್ಚು ವಿನಯಯುಳ್ಳವರಾಗಿದ್ದರು. ಅಲ್ಲಾಹನೊಂದಿಗೆ ತನ್ನ ಸಂಬಂಧದ ಬಗ್ಗೆ ಹೆಚ್ಚು ಹೇಳುತ್ತಿರಲಿಲ್ಲ. ಆದರೆ ಬಹಳ ಆಳವಾದ ಸಂಬಂಧವಿತ್ತು. ಅವರ ದಿನರಾತ್ರಿ ಎಲ್ಲರಿಗೆ ಬೇಕಾಗಿರು ದುಆಗಳಿಂದ ಕೂಡಿದ್ದಾಗಿತ್ತು. ಅವರ ಸ್ನೇಹಿತರು, ಕುಟುಂಬದವರು ಮತ್ತು ಅನ್ಯರಲ್ಲಿ ಯಾರೂ ಅವರ ಮನೆ ಬಾಗಿಲಿನಿಂದ ಖಾಲಿ ಕೈಗಳೊಂದಿಗೆ ಮರಳಿ ಹೋಗುತ್ತಿರಲಿಲ್ಲ. ಅವರ ಉದಾರತೆಯಿಂದ ಹಲವರು ಅನಾವಶ್ಯಕವಾದ ಪ್ರಯೋಜನವನ್ನು ಪಡೆದಿದ್ದರು.

ಒಬ್ಬಳು ಮಹಿಳೆ ಹೇಳುತ್ತಾಳೆ: ಸುಲ್ತಾನ್ ರಶೀದ್ ಸಾಹಿಬ್‌ರ ಹಣದಿಂದ ಅಡುಗೆ ಮಾಡುತ್ತಿದ್ದ ನಿರ್ಗತಿಕರ ಸ್ಥಿತಿ ಇನ್ನು ಏನಾಗುವುದು? ಅವರು ಎಷ್ಟು ಉದಾರತೆಯನ್ನು ತೋರಿಸುತ್ತಿದ್ದರು ಎಂಬುದರ ಸರಿಯಾದ ಅರಿವು ನಮಗಿಲ್ಲ. ನನ್ನ ಸಹೋದರಿ ಪುತ್ರಿ ಒಂದು ದಿನ ಅವರೊಡನೆ ಹೀಗೆ ಕೇಳಿದರು: ನೀವು ಸೇವೆ ಮಾಡುತ್ತಿರುವ ಜನರು ಮುಂದೆ ನಿಮಗೆ ಬೆಲೆಕೊಡುವರೇ ಮತ್ತು ನೆನಪಿಡುವರೇ? ಅವರು ಹೇಳಿದರು: ನೆನಪಿಡದಿರದಿದ್ದರೆ ಪರವಾಗಿಲ್ಲ. ಅಲ್ಲಾಹನು ನನ್ನೊಂದಿಗೆ ಸಂಪ್ರೀತನಾಗಬೇಕು ಎಂದಾಗಿದೆ ನನ್ನ ಉದ್ದೇಶ. ಅವರ ಸಹೋದರಿ ನಈಮ ಸಾಹಿಬ್ ಹೇಳುತ್ತಾರೆ: ನನ್ನ ಸಹೋದರನಗೆ ತಬ್ಲೀಗ್ ಮಾಡುವ ಬಹಳ ಆವೇಶವಿತ್ತು. ಅನೇಕ ಸೌಭಾಗ್ಯಶಾಲಿಗಳ ಸನ್ಮಾರ್ಗಕ್ಕೆ ಕಾರಣವಾದರು. ಬರುವ ಎಲ್ಲರೊಡನೆ ತಬ್ಲೀಗ್ ಮಾಡುವ ಸನ್ನಿವೇಶವನ್ನು ಉಂಟುಮಾಡುತ್ತಿದ್ದರು. ಅಹ್ಮದಿಯೇತರ ಸಹೋದರರು ಹೆಚ್ಚಾಗಿ ಸಂಜೆಗೆ ಬರುತ್ತಿದ್ದರು. ಗಂಟೆಗಟ್ಟಲೆ ಈಸಾ ಮಸೀಹರ ನಿಧನದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದರಲ್ಲಿ ಅಪಾಯದ ಸಾಧ್ಯತೆಯೂ ಇತ್ತು. ಆರಾಧನೆಯಲ್ಲಿ ಆಸಕ್ತಿ ಮತ್ತು ಅಭಿರುಚಿಯು ವಿಸ್ಮಯಕರವಾಗಿತ್ತು. ಸಾಮಾನ್ಯವಾಗಿ ಕೊಠಡಿಯನ್ನು ಮುಚ್ಚಿ ಏಕಾಂತದಲ್ಲಿ ತನ್ನ ಪ್ರಭುವಿನೊಡನೆ ರಹಸ್ಯವಾಗಿ ಪ್ರಾರ್ಥಿಸುತ್ತಿದ್ದರು. ಅಲ್ಲಾಹನು ಅವರಿಗೆ ಸತ್ಯ ಕನಸು ಮತ್ತು ದಿವ್ಯದರ್ಶನದ ಭಾಗ್ಯವನ್ನು ಸಹ ನೀಡಿದ್ದನು. ಒಂದು ಸಲ ಏಬಿಟಾಬಾದಿನಲ್ಲಿ ಸೆಖೆಗಾಲದಲ್ಲಿ ಹೋದರು. ಅಚಾನಕ್ಕಾಗಿ ಹಣದ ಆವಶ್ಯಕತೆ ಬಂತು. ದುಆವಲ್ಲದೆ ಬೇರೇನೂ ಮಾಡಲು ಸಾಧ್ಯವಿರಲಿಲ್ಲ. ಬೆಳಿಗ್ಗೆ ವಾಯುವಿಹಾರ ನಡೆಸುತ್ತಾ ಮರಗಳ ನಡುವಿನಿಂದ ಸಾಗುತ್ತಿದ್ದಾಗ ಉಚ್ಚ ಮತ್ತು ಸ್ಪಷ್ಟವಾದ ಒಂದು ಶಬ್ಧ ಕೇಳಿಬಂತು. ಲಾ ತಖ್‌ನತೂ ಮಿನ್‌ರಹ್ಮತಿಲ್ಲಾಹ್. ಅಲ್ಲಾಹನ ಕಾರುಣ್ಯದ ಬಗ್ಗೆ ನಿರಾಶೆಪಡಬೇಡ.

ಅಟಕ್ ಜಿಲ್ಲೆಯ ಮಾಜಿ ಅಮೀರ್ ಆದ ಝುಬೇರಿ ಸಾಹಿಬ್‌ರ ಪತ್ನಿ ಹೇಳುತ್ತಾರೆ: ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರ ಕಾಲದಲ್ಲಿ ಜಿಲ್ಲಾ ಮೀಟಿಂಗಿಗಾಗಿ ಅವರ ಬಳಿ ರಶೀದ್ ಸಾಹಿಬ್‌ರು ತಂಗಿದ್ದರು. ಅವರು ಸ್ವಲ್ಪ ಚಿಂತಿತರಾಗಿದ್ದರು ಎಂದು ಮುಖ ನೋಡುವಾಗ ಅನಿಸುತ್ತಿತ್ತು. ಕಾರಣವನ್ನು ಕೇಳಿದಾಗ ಅವರು ಹೇಳಿದರು: ಒಂದು ಭಾಷಣವನ್ನು ಮಾಡಲಿಕ್ಕಿದೆ. ಆದರೆ ಅದರ ತಯಾರಿ ಅಲ್ಪವೂ ಮಾಡಲಾಗಲಿಲ್ಲ. ಮರುದಿನ ಬೆಳಿಗ್ಗೆ ಅವರು ಬಹಳ ಸಂತೋಷದಲ್ಲಿದ್ದರು. ಉಪಹಾರ ಮಾಡುವಾಗ ಹೇಳಿದರು: ರಾತ್ರಿ ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್) ಕನಸಿನಲ್ಲಿ ಬಂದು ಸಂಪೂರ್ಣ ಭಾಷಣವನ್ನು ಸ್ವಲ್ಪ ಸಮಯದಲ್ಲೇ ಬರೆಯಿಸಿದರು. ಅಲ್‌ಹಮ್ದುಲಿಲ್ಲಾಹ್ ಈಗ ನನ್ನ ಭಾಷಣದ ತಯಾರಿಯಾಗಿದೆ. ಅಲ್ಲಾಹನ ಮೇಲೆ ಭರವಸೆಯ ಅವರ ಸ್ಥಿತಿಯೇನಾಗಿತ್ತು ಎಂದರೆ, ಗ್ರಾಮದಲ್ಲಿ ಏಕಾಂತವಾದ ಅಹ್ಮದಿ ಮನೆಯಲ್ಲಿ ಪೂರ್ಣ ಮನಸ್ಸಮಾಧಾನದಿಂದ ವರ್ಷಗಟ್ಟಲೆ ಜೀವನವನ್ನು ಸಾಗಿಸಿದರು. ಯಾವುದೇ ಭಯ ಅಥವಾ ಹೆದರಿಕೆ ಅವರಿಗೆ ಇರಲಿಲ್ಲ. ಅಪರಿಮಿತವಾದ ಧೈರ್ಯಶಾಲಿಯಾಗಿದ್ದರು. ಅಲ್ಲಾಹನ ಆಜ್ಞೆಯಿಲ್ಲದೆ ಒಂದು ಎಲೆ ಸಹ ಬೀಳುವುದಿಲ್ಲ. ಎಲ್ಲ ರೀತಿಯ ಜ್ಞಾನಪರವಾದ ಮಾತುಕತೆಯಲ್ಲಿ ನಿಪುಣರಾಗಿದ್ದರು. ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಅನೇಕ ಬಾರಿ ಓದಿದ್ದರು. ಬಹಳಷ್ಟು ವಿಶಿಷ್ಟ ಗುಣಗಳನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಮಾಶಾ ಅಲ್ಲಾಹ್. ಉಪವಾಸ, ನಮಾಝ಼್ ತಹಜ್ಜುದ್ ನಮಾಝ಼್ ನಿರ್ವಹಿಸುವ, ದುಆ ಮಾಡುವ, ವಿವೇಕಯುತವಾಗಿ ಮಾತನಾಡುವ ವ್ಯಕ್ತಿಯಾಗಿದ್ದರು. ಪ್ರತಿಯೊಂದು ಮಾತನ್ನು ತಬ್ಲೀಗ್‌ನೊಂದಿಗೆ ಕೊನೆಗೊಳಿಸುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮೂರನೆಯದ್ದಾಗಿ ಇಂಡೋನೇಶಿಯದ ಅಬ್ದುಲ್‌ಖಯ್ಯೂಮ್ ಸಾಹಿಬ್‌ರದ್ದಾಗಿದೆ. ಆಗಸ್ಟ್ 25ರಂದು 82ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಭಾರತ ಮತ್ತು ಪಾಕಿಸ್ತಾನದವರಲ್ಲದ ಮೊದಲ ಮುಬಲ್ಲಿಗ್ ಆದ ಮೌಲಾನ ಅಬ್ದುಲ್ ವಾಹಿದ್

ಸಾಹಿಬ್ ಸಮಾಟರಿಯ ಮಗನಾಗಿದ್ದರು. ಇಂಡೋನೇಶ್ಯದ ಪ್ರಸಿದ್ಧ ಟೆಕ್ನಿಕಲ್ ಸ್ಕೂಲಿನಿಂದ ಅವರು ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ಬ್ಯಾಚಲರ್ ಡಿಗ್ರಿಯನ್ನು ಪಡೆದರು. ಅನಂತರ ಸರ್ಕಾರಿ ಸ್ಕಾಲರ್‌ಶಿಪ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಫ್ರಾನ್ಸಿಗೆ ಹೋದರು. ಪೆಟ್ರೋಲಿಯಂ ಇಕ್ನೋಮಿಕ್ಸ್‌ನಲ್ಲಿ ಅವರು ಮಾಸ್ಟರ್ ಡಿಗ್ರಿ ಪಡೆದರು. ಅನಂತರ ಮಿನಿಸ್ಟ್ರಿ ಆಫ್ ಎನರ್ಜಿ ಮತ್ತು ಮಿನರಲ್ ಸೋರ್ಸಸ್‌ನಲ್ಲಿ ನೌಕರಿ ಮಾಡಿದರು. ಅಲ್ಲಿ ಅನೇಕ ಹುದ್ದೆಗಳಲ್ಲಿ ಇದ್ದರು. ನಿವೃತ್ತರಾದ ನಂತರವೂ ಅವರ ಫೀಲ್ಡಿನ ಪರಿಣಿತರೆಂಬ ನೆಲೆಯಲ್ಲಿ ಅವರಿಂದ ಸಹಾಯ ಪಡೆಯಲಾಗುತ್ತಿತ್ತು. ಅನಂತರ 73ನೇ ವಯಸ್ಸಿನಲ್ಲಿ ಬಹಳ ಪರಿಶ್ರಮದಿಂದ ಅವರು ಯೂನಿವರ್ಸಿಟಿ ಆಫ್ ಇಂಡೋನೇಶಿಯದಿಂದ ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ಪಿ.ಎಚ್.ಡಿ.ಯ ಡಿಗ್ರಿ ಪಡೆದರು. ದಿವಂಗತರು ತನ್ನ ದೇಶಕ್ಕಾಗಿಯೂ ಶ್ರೇಷ್ಠ ಸೇವೆಗಳನ್ನು ಮಾಡಿದ್ದರು. 1973ರಲ್ಲಿ ಅವರು ಗವರ್ನಮೆಂಟಿಗೆ ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್‌ನ ಒಂದು ಫಾರ್ಮುಲ ಬಗ್ಗೆ ಸಲಹೆ ನೀಡಿದರು. ಹೀಗೆ 1973ರಿಂದ 2000ದ ವರೆಗೆ ಸರ್ಕಾರಕ್ಕೆ ಈ ಕಾರಣದಿಂದ ನೂರಹತ್ತು ಬಿಲಿಯನ್ ಡಾಲರ್‌ನ ಲಾಭ ಉಂಟಾಯಿತು. ಅಹ್ಮದಿಯರು ಎಲ್ಲ ಜಾಗದಲ್ಲೂ ದೇಶ ಮತ್ತು ಸಮುದಾಯಕ್ಕಾಗಿ ಸದಾ ಸೇವೆ ಮಾಡಲು ತಯಾರಿರುತ್ತಾರೆ. ಆದರೂ ಇಂಡೋನೇಶಿಯದಲ್ಲೂ ಮುಲ್ಲಾಗಳ ಪ್ರಭಾವದಿಂದ ಕೆಲವು ಪ್ರದೇಶಗಳಲ್ಲಿ ಅಹ್ಮದಿಯ್ಯತ್ ವಿರುದ್ಧ ಬಹಳ ವಿರೋಧವಿರುತ್ತದೆ. ಆದರೂ ದೇಶಕ್ಕೆ ನಿಷ್ಠಾವಂತರಾಗಿರುವುದು ನಮ್ಮ ಕೆಲಸವಾಗಿದೆ. ಅವರಿಗೆ ಸಿವಿಲ್ ಸರ್ವೆಂಟಿಗಾಗಿ ದೇಶದ ಅತ್ಯಂತ ಶ್ರೇಷ್ಠ ಅವಾರ್ಡ್ ಸಹ ಲಭಿಸಿತ್ತು. 2005ರಲ್ಲಿ ಅವರಿಗೆ ಎರಡನೇ ದೊಡ್ಡ ಪದಕ ಸಹ ಸಿಕ್ಕಿತ್ತು. ಅದು ಇಂಡೋನೇಶ್ಯದಲ್ಲಿ ಸೈನ್ಯದ ಹೊರಗೆ ಇರುವ ವಿಭಾಗಗಳಲ್ಲಿ ಶ್ರೇಷ್ಠ ಕೆಲಸಗಳನ್ನು ಮಾಡಿರುವ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಆ ದೇಶದ ಹೀರೋಗಳನ್ನು ಮಿಲಿಟರಿ ಸೆರಮನಿ ನಡೆಯುವ ಒಂದು ಖಬರಿಸ್ತಾನದಲ್ಲಿ ದಫನ್ ಮಾಡಲಾಗುತ್ತದೆ.

ಹೇಗಿದ್ದರೂ ಅವರು ಅಲ್ಲಿ ದಫನ್ ಮಾಡಲ್ಪಡುವುದನ್ನು ಇಷ್ಟಪಟ್ಟಿರಲಿಲ್ಲ. ಆದ್ದರಿಂದ ಅವರು ನಿಧನರಾದಾಗ ಅವರ ಮಿಲಿಟರಿ ಸೆರಮನಿ ಮಖ್‌ಬರ ಮೂಸಿಯಾನ್ ಪ್ರೋವೆಹ್‌ನಲ್ಲಿ ಜರುಗಿತು. ಅವರನ್ನು ಆದರಾಂಜಲಿಯೊಂದಿಗೆ ದಫನ್ ಮಾಡಲಾಯಿತು. ಬಹಳ ಪ್ರೀತಿಸುವವರಾಗಿದ್ದರು. ತನ್ನ ಸಹೋದರ ಸಹೋದರಿಯರ ಬಹಳ ಕಾಳಜಿ ವಹಿಸುತ್ತಿದ್ದರು. ಸಹೋದರ ಸಹೋದರಿಯ ಕಾಳಜಿ ವಹಿಸಲು ಅವರ ತಂದೆ ಅವರನ್ನು ಉಪದೇಶಿಸಿದ್ದರು. ಅದರ ಪ್ರಕಾರ ಅವರು ಸದಾ ನಡೆದರು. ದಿವಂಗತರು ಮುರಬ್ಬಿಗಳನ್ನು ಮತ್ತು ವಖ್ಫೇ ಝಿಂದಗಿಯರನ್ನು ಬಹಳ ಗೌರವಿಸುತ್ತಿದ್ದರು. ಅವರ ಕಿರಿಯ ಸಹೋದರನಾದ ಬಾಸಿತ್ ಸಾಹಿಬ್ ಮುರಬ್ಬಿ ಮತ್ತು ಇಂಡೋನೇಶಿಯದ ಜಮಾಅತ್ ಅಮೀರ್ ಆಗಿರುವರು. ತನ್ನ ಅಡಿಯಲ್ಲಿ ಕೆಲಸ ಮಾಡುವವರೊಡನೆ ಉತ್ತಮವಾಗಿ ವರ್ತಿಸುತ್ತಿದ್ದರು. ಅವರ ಕೆಳಗೆ ಕೆಲಸ ಮಾಡುವ ಒಬ್ಬರು ಹೇಳುತ್ತಾರೆ; 9ನೇ ವಯಸ್ಸಿನಿಂದ ನಾನು ದಿವಂಗತರ ಸಂರಕ್ಷಣೆಯಲ್ಲಿ ಇದ್ದೆ. ಸ್ಕೂಲ್ ಫೀಸ್ ಇತ್ಯಾದಿಗಳನ್ನು ಅವರು ಪಾವತಿ ಮಾಡುತ್ತಿದ್ದರು. ಅವರ ಉತ್ತಮ ವರ್ತನೆಯ ಕಾರಣದಿಂದ ಹಝ್ರತ್ ಮಸೀಹ್ ಮೌಊದ್‌ರ ಗ್ರಂಥಗಳನ್ನು ಓದಿದ ನಂತರ ನಾನೂ ಬೈಅತ್ ಮಾಡಿದೆ. ಅವರಲ್ಲಿ ಕರುಣೆ ಮತ್ತು ಉದಾರತೆ ಬಹಳ ಉನ್ನತ ಮಟ್ಟದಲ್ಲಿ ಇದ್ದುವು. ಸದಾ ಜನರೊಡನೆ ಸಮಾನವಾಗಿ ವರ್ತಿಸುತ್ತಿದ್ದರು. ಎಂದಿಗೂ ತನ್ನ ಬಗ್ಗೆ ಅಥವಾ ತನ್ನ ಹುದ್ದೆಯ ಬಗ್ಗೆ ಹೆಮ್ಮೆಪಡುತ್ತಿರಲಿಲ್ಲ. ಅವರ ಒಂದು ಸರ್ಕಾರಿ ಗ್ಯಾಸ್ ಕಂಪೆನಿಯಲ್ಲಿ ಇದ್ದ ಒಬ್ಬ ನೌಕರ ಹೇಳುತ್ತಾರೆ: ಬಹಳ ಬುದ್ಧಿವಂತ, ಸ್ಥೈರ್ಯವಂತ ಮತ್ತು ಪರಿಶ್ರಮಿಯಾಗಿದ್ದರು. ದಿವಂಗತರು ಬಹಳ ಪ್ರಸಿದ್ಧರೂ ಆಫಿಸರೂ ಆಗಿದ್ದರು. ಹೀಗಿದ್ದರೂ ಬಹಳ ವಿನಯವಂತರಾಗಿದ್ದರು. ದಿವಂಗತರಿಗೆ ಖಿಲಾಫತ್ ಮತ್ತು ಜಮಾಅತಿನೊಂದಿಗೆ ಅತ್ಯಂತ ಪ್ರೀತಿಯಿತ್ತು. ಜಮಾಅತಿಗಾಗಿ ತ್ಯಾಗದ ಆವಶ್ಯ ಬರುವಾಗ ಅಥವಾ ಏನಾದರೂ ಕಷ್ಟತೆ ಬರುವಾಗ ಯಾವಾಗಲೂ ಅತ್ಯಂತ ಶುದ್ಧ ಹೃದಯದಿಂದ ಸಹಾಯ ಮಾಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್‌ರು ಇಂಡೋನೇಶಿಯಗೆ ಹೋದಾಗ ಅವರು ದಿವಂಗತರ ಮನೆಯಲ್ಲೇ ತಂಗಿದ್ದರು. ಸರ್ಕಾರಿ ನೌಕರನೆಂಬ ನೆಲೆಯಲ್ಲಿ ಕೆಲಸಮಾಡುವಾಗ ಅವರು ಅಹ್ಮದಿಯಾಗಿರುವರು ಎಂಬ ಸಂಗತಿಯನ್ನು ಎಂದಿಗೂ ರಹಸ್ಯವಾಗಿ ಇಟ್ಟಿರಲಿಲ್ಲ. ನಂತರ ಕಾಲದಲ್ಲೂ. ನಂತರ ಇಂಡೋನೇಶಿಯದಲ್ಲಿ ಬಹಳ ವಿರೋಧ ಶುರುವಾಗಿತ್ತು. ಆದರೆ ಅಹ್ಮದಿಯಾಗಿರುವರು ಎಂಬುದನ್ನು ರಹಸ್ಯವಾಗಿ ಇಡಲಿಲ್ಲ. ತನ್ನ ಸ್ನೇಹಿತರಿಗೆ ತಬ್ಲೀಗ್ ಮಾಡಲು ಸನ್ನದ್ಧರಾಗಿದ್ದರು. ಒಬ್ಬ ಪ್ರಸಿದ್ಧ ಅಹ್ಮದಿ ವ್ಯಕ್ತಿಯೆಂಬ ನೆಲೆಯಲ್ಲಿ ಅರಿಯಲ್ಪಡುತ್ತಿದ್ದರು. ಒಂದು ಸಲ ವಿದ್ಯುತ್ ಕಂಪೆನಿಯ ಸಿ.ಐ.ಒ. ಪ್ರಧಾನಿಯೊಡನೆ ಹೇಳಿದರು: ಡ್ಯಾಮಿನಲ್ಲಿ ನೀರು ಕಡಿಮೆಯಾಗುತ್ತಿದೆ. ಇದೇ ಸ್ಥಿತಿ ಸ್ವಲ ಕಾಲ ಮುಂದುವರೆದರೆ ವಿದ್ಯುತ್ತನ್ನು ಬಂದ್ ಮಾಡಬೇಕಾಗುವುದು. ಮಿನಿಸ್ಟರ್ ಸಾಹಿಬ್‌ರಿಗೆ ದುಆದ ಮೇಲೆ ಸ್ವಲ್ಪ ವಿಶ್ವಾಸವಿತ್ತು. ಖಯ್ಯೂಂ ಸಾಹಿಬ್‌ರ ಬಳಿಗೆ ಹೋಗಲು ಹೇಳಿದರು. ಖಯ್ಯೂಂ ಸಾಹಿಬ್‌ರ ಬಳಿಗೆ ಅವರು ಸಹಾಯಕ್ಕಾಗಿ ಬಂದಾಗ ಖಯ್ಯೂಂ ಸಾಹಿಬ್‌ರು ಹೇಳಿದರು: ಸರಿ, ನನ್ನಿಂದ ಸಹಾಯಪಡೆಯಬೇಕು ಎಂದಾದರೆ, ನನ್ನ ಮೂಲಕ ನಮ್ಮ ಇಮಾಮಾದ ಹಝ್ರತ್ ಖಲೀಫತುಲ್ ಮಸೀಹ್‌ರಿಗೆ ಪತ್ರವನ್ನು ಬರೆಯಿರಿ. ಹೀಗೆ ಪತ್ರ ಬರೆಯಲಾಯಿತು. ಮಂಗಳವಾರ ಪತ್ರವನ್ನು ಬರೆದುಕೊಟ್ಟಿದ್ದರು, ಮರುದಿನವೇ ಧಾರಾಕಾರವಾಗಿ ಮಳೆ ಬಂದು ಡ್ಯಾಮ್ ತುಂಬಿತು.

ಜಮಾಅತಿಗಾಗಿ ಅವರ ಸೇವೆಗಳು ಹೀಗಿವೆ: ಪಾರೂನಿನಲ್ಲಿ ಹೆಡ್‌ಕ್ವಾರ್ಟರ್ ಕೋಂಪ್ಲೆಕ್ಸ್ ನಿರ್ಮಾಣದಲ್ಲಿ ಸಾಂಪತ್ತಿಕವಾದ ಅನೇಕ ಅಡೆತಡೆಗಳಿದ್ದುವು. ಆಗಿನ ರಈಸುತ್ತಬ್ಲೀಗಾಧ ಮಹ್ಮೂದ್ ಚೀಮ ಸಾಹಿಬ್‌ರು ಅದರ ಬಗ್ಗೆ ಅವರೊಡನೆ ಹೇಳಿದರು. ಅವರು ಹೇಳಿದರು: ಚಿಂತಿಸಬೇಡಿರಿ, ಎಲ್ಲ ಖರ್ಚುಗಳನ್ನು ನಾನು ವಹಿಸುವೆನು. ಹೀಗೆ ಪೂರ್ಣ ಖರ್ಚನ್ನು ಸ್ವತಃ ವಹಿಸಿದರು. ಎರಡು ವರ್ಷಗಳೊಳಗೆ ಒಂದು ದೊಡ್ಡ ಮಸೀದಿ ಅಲ್ಲಿ ನಿರ್ಮಾಣವಾಯಿತು. ಮರ್ಕಝಿ ಗೆಸ್ಟ್ ಹೌಸ್ ಮತ್ತು ಮುಬಲ್ಲಿಗರ ಕ್ವಾರ್ಟರಿನ ನಿರ್ಮಾಣದ ಹೆಚ್ಚಿನ ಭಾಗದ ಖರ್ಚುಗಳನ್ನು ಅವರು ವಹಿಸಕೊಂಡರು. ನಾಲ್ಕು ಕ್ವಾರ್ಟರ್‌ಗಳ ಶೇಕಡ ನೂರರಷ್ಟು ನಿರ್ಮಾಣ ಖರ್ಚು ದಿವಂಗತರ ಕಡೆಯಿಂದ ಆಗಿತ್ತು. ಎಂ.ಟಿ.ಎ. ಇಂಡೋನೇಶಿಯದ ಆರಂಭಿಕ ದಿನಗಳಲ್ಲಿ ಹೆಚ್ಚು ಕಮ್ಮಿ ಎಲ್ಲ ಖರ್ಚುಗಳನ್ನು ದಿವಂಗತರು ಮತ್ತು ಅವರ ಪತ್ನಿ ವಹಿಸಿಕೊಂಡಿದ್ದರು. ಪಶ್ಚಿಮ ಜಕಾರ್ತದಲ್ಲಿ ಸ್ಟೂಡಿಯೋಗಾಗಿ ಅವರ ಮನೆಯನ್ನು ಉಪಯೋಗಿಸಲಾಗುತ್ತಿತ್ತು. ಸ್ವಯಂ ಸೇವಕರ ಅಲವನ್ಸ್‌ನ ಪಾವತಿಯ ಖರ್ಚುಗಳು ಸಹ ದಿವಂಗತರ ವತಿಯಿಂದ ಆಗಿದ್ದುವು. ಇಂಡೋನೇಶಿಯದಲ್ಲಿ ಹೋಮಿಯೋಪತಿಯ ಆರಂಭಿಕ ದಿನಗಳಲ್ಲಿ ಮದ್ದುಗಳಿಂದ ಹಿಡಿದು ಕ್ಲಿನಿಕಿನ ಜಾಗ ಸಮೇತ ಎಲ್ಲ ಖರ್ಚುಗಳನ್ನು ದಿವಂಗತರ ಕುಟುಂಬ ವಹಿಸಿಕೊಂಡಿದುವು. ವಾಹಿದ್ ಸೀನಿಯರ್ ಹೈಸ್ಕೂಲಿನ ನಿರ್ಮಾಣದ ಆರಂಭಿಕ ಖರ್ಚುಗಳ ಹೆಚ್ಚಿನ ದೇನಿಗೆ ಅವರ ಕುಟುಂಬದಿಂದ ಬಂದಿತ್ತು. ಖಾದಿಯಾನಿನಲ್ಲಿ ನಿರ್ಮಾಣವಾಗುತ್ತಿರುವ ಸರಾಯೇ ಅಯ್ಯೂಬ್ ಎಂಬ ಇಂಡೋನೇಶಿಯ ಗೆಸ್ಟ್ ಹೌಸಿಗಾಗಿಯೂ ಅವರು ಬಹಳ ಧನತ್ಯಾಗ ಮಾಡಿರುವರು. ದಿವಂಗತರು ಮರ್ಕಝಿನ ಸಮೀಪ ಸಾಕಷ್ಟು ಭೂಸ್ವತ್ತನ್ನು ಖರೀದಿ ಮಾಡಿಕೊಂಡು ನಿವಾಸಕ್ಕಾಗಿ ಜಮಾಅತಿಗೆ ನೀಡಿದರು. ಇಂಡೋನೇಶಿಯ ಜಾಮಿಅದ ಪ್ರಿನ್ಸಿಪಲ್ ಆದ ಮಾಸೂಂ ಅಹ್ಮದ್ ಸಾಹಿಬ್‌ರು ಬರೆಯುತ್ತಾರೆ: ಕೆಲವೊಮ್ಮೆ ಆಮಿಲ ಮೀಟಿಂಗಿನಲ್ಲಿ ದೀರ್ಘ ಸಮಯದ ಚರ್ಚೆ ನಡೆಯುತ್ತಿತ್ತು. ಆದರೆ ಅವರ ಕಿರಿಯ ಸಹೋದರನೂ ಆಗಿರುವ ಅಮೀರ್ ಸಾಹಿಬ್‌ರು ಚರ್ಚೆಯನ್ನು ಕೊನೆಗೊಳಿಸಲು ಹೇಳಿದರೆ, ಬೇಗನೇ ಸುಮ್ಮನಾಗುತ್ತಿದ್ದರು. ಹೆಚ್ಚಿನ ಅಭಿಪ್ರಾಯಗಳನ್ನು ನೀಡುತ್ತಿರಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ನಾಲ್ಕನೆಯದ್ದಾಗಿ ಬೆನಿನಿನ ದಾವೂದ ರಝ್ಝಾಕಿ ಯೂನುಸ್ ಸಾಹಿಬ್‌ರದ್ದಾಗಿದೆ. ಆಗಸ್ಟ್ 27ರಂದು 74ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಬೆನಿನಿನ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ತನ್ನ ಮನೆಯ ಏಕ ಅಹ್ಮದಿಯಾಗಿದ್ದರು. 1967ರಲ್ಲಿ ಬೆನಿನಿನ ಮೊದಲ ಅಹ್ಮದಿಯೂ ಅವರ ಸಹೋದರನೂ ಆದ ಧಿಕ್ರುಲ್ಲಾಹ್ ದಾವೂದ್ ಸಾಹಿಬ್‌ರ ಮೂಲಕ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಅವರ ಪತ್ನಿ ಮತ್ತು ಮಕ್ಕಳು ಅಹ್ಮದಿಯರಲ್ಲ. ಅಲ್ಲಾಹನು ಅವರಿಗೂ ಈ ಸೌಭಾಗ್ಯ ನೀಡಲಿ.

ಮಿಶನರಿ ಇಂಚಾರ್ಜ್ ಆದ ಮಿಯಾ ಖಮರ್ ಅಹ್ಮದ್ ಸಾಹಿಬ್‌ರು ಬರೆಯುತ್ತಾರೆ: ಅವರು ನಿಧನರಾಗುವ ಸ್ವಲ್ಪ ದಿನಗಳ ಮುಂಚೆ ತನ್ನ ಅಹ್ಮದಿಯ್ಯತ್ ಸ್ವೀಕಾರದ ಘಟನೆಯನ್ನು ಹೀಗೆ ವಿವರಿಸಿದ್ದರು: ನೈಜೀರಿಯದಲ್ಲಿರುವ ನನ್ನ ಹಿರಿಯ ಸಹೋದರನಾದ ಧಿಕ್ರುಲ್ಲಾಹ್ ದಾಊದ್ ಸಾಹಿಬ್ ಅಹ್ಮದಿಯಾದ ಸುದ್ದಿ ನನಗೆ ಲಭಿಸಿತು. ಅದರೊಂದಿಗೆ ಅಹ್ಮದಿಯ್ಯತ್ ಬಗ್ಗೆ ಅಲ್ಲಸಲ್ಲದ ಮಾತುಗಳನ್ನು ಸಹ ಕೇಳಿದೆ. ಆದ್ದರಿಂದ ನಾನು ಅವರನ್ನು ಭೇಟಿಯಾಗಲು ಹೋದೆ. ಅವರು ಅಲೈಸಲ್ಲಾಹು ಎಂದು ಕೆತ್ತಿರುವ ಉಂಗುರವನ್ನು ಹಾಕಿರುವುದನ್ನು ಕಂಡೆನು. ಈ ಉಂಗುರವನ್ನು ಏಕೆ ಬೆರಳಲ್ಲಿ ಹಾಕಿದ್ದೀರಿ, ನಿಮ್ಮ ಧರ್ಮದಲ್ಲಿ ಅದಕ್ಕೆ ಯಾವ ಪ್ರಾಮುಖ್ಯತೆ ಇದೆ ಎಂದು ನಾನು ಬೇಗನೇ ಸಹೋದರನೊಡನೆ ಕೇಳಿದೆ. ಆಗ ಅವರು ಹೇಳಿದರು: ಇದರಲ್ಲಿ ಪವಿತ್ರ ಖುರ್‌ಆನಿನ ವಚನವನ್ನು ಬರೆಯಲಾಗಿದೆ. ಅದರ ಅರ್ಥವೇನೆಂದರೆ, ಅಲ್ಲಾಹನು ತನ್ನ ದಾಸನಿಗೆ ಸಾಕಾಗಲಾರನೇ? ಎಂದಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗ್ಝುಲಾಂ ಅಹ್ಮದ್ ಅಲೈಹಿಸ್ಸಲಾಂ ನಮಗೆ ಇದನ್ನೇ ಕಲಿಸಿಕೊಟ್ಟಿರುವರು. ಅನಂತರ ನಾನು ಸಹೋದರನೊಡನೆ ಕೇಳಿದೆ: ಅಹ್ಮದಿಯ್ಯತ್ ಮತ್ತು ಇಸ್ಲಾಂ ಬೇರೆ ಬೇರೆ ಧರ್ಮವೇ? ಸಹೋದರನು ಹೇಳಿದರು: ನೀವು ಯಾವ ಇಮಾಮನ್ನು ಕಾಯುತ್ತಿರುವಿರೋ ಆ ಇಮಾಂ ಬಂದಾಗಿದೆ ಎಂದು ನಾವು ಹೇಳುತ್ತೇವೆ. ಇದೇ ಸತ್ಯವಾದ ಇಸ್ಲಾಂ ಆಗಿದೆ. ಇದನ್ನು ಕೇಳಿ ನಾನು ಹಝ್ರತ್ ಮಸೀಹ್ ಮೌಊದ್‌ರ(ಅ) ಗ್ರಂಥಗಳನ್ನು ಓದಲು ಶುರುಮಾಡಿದೆ. ಇಸ್ಲಾಂ ಧರ್ಮ ತತ್ವಜ್ಞಾನ ಓದಿದೆ ಮತ್ತು ಅಹ್ಮದಿಯ್ಯತ್ ಸ್ವೀಕರಿಸಿದೆ.

ಅವರು ಬೆನಿನಿನ ವಿದ್ವಾವಂತ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಫ್ರಾನ್ಸಿನಿಂದ ಬುಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಅವರು ಮಾಸ್ಟರ್ ಮಾಡಿದರು.

ವಿದ್ಯುತ್ ಮತ್ತು ನೀರಿನ ಡೈರಕ್ಟರ್ ಹುದ್ದೆಯಲ್ಲಿ ಇದ್ದು ನಿವೃತ್ತರಾಗಿದ್ದರು. ಅತ್ಯಂತ ಆದರಣೀಯ, ಸಭ್ಯ, ನಮಾಝ್ ಪಾಲನೆ ಮಾಡುವ, ತಹಜ್ಜುದ್ ನಿರ್ವಹಿಸುವ, ಒಳ್ಳೆಯ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಹಝ್‌ರತ್ ಮಸೀಹ್ ಮೌಊದ್(ಅ) ಮತ್ತು ಆದರಣೀಯರಾದ ಖಲೀಫರೊಂದಿಗೆ ಅಪರಿಮಿತವಾದ ಪ್ರೀತಿಯಿತ್ತು. ಅವರ ಗ್ರಂಥಗಳನ್ನು ಓದುವುದು ಅವರ ದಿನಚರ್ಯೆಯಾಗಿತ್ತು. ಜಮಾಅತಿನ ಅನೇಕ ಹುದ್ದೆಗಳಲ್ಲಿ ಇದ್ದರು. ಬೆನಿನ್ ಜಮಾಅತಿಗಾಗಿಯೂ ಅವರು ಬಹಳಷ್ಟು ಸೇವೆ ಮಾಡಿದ್ದರು. ಚೇರ್‌ಮೇನ್ ಹ್ಯೂಮಾನಿಟಿ ಫಸ್ಟಿನ ಹುದ್ದೆಯಲ್ಲಿ ಮೊದಲಿದ್ದರು. ಇವರು ಮೆಡಿಕಲ್ ಕ್ಯಾಂಪುಗಳನ್ನು ನಡೆಸುತ್ತಿದ್ದರು. ಸ್ವತಃ ಡಾಕ್ಟರ್ ಜೊತೆಗೆ ಹೋಗಿ ದಿನಪೂರ್ತಿ ಊಟ ಕೂಡ ಮಾಡದೇ ಜನಸೇವೆಯಲ್ಲಿ ನಿರತರಾಗುತ್ತಿದ್ದರು.

ಡಾಕ್ಟರ್ ಖಮರ್ ಅಹ್ಮದ್ ಅಲಿ ಸಾಹಿಬ್ ಹೇಳುತ್ತಾರೆ: ಬೆನಿನಿನಲ್ಲಿ ಡಾಕ್ಟರ್ ಆಗಿ ಸೇವೆ ಸಲ್ಲಿಸಲು ನನಗೆ ಸೌಭಾಗ್ಯ ಸಿಕ್ಕಿತ್ತು. ಕ್ಯಾಂಪುಗಳು ನಡೆಯುವ ವೇಳೆ ಅವರಿಗೆ ದನಿವು ಕಾರಣ ಅಥವಾ ಯಾತ್ರೆಯಲ್ಲಿದ್ದ ಕಾರಣ ತಡವಾಗಿ ನಿದ್ದೆ ಹೋದರೂ ಸದಾ ರಾತ್ರಿ ಸಮಯದಲ್ಲಿ ಎದ್ದು ತಹಜ್ಜುದ್ ನಮಾಝ್ ನಿರ್ವಹಿಸುವುದನ್ನು ನಿದ್ದೆಯಿಂದ ಎಚ್ಚೆತ್ತಾಗೆಲ್ಲ ನಾನು ಕಂಡಿದ್ದೇನೆ. ಮುಬಲ್ಲಿಗ್‌ರಾದ ಮುಝಫ್ಫರ್ ಅಹ್ಮದ್ ಝಫರ್ ಹೇಳುತ್ತಾರೆ: ಅವರು ಯಾವಾಗಲಾದರೂ ಭಾಷಣ ಮಾಡುವಾಗ, ಬಹಳ ವೇದನೆಯೊಂದಿಗೆ ಬೈಅತಿನ ನಿಬಂಧನೆಗಳ ಪ್ರಕಾರ ನಡೆಯಲು ಉಪದೇಶಿಸುತ್ತಿದ್ದರು. ಅಲೈಸಲ್ಲಾಹು ಬಿಕಾಫಿನ್ ಅಬ್ದಹೂ ಎಂಬ ಹಝ್‌ರತ್ ಮಸೀಹ್ ಮೌಊದ್‌ರಿಗೆ(ಅ) ಲಭಿಸಿದ ಇಲ್‌ಹಾಮನ್ನು ಮನವರಿಕೆ ಮಾಡುವ ವರೆಗೆ ಒಬ್ಬನು ಲೌಕಿಕತೆಯಲ್ಲಿ ಮುಳುಗಿರುವವನಾಗಿರುತ್ತಾನೆ.

ಅಮೀರ್ ಸಾಹಿಬ್ ಹೇಳುತ್ತಾರೆ: 2006ರಲ್ಲಿ ಅವರು ಜಮಾಅತಿಗೆ 30 ಎಕರೆ ಭೂಮಿಯಲ್ಲಿ ನೀಡಿದರು. ಬೆನಿನಿನಲ್ಲಿ ಮದ್ರಸತುಲ್ ಹಿಫ್ಝ್‌ನ ಬಿಲ್ಡಿಂಗ್ ನಿರ್ಮಿಸಿ ಜಮಾಅತಿಗೆ ಕೊಡುಗೆಯಾಗಿ ನೀವು ನೀಡಬೇಕೆಂಬ ಬಯಕೆಯನ್ನು ಅವರೊಡನೆ ನಾನು 2021ರಲ್ಲಿ ಹೇಳಿದೆ. ಆಗ ಮುಗುಳ್ನಗುತ್ತಾ ಇನ್‌ಶಾ ಅಲ್ಲಾಹ್ ಎಂದು ಹೇಳಿದರು. ಈಗ ಅದರ ನಿರ್ಮಾಣ ಶುರು ಸಹ ಆಗಿದೆ. ಅವರು ಹೀಗೆ ಹೇಳುತ್ತಿದ್ದರು: ಜಮಾಅತಿನ ಮಕ್ಕಳು ವಿದ್ಯಾವಂತರಾದರೆ, ಬೆನಿನನ ಜಮಾಅತ್ ಆಫ್ರಿಕದ ದೊಡ್ಡ ಜಮಾಅತುಗಳಲ್ಲಿ ಸೇರುವುದು. ಅವರು ಮಕ್ಕಳಿಗೆ ಜಮಾಅತಿನ ಬೆಲೆಬಾಳುವ ಪುಸ್ತಕಗಳನ್ನು ಕೊಡುಗೆಯಾಗಿ ಕೊಡುತ್ತಿದ್ದರು. ಬೈತುಲ್ ಇಕ್ರಾಂ ಯತೀಂ ಖಾನಕ್ಕೆ ಅವರು ಹೋದಾಗ, ಅಲ್ಲಿನ ಇಂಚಾರ್ಜ್ ಆದ ಡಾಕ್ಟರ್ ವಲೀದ್ ಸಾಹಿಬ್‌ರೊಡನೆ ಅವರು ಹೇಳಿದರು: ಈ ಮಕ್ಕಳ ಆರೋಗ್ಯ ಮತ್ತು ಸುರಕ್ಷೆಯ ಬಗ್ಗೆ ಬಹಳ ಹೆಚ್ಚು ಗಮನವಹಿಸಿರಿ. ಏಕೆಂದರೆ ಇವರು ನಮ್ಮ ಜಮಾಅತ್ ಮತ್ತು ಸಮುದಾಯದ ಮಕ್ಕಳಾಗಿವೆ. ನಾವೆಲ್ಲರೂ ಅವರ ಹೆತ್ತವರು. ಅವರಿಗಾಗಿ ದುಆ ಸಹ ಮಾಡಿದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ನಾನು ಹೇಳಿದಂತೆ ಜುಮಾ ನಮಾಝಿನ ನಂತರ ಇವರೆಲ್ಲರ ಜನಾಝ ಗಾಇಬ್ ನಮಾಝ್ ನಿರ್ವಹಿಸುವೆನು.

**********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೆಲ ಸಂದರ್ಭಗಳಲ್ಲಿ ಕೇವಲ ಸಂದೇಶ ತಲುಪಿಸುವ ಹೊಣೆಯಿರುತ್ತದೆ. ಆದರೆ ಅದು ಅದಕ್ಕೆ ಕಾರಣ ಎನ್ನುವಂತಿಲ್ಲ.

ಸತ್ಯವೇನೆಂದರೆ ಅಲ್ಲಾಹನ ಮಾತುಗಳು ತನ್ನ ದಾಸನೊಂದಿಗೆ ನೇರವಾಗಿರುತ್ತದೆ. ದೇವದೂತರು ಕೇವಲ ಮಾಧ್ಯಮವಾಗುತ್ತದೆ ಅಷ್ಟೇ. ಆದುದರಿಂದ **ಇನ್ನ ನಹನು ನಝ್ಝಲ್‌ನಝ್ಝಿಕ್ರ ವ ಇನ್ನಾ ಲಹೂ ಲಹಾಫಿಝೂನ್** ಎಂದು ಹೇಳಿ ಎಂದು ತಿಳಿಸಲಾಗಿದ್ದೇನೆಂದರೆ ನಾವು ಮುಂದೆಯೂ ಸಹ ತಾಜಾ ತಾಜಾ ದಿವ್ಯವಾಣಿಯೊಂದಿಗೆ ರಕ್ಷಿಸುವೆವು. ಅಂದರೆ ಮುಜದ್ದಿದ್ (ಧರ್ಮಚೈತನ್ಯದಾರರು) ಮಾಮೂರ್ (ಸುಧಾರಕರು) ಆಗಮಿಸುವರು.

ಗ್ರಂಥವೊಂದರ ಅಕ್ಷರವಂತೂ ಸುರಕ್ಷಿತವಿದ್ದು ಅದರ ಅರ್ಥ ಉದ್ದೇಶಗಳು ಸುರಕ್ಷಿತವಾಗಿಲ್ಲವೆಂದರೆ ಅದು ಸುರಕ್ಷಿತ ಗ್ರಂಥ ಎನ್ನಲಾರರು. ಉದಾಹರಣೆಗೆ ವೇದಗಳಿವೆ. ಅದರ ಪದಗಳು ಸುರಕ್ಷಿತವಾಗಿವೆ ಅಂದುಕೊಂಡರು. ಅದು ಪರಿಪೂರ್ಣ ಗ್ರಂಥ ಎಂಬ ನೆಲೆಯಲ್ಲಿ ಸುರಕ್ಷಿತವಿಲ್ಲ. ಏಕೆಂದರೆ ಯಾವ ಭಾಷೆಯಲ್ಲಿ ಅದು ಅವತರಿಸಿದೆಯೋ ಅದೇ ಸುರಕ್ಷಿತವಾಗಿಲ್ಲ. ಆದುದರಿಂದ ಅದರ ಅರ್ಥ ಸಂಶಯಕ್ಕೊಳಗಾಗಿವೆ. ಈಗ ಅದನ್ನು ವ್ಯಕ್ತಿಯೊಬ್ಬನು ಅಲ್ಲಾಹನಿಂದ ದಿವ್ಯವಾಣಿ ಪಡೆದು ಅದರ ಸರಿಯಾದ ಅರ್ಥ ತಿಳಿಸಿಕೊಳ್ಳಲಿಲ್ಲವಾದರೆ ಯಾರು ನಿಶ್ಚಿತವಾಗಿಯೂ ಹೇಳಬಲ್ಲರು. ಅದರ ಸರಿಯಾದ ಅರ್ಥ ಹೇಳುತ್ತಿದ್ದಾನೆ ಎಂದು. ಅಥವಾ ಅದಕ್ಕನುಗುಣವಾಗಿ ನಡೆದುಕೊಳ್ಳುತ್ತಿದ್ದಾನೆ ಎಂದು. ಈ ನ್ಯೂನತೆ ದೂರವಾಗಬೇಕಾದರೆ ಕಾಲ ಕಾಲಕ್ಕೆ ಆ ಗ್ರಂಥದ ಅರ್ಥ ಹೇಳಿಕೊಡುವ ಮಹಾತ್ಮರು ಬರುತ್ತಿರಬೇಕು. ಅಂತಹ ಪರಿಪೂರ್ಣ ಸುರಕ್ಷತೆ ಪವಿತ್ರ ಖುರ್‌ಆನ್‌ಗೆ ಮಾತ್ರ ಲಭಿಸಿದೆ. ನಿಸ್ಸಂಶಯವಾಗಿ ಇತರ ದೈವಿಕ ಗ್ರಂಥಗಳು ಸಹ ಆ ಕಾಲ ಅವಧಿಯೊಳಗೆ ಜೀವಂತ ಗ್ರಂಥವಾಗಿದ್ದವು ಅಂದರೆ ಲೋಕಕ್ಕೆ ಮಾರ್ಗದರ್ಶನ ಯೋಗ್ಯವಾಗಿದ್ದವು. ಅದು ಅಂದು ಸುರಕ್ಷಿತವಾಗಿತ್ತು. ಆದರೆ ಈಗ ಇಲ್ಲ. ಇದೀಗ ಕೇವಲ ಪವಿತ್ರ ಖುರ್‌ಆನ್‌ಗೆ ಮಾತ್ರ ಆ ಸುರಕ್ಷತೆ ಲಭ್ಯವಿದೆ. ಕೇವಲ ಅದರ ಅನುಯಾಯಿಗಳು ಮಾತ್ರ ಎಲ್ಲಾ ಕಾಲಕ್ಕೂ ಅಲ್ಲಾಹನಿಂದ ನೇರವಾಗಿ ದಿವ್ಯವಾಣಿ ಪಡೆದು ಆಗಮಿಸುತ್ತಿದ್ದಾರೆ. ಈ ಕಾಲಘಟ್ಟದಲ್ಲಿ ಧರ್ಮ ಅದಃಪತನಕ್ಕೆ ಗುರಿಯಾಗಿತ್ತು. ಅಲ್ಲಾಹನು ತನ್ನ ಒಬ್ಬ ಸಂದೇಶವಾಹಕನನ್ನು ಕಳುಹಿಸಿದ್ದಾನೆ. ಅವರು ಬಂದು ಸಂಪೂರ್ಣ ರೀತಿಯಲ್ಲಿ ಪವಿತ್ರ ಖುರ್‌ಆನ್‌ನ ಹೆಚ್ಚಿನ ವ್ಯಾಖ್ಯಾನಗಳೊಂದಿಗೆ ಪರಿಶುದ್ಧಗೊಳಿಸಿ ಲೋಕದ ಮುಂದೆ ಪ್ರಸ್ತುತಪಡಿಸಿದನು. ಅದಾಗ್ಯೂ ಖುರ್‌ಆನ್ ಈ ಕಾಲದ ಆಧುನಿಕ ಶಿಕ್ಷಣಗಳ ಮುಂದೆ ತಪ್ಪಿತಸ್ಥನ ರೂಪದಲ್ಲಿ ನಿಂತುಕೊಂಡಿತ್ತು. ಈಗ ಒಂದು ಆಕ್ರಮಣಕಾರನ ರೀತಿಯಲ್ಲಿ ನಿಂತುಕೊಂಡಿದೆ. ಅದರ ಮುಂದೆ ಎಲ್ಲಾ ತತ್ವಜ್ಞಾನಿಗಳು ಮತ್ತು ಧರ್ಮಗಳು ಹುಲಿಯ ಮುಂದಿನಿಂದ ನರಿ ಓಡುವ ರೀತಿಯಲಿ ಓಡಿ ಹೋಗುತ್ತಿವೆ. **ಫಸುಬ್ಹಾನಲ್ಲಾಹಿಲ್ ಮಲ್ಲಿಕಲ್ ಇಝ್ಝು** ಅಲ್ಲಾಹನ ಅನುಗ್ರಹದಿಂದ ನನ್ನ ದಾವೆಯೇನೆಂದರೆ. ಆ ಸುಧಾರಕನ ಅನುಸರಣೆಯ ಕಾರುಣ್ಯದಿಂದಾಗಿ, ಯಾವ ವಿದ್ಯೆಯ ತಜ್ಞನಾಗಿರಲಿ ಪವಿತ್ರ ಖುರ್‌ಆನ್‌ನ ಯಾವುದೇ ಸಮಸ್ಯೆಯ ಮೇಲೆ ಆಕ್ಷೇಪ ಎತ್ತಿದರೆ ನಾನು ಅದಕ್ಕೆ ತಕ್ಕುದಾದ ಸಾಕ್ಷ್ಯದೊಂದಿಗೆ ಉತ್ತರ ನೀಡಬಲ್ಲೆನು. ಮತ್ತು ಅಲ್ಲಾಹನ ಅನುಗ್ರಹದಿಂದ ಪ್ರತಿಯೊಬ್ಬನಿಗೂ ಮೌನವಾಗಿರಿಸುವೆನು.

ಅವನು ಆತ್ಮಭಿಮಾನದಿಂದಾಗಿ ಘಂಟಾಘೋಷವಾಗಿ ಹೇಳಲು ಸಿದ್ಧಗೊಳ್ಳದೇ ಇರಬಹುದು. ನಾನು ಕಾಲು ಶತಮಾನದ ಅನುಭವ ಹೊಂದಿದ್ದೇನೆ. ನಾನು ಭಾವಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ಬಹಿರಂಗವಾಗಲಿ, ಈ ಮೈದಾನದಲ್ಲಿ ದಾಖಲಾಗಿದಾಗಿನಿಂದ ಅಂತರಿಕವಾಗಲಿ ನಾಚುವ ಪ್ರಸಂಗ ಬಂದೊದಗಲಿಲ್ಲ.

ಒಟ್ಟಿನಲ್ಲಿ ಹೇಳುವುದಾದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಸುರಕ್ಷತೆಗೆ ಆಧಾರ ಕೇವಲ ಮಾನವ ಬುದ್ಧಿಯ ಮೇಲೆ ಇಡಲಿಲ್ಲ. ಅದರ ವ್ಯಾಖ್ಯಾನದ ಆಧಾರ ಕೇವಲ ಮಾನವನ ಬುದ್ಧಿವಂತಿಕೆಗೆ ಬಿಡಲಿಲ್ಲ. ಬದಲು ಸ್ವಯಂ ತನ್ನ ವಾಕ್ಚಾತುರ್ಯದಿಂದ ಅದನ್ನು ಪ್ರಕಟಿಸುವ ಹೊಣೆ ಹೊತ್ತುಕೊಂಡಿದ್ದಾನೆ. ಅದರ ಒಂದು ಉಪಯೋಗ ಹೀಗೂ ಆಯಿತು. ಅದರ ಸಕಾರಾತ್ಮಕ ಫಲಗಳು ದೊರೆಯುತ್ತಿದ್ದಂತೆ ಪವಿತ್ರ ಖುರ್‌ಆನ್‌ನ ಸುರಕ್ಷತೆಯ ಒಂದು ಸಾಕ್ಷ್ಯ ಲಭ್ಯವಿರುತ್ತದೆ. ಯುನಾನಿ ಒಂದು ಔಷಧಿ ಉಪಯೋಗಕ್ಕೆ ಬಂದ ಮಾತ್ರ ಅದನ್ನು ಫಲಪ್ರದ ಎಂದು ಭಾವಿಸುತ್ತೇವೆ. ಇಲ್ಲದಿದ್ದರೆ ನಿಷ್ಪ್ರಯೋಜಕ ಎಂದು ಭಾವಿಸುತ್ತೇವೆ. ಪವಿತ್ರ ಖುರ್‌ಆನ್‌ನ ತಾಜಾ ಫಲಗಳು ಸಹ ಸಾಬೀತುಪಡಿಸುತ್ತಿವೆ. ಪವಿತ್ರ ಖುರ್‌ಆನ್ ಸುರಕ್ಷಿತ ಹಾಗೂ ಒಂದು ಜೀವಂತ ಗ್ರಂಥವಾಗಿದೆ ಎಂದು. ಇಂತಹ ಸುರಕ್ಷತೆಯ ಬಲವಾದ ಮಾಧ್ಯಮ ಬೇರೆ ಯಾವ ಗ್ರಂಥಕ್ಕೂ ದೊರೆತಿಲ್ಲ ಎಂದೂ ದೊರೆಯಲು ಸಾಧ್ಯವು ಇಲ್ಲ. **(ತಫ್ಸೀರ್ ಕಬೀರ್ ಸಂಪುಟ-4, ಪುಟ-19 ಮುದ್ರಣ ಖಾದಿಯಾನ್ 2010)**

## ಹುಡುಗಿಯರು ಚಿನ್ನವಾಗಲಿ, ಬಟ್ಟೆಗಳ ಬೇಡಿಕೆ ಆಗಲಿ ಮುಂದಿಡುವುದು ನಾಚಿಕೆಗೇಡುತನವಾಗಿದೆ

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ನುಡಿಯುತ್ತಾರೆ:

ನಾನು ನನ್ನ ಜಮಾಅತನ್ನು ಈ ಒಂದು ವಿಷಯದೆಡೆ ಗಮನ ಹರಿಸಬಯಸುತ್ತೇನೆ. ದುಷ್ಟ ಪದ್ಧತಿಗಳು ಅವು ಯಾವುದೇ ರೂಪದಲ್ಲಿ ಆಗಿರಲಿ, ಕೆಟ್ಟದ್ದಾಗಿರುತ್ತವೆ. ನನಗೆ ತುಂಬ ವಿಷಾದ ಅನಿಸುತ್ತದೆ. ನಮ್ಮ ಜಮಾಅತಿನ ಕೆಲ ಜನರು ಸಹ ಈ ಕೆಟ್ಟ ಪದ್ಧತಿಗಳನ್ನು ಆಚರಿಸುತ್ತಿದ್ದಾರೆ. ಒಂದು ರೀತಿಯಲ್ಲಿ ಅದನ್ನು ಸಮೀಕರಿಸುವಂತಿದೆ. ವಿವಾಹದ ಸಂದರ್ಭಗಳಲ್ಲಿ ತಮ್ಮ ಮನೆಗಳಲ್ಲಿ ಇಂತಿಷ್ಟು ಚಿನ್ನ ಮತ್ತು ಬಟ್ಟೆಗಳನ್ನು ಪಡೆಯಲಾಗುವುದು ಎಂದು ಮೊದಲೇ ತೀರ್ಮಾನಿಸಿಕೊಳ್ಳಲಾಗುತ್ತದೆ. ಮತ್ತೆ ನಿಧಾನವಾಗಿ ಇಂತಹ ಶರತ್ತುಗಳು ಬರಹದಲ್ಲಿ ಬರತೊಡಗಿದವು. ನಂತರ ನನ್ನ ಮುಂದೆಯೂ ಬರತೊಡಗಿದವು. ಶರೀಅತ್ ಕೇವಲ ಮಹರ್ ನಿಗದಿಪಡಿಸಿದೆ. ಅದನ್ನು ಹೊರತುಪಡಿಸಿ ಹುಡುಗಿಯರ ಕಡೆಯಿಂದ ಚಿನ್ನ ಮತ್ತು ಬಟ್ಟೆಗಳ ಬೇಡಿಕೆ ಮುಂದಿಡುವುದು ನಾಚಿಕೆಗೇಡಾಗಿದೆ. ಅದು ಹುಡುಗಿಯರ ಮಾರಾಟ ಮಾಡುವ ರೀತಿ ಬಿಟ್ಟು ಬೇರೇನು ಅಲ್ಲ. ಆದುದರಿಂದ ಭವಿಷ್ಯಕ್ಕಾಗಿ ನಾನು ಘೋಷಣೆ ಮಾಡುತ್ತೇನೆ. ಯಾರೊಬ್ಬರು ವಿವಾಹಗಳ ಸಂಧರ್ಭ ಚಿನ್ನ ಮತ್ತು ಬಟ್ಟೆ ಇತ್ಯಾದಿಯ ಶರತ್ತುಗಳನ್ನು ಒಡ್ಡಿದ್ದಾರೆ ಅಥವಾ ಹುಡುಗಿ ಕಡೆಯವರು ಇಂತಹ ಬೇಡಿಕೆಗೆ ಪ್ರಚೋದನೆ ನೀಡಿದ್ದಾರೆ ಎಂಬ ವಿಷಯ ನನಗೆ ತಿಳಿದುಬಂದರೆ ನಾನು ಅಂತಹವರ ನಿಕಾಹ್ ನೆರವೇರಿಸಿಕೊಡುವುದಿಲ್ಲ. **(ಖುತುಬ ನಿಕಾಹ್ 27 ಮಾರ್ಚ್ 1931, ಅಲ್-ಫಝುಲ್ 17 ಏಪ್ರಿಲ್ 1931)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ಏ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

**ಸರ್ವಶಕ್ತನಾದ ಅಲ್ಲಾಹನು ಈ ಮಹತ್ವದ ಯುದ್ಧದಲ್ಲಿ ಮುಸ್ಲಿಮರನ್ನು ಮಹಾನ್ ವಿಜಯದತ್ತ ಮುನ್ನಡೆಸಿದನು**

**ಯರ್ಮೂಕ್ ಮಹಾ ಯುದ್ಧದ ನಂಬಲಾರ್ಹವಾದ ವಿವರಾತ್ಮಕ ಪ್ರಸ್ತಾವನೆ**

## ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17-09-2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಘಟನೆಗಳ ಪ್ರಸ್ತಾಪ ನಡೆಯುತ್ತಿತ್ತು. ಇಂದು ಯರ್‌ಮೂಕ್ ಯುದ್ಧದ ಕುರಿತು ಹೇಳುತ್ತೇನೆ. ಯರ್‌ಮೂಕ್ ಯುದ್ಧ ನಡೆದ ವರ್ಷದ ಕುರಿತು ಭಿನ್ನಾಭಿಪ್ರಾಯಗಳು ಇವೆ. ಈ ಯುದ್ಧ ಹಿಜರಿ 15ರಲ್ಲಿ ನಡೆದಿತ್ತು ಎಂಬ ಒಂದು ವರದಿಯಿದೆ. ಕೆಲವರ ಪ್ರಕಾರ ಇದು ಹಿಜರಿ 13ರಲ್ಲಿ ಡಮಸ್ಕಸ್ ಮೇಲಿನ ವಿಜಯಕ್ಕೆ ಮುಂಚೆ ನಡೆದಿತ್ತು. ಒಂದು ವರದಿಯ ಪ್ರಕಾರ ಹಝ್ರತ್ ಉಮರ್‌ರಿಗೆ ಮೊದಲು ಯರ್ಮೂಕ್ ಯುದ್ಧದ ವಿಜಯದ ಕುರಿತು ಸುವಾರ್ತೆ ಲಭಿಸಿತ್ತು. ಅದು ಹಝ್ರತ್ ಅಬೂಬಕರರ(ರ) ನಿಧನದ ಇಪ್ಪತ್ತು ದಿನಗಳ ನಂತರವಾಗಿತ್ತು. ಆದರೆ ಕೆಲವರ ಪ್ರಕಾರ ಡಮಸ್ಕಸ್ ಮೇಲಿನ ವಿಜಯದ ಸುವಾರ್ತೆ ಮೊದಲು ಲಭಿಸಿತ್ತು. ಹೇಗಿದ್ದರೂ ಡಮಸ್ಕಸಿನ ವಿಜಯದ ಸುವಾರ್ತೆ ಲಭಿಸಿದ ವರದಿ ಹೆಚ್ಚು ಸರಿಯೆಂದು ತೋರುತ್ತದೆ. ಅದೇ ಮೊದಲು ನಡೆದಿತ್ತು.
(ತಾರೀಖೆ ದಮಿಶ್‌ಖ್ ಅಲ್‌ಕಬೀರ್ ಲಿಇಬ್‌ನೆ ಅಸಾಕರ್, ಭಾಗ-2, ಪುಟ-141-143, ದಾರುಲ್ ಫಿಕರ್ ಬೈರೂತ್ 1995)

ಯರ್ಮೂಕ್ ಯುದ್ಧ ಹಝ್ರತ್ ಉಮರ್‌ರ(ರ) ಕಾಲದಲ್ಲಿ ನಡೆದಿತ್ತು ಎಂದು ಸಾಕ್ಷ್ಯಾಧಾರಗಳಿಂದ ತಿಳಿದುಬರುತ್ತದೆ. ರೋಮನ್ನರು ಪರಾಜಯಗೊಂಡು ಡಮಸ್ಕಸ್ ಮತ್ತು ಹಿಮಸ್ ಮುಂತಾದ ಪ್ರದೇಶಗಳಿಂದ ಹೊರಟು ಅಂತಾಕಿಯಗೆ ತಲುಪಿದರು. ಅಂತಾಕಿಯ ಸಿರಿಯದ ಗಡಿಪ್ರದೇಶದ ಪಟ್ಟಣವಾಗಿದೆ. ಅರೇಬಿಯರು ಸಿರಿಯ ದೇಶವನ್ನು ಸಂಪೂರ್ಣವಾಗಿ ನಾಶಪಡಿಸುವರು ಎಂದು ಅವರು ಹರ್ಕಲ್ ಅರಸನೊಡನೆ ದೂರು ಹೇಳಿದರು. ಹರ್ಖಲ್ ಅವರಲ್ಲಿ ಕೆಲವು ಚಾಣಾಕ್ಷ ಮತ್ತು ಗೌರವಾನ್ವಿತ ಜನರನ್ನು ಅರಮನೆಗೆ ಕರೆದರು ಮತ್ತು ಹೀಗೆ ಕೇಳಿದರು: ಶಕ್ತಿಯಲ್ಲಿ, ಸಂಖ್ಯೆಯಲ್ಲಿ, ಸಾಧನಸಾಮಗ್ರಿಗಳಲ್ಲಿ ಅರೇಬಿಯರು ನಿಮಗಿಂತ ಕಡಿಮೆಯಿದ್ದೂ ನಿಮಗೆ ಅವರೊಡನೆ ಹೋರಾಡಲು ಏಕೆ ಸಾಧ್ಯವಾಗುತ್ತಿಲ್ಲ? ಆಗ ಎಲ್ಲರೂ ನಾಚಿಕೆಯಿಂದ ತಲೆ ಬಾಗಿಸಿದರು. ಯಾರೂ ಅದಕ್ಕೆ ಉತ್ತರ ಕೊಡಲಿಲ್ಲ. ಆದರೆ ಒಬ್ಬ ಅನುಭವಿ ವೃದ್ಧ ವ್ಯಕ್ತಿ ಹೀಗೆ ಹೇಳಿದರು: ಅರೇಬಿಯರು ಸ್ವಭಾವಗುಣಗಳು ನಮ್ಮ ಸ್ವಭಾವಗಳಿಗಿಂತ ಉತ್ತಮವಾಗಿವೆ. ಅವರು ರಾತ್ರಿ ಸಮಯದಲ್ಲಿ ಆರಾಧನೆ ಮಾಡುತ್ತಾರೆ ಮತ್ತು ದಿನದಲ್ಲಿ ಉಪವಾಸವಿರಿಸುತ್ತಾರೆ. ಯಾರ ಮೇಲೂ ದೌರ್ಜನ್ಯ ಮಾಡುವುದಿಲ್ಲ. ಪರಸ್ಪರ ಎಲ್ಲರೊಂದಿಗೂ ಸಮಾನವಾಗಿ ವರ್ತಿಸುತ್ತಾರೆ. ಆದರೆ ನಾವಾದರೋ, ಮದ್ಯಪಾನ ಮಾಡುತ್ತೇವೆ, ಕೆಟ್ಟ ಕೃತ್ಯಗಳನ್ನು ಮಾಡುತ್ತೇವೆ, ಪ್ರತಿಜ್ಞೆಯಗಳನ್ನು ಪಾಲಿಸುವುದಿಲ್ಲ, ಇತರರ ಮೇಲೆ ದೌರ್ಜನ್ಯ ಮಾಡುತ್ತೇವೆ. ಆದ್ದರಿಂದ ಅವರ ಕೆಲಸಗಳಲ್ಲಿ ಆವೇಶ ಮತ್ತು ಸ್ಥಿರಚಿತ್ತತೆಯಿರುತ್ತದೆ. ಆದರೆ ನಮ್ಮ ಕೆಲಸದಲ್ಲಿ ಧೈರ್ಯ ಮತ್ತು ಸ್ಥೈರ್ಯವಿರುವುದಿಲ್ಲ.

ರೋಮಿನ ಅರಸ ಸತ್ಯದಲ್ಲಿ ಸಿರಿಯದಿಂದ ಹೊರಡಲು ನಿರ್ಧರಿಸಿದ್ದನು. ಆದರೆ ಪ್ರತಿಯೊಂದು ಪಟ್ಟಣ ಮತ್ತು ಪ್ರತಿಯೊಂದು ಜಿಲ್ಲೆಯಿಂದ ಗುಂಪು ಗುಂಪಾಗಿ ಕ್ರೈಸ್ತರು ವಿನಂತಿ ಮಾಡುತ್ತಾ ಅವನ ಬಳಿಗೆ ಬರುತ್ತಿದ್ದರು. ರೋಮ್ ಚಕ್ರವರ್ತಿಗೆ ಇದು ಅಭಿಮಾನದ ಪ್ರಶ್ನೆಯಾಗಿತ್ತು. ತನ್ನ ಅರಸತನದ ಎಲ್ಲ ಶಕ್ತಿಯನ್ನು ಅರೇಬಿಯರ ವಿರುದ್ಧ ಖರ್ಚು ಮಾಡಲು ಅತ್ಯಂತ ಆವೇಶದಿಂದ ತಯಾರಾದನು. ನಿಶ್ಚಿತ ದಿನಾಂಕದೊಳಗೆ ಎಲ್ಲ ಸೈನಕರು ಅಂತಾಕಿಯಗೆ ಮುಟ್ಟಲಿಕ್ಕಾಗಿ ರೋಮ್, ಕಂಸ್ತಂತಿಯ, ಅಂತೀನಿಯ, ಅರ್ಮೇನಿಯ ದ್ವೀಪ, ಹೀಗೆ ಎಲ್ಲರಿಗೂ ಆದೇಶ ಕಳುಹಿಸಿದರು. ಎಷ್ಟು ಜನರು ಲಭಿಸುವುದೋ ಅಷ್ಟು ಜನರನ್ನು ಕಳುಹಿಸಲು ಎಲ್ಲ ಜಿಲ್ಲೆಗಳ ಆಫೀಸರಿಗೆ ಬರೆದು ತಿಳಿಸಿದರು. ಈ ಆದೇಶ ತಲುಪಿದ ಕೂಡಲೇ ಸೈನಿಕರ ಗುಂಪು ಬಿರುಗಾಳಿಯಂತೆ ಬಂತು. ಅಂತಾಕಿಯದ ನಾಲ್ಕೂ ದಿಕ್ಕುಗಳಲ್ಲಿ ದೃಷ್ಟಿ ತಲುಪುವ ದೂರದಷ್ಟು ಎಲ್ಲ ಕಡೆ ಸೈನಿಕರು ಹರಡಿರುವುದನ್ನು ಕಾಣಬಹುದಾಗಿತ್ತು. ಅಸಂಖ್ಯಾತ ಸೈನಿಕರಿದ್ದರು.

ಹಝ್ರತ್ ಅಬೂಉಬೈದ(ರ) ಜಯಿಸಿದ ಸ್ಥಳಗಳ ನೇತಾರರು ಮತ್ತು ಸರದಾರರು ಅಬೂಉಬೈದರ ನ್ಯಾಯನೀತಿಯಿಂದ ಪ್ರಭಾವಿತಗೊಂಡಿದ್ದರು. ಆದ್ದರಿಂದ ಅವರು ವಿರೋಧ ಧರ್ಮದವರಾಗಿದ್ದರೂ ಶತ್ರುಗಳ ಕುರಿತು ಮಾಹಿತಿ ತರಲು ರಹಸ್ಯದೂತರನ್ನು ಸ್ವತಃ ತಮ್ಮ ಕಡೆಯಿಂದ ನೇಮಿಸಿದ್ದರು. ಹೀಗೆ ಅವರ ಮೂಲಕ ಹಝ್ರತ್ ಅಬೂಉಬೈದರಿಗೆ ಎಲ್ಲ ಸಂಗತಿಗಳ ಮಾಹಿತಿ ಲಭಿಸಿತ್ತು. ಅವರು ಎಲ್ಲ ಅಧಿಕಾರಿಗಳನ್ನು ಒಟ್ಟುಗೂಡಿಸಿದರು ಮತ್ತು ನಿಂತುಕೊಂಡು ಒಂದು ಪ್ರಭಾವಶಾಲಿ ಭಾಷಣ ಮಾಡಿದರು. ಅದರ ಸಂಕ್ಷೇಪ ಹೀಗಿತ್ತು: ಎಲೈ ಮುಸ್ಲಿಮರೇ, ಅಲ್ಲಾಹನು ನಿಮ್ಮನ್ನು ಅನೇಕ ಬಾರಿ ಪರೀಕ್ಷಿಸಿದ್ದಾನೆ. ನೀವು ಅವನ ಪರೀಕ್ಷೆಯನ್ನು ಜಯಿಸಿದ್ದೀರಿ. ಆದ್ದರಿಂದ ಅದರ ಬದಲಾಗಿ ಅಲ್ಲಾಹನು ನಿಮ್ಮನ್ನು ಸದಾ ವಿಜಯಿಗಳನ್ನಾಗಿ ಮಾಡಿದನು. ನಿಮಗೆ ಯಾವಾಗಲೂ ಯಶಸ್ಸು ಲಭಿಸಿತ್ತು. ಈಗ ನಿಮ್ಮ ಶತ್ರುಗಳು ಭೂಮಿ ನಡುಗುವ ರೀತಿಯಲ್ಲಿ ಸಾಕಷ್ಟು ಸಾಧನ ಸಾಮಗ್ರಿಗಳೊಂದಿಗೆ ನಿಮ್ಮ ವಿರುದ್ಧ ಹೋರಾಡಲು ಬರುತ್ತಿದ್ದಾರೆ. ಈಗ ಹೇಳಿರಿ. ಇದಕ್ಕಾಗಿ ನಿಮ್ಮ ಕಾಣಿಕೆಯೇನು? ಆಗ ಅಮೀರ್ ಮುಆವಿಯರ ಸಹೋದರನಾದ ಯಝೀದ್ ಬಿನ್ ಅಬೂಸುಫ್‌ಯಾನ್ ಎದ್ದುನಿಂತು ಹೇಳಿದರು: ಮಹಿಳೆಯರನ್ನು ಮತ್ತು ಮಕ್ಕಳನ್ನು ಪಟ್ಟಣದಲ್ಲೇ ಬಿಟ್ಟು ನಾವು ಪಟ್ಟಣದ ಹೊರಗೆ ಸೈನ್ಯದೊಂದಿಗೆ ಪಂಕ್ತಿಬದ್ಧರಾಗಿ ನಿಲ್ಲಬೇಕು ಡಮಸ್ಕಸ್ ಮತ್ತು ಪೆಲಸ್ತೀನ್ ಮಾರ್ಗದಿಂದ ಸಹಾಯಕ್ಕಾಗಿ ಬರಬೇಕು ಎಂದು ಖಾಲಿದ್ ಮತ್ತು ಅಮ್ರ್ ಬಿನ್ ಆಸ್‌ರಿಗೆ ಪತ್ರ ಬರೆಯಬೇಕು ಎಂಬುದಾಗಿದೆ ನನ್ನ ಅಭಿಪ್ರಾಯ. ಡಮಸ್ಕಸ್‌ನ ಮೇಲೆ ವಿಜಯ ಮೊದಲು ಲಭಿಸಿತ್ತು ಎಂದು ಇದರಿಂದ ಸಾಬೀತಾಗುತ್ತದೆ. ಶರಹ್‌ಬೀಲ್ ಬಿನ್ ಹಸನ ಹೇಳಿದರು: ಈ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿ ಸ್ವತಂತ್ರವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ನೀಡಬೇಕು. ಯಝೀದ್ ನೀಡಿದ ಅಭಿಪ್ರಾಯವು ನಿಸ್ಸಂಶಯವಾಗಿಯೂ ಸದುದ್ದೇಶದಿಂದಲೇ ಆಗಿತ್ತು. ಆದರೆ ನಾನು ಅದನ್ನು ವಿರೋಧಿಸುತ್ತೇನೆ. ಏಕೆಂದರೆ ಪಟ್ಟಣ ನಿವಾಸಿಗಳೆಲ್ಲರೂ ಕ್ರೈಸ್ತರಾಗಿದ್ದಾರೆ. ಅವರು ನಮ್ಮ ಪತ್ನಿ ಮಕ್ಕಳನ್ನೆಲ್ಲ ಹಿಡಿದು ರೋಮಿನ ಅರಸನಿಗೆ ಒಪ್ಪಿಸುವ ಅಥವಾ ಅವರನ್ನು ಸ್ವತಃ ಕೊಲ್ಲುವ ಸಾಧ್ಯತೆಯಿದೆ. ಅವರು ಸ್ವತಃ ನಮ್ಮ ಕುಟುಂಬದವರ ವಿರುದ್ಧ ನಿಲ್ಲಲೂ ಬಹುದು. ಹಝ್ರತ್ ಅಬೂಉಬೈದ(ರ) ಹೇಳಿದರು: ನಾವು ಕ್ರೈಸ್ತರನ್ನು ಪಟ್ಟಣದಿಂದ ಹೊರಗೆ ಹಾಕಿದರೆ ನಮ್ಮ ಪತ್ನಿ ಮಕ್ಕಳು ಸುರಕ್ಷಿತರಾಗುವರು. ಶರಹ್‌ಬೀಲ್ ಎದ್ದು ಹೇಳಿದರು: ಹೇ ಅಮೀರ್, ನಿಮಗೆ ಹೀಗೆ ಮಾಡುವ ಅಧಿಕಾರವಿಲ್ಲ. ಅವರು ಸಮಾಧಾನದಿಂದ ಪಟ್ಟಣದಲ್ಲಿ ನಲ್ಲಬಹುದು ಎಂಬ ನಿಬಂಧನೆಯೊಂದಿಗೆ ನಾವು ಕ್ರೈಸ್ತರಿಗೆ ಅಭಯ ನೀಡಿದ್ದೇವೆ. ಹೀಗಿರುವಾಗ ಪ್ರತಿಜ್ಞೆಯನ್ನು ಮುರಿಯುವುದು ಹೇಗೆ? ನಾವು ಒಂದು ಕೊಟ್ಟ ಮಾತನ್ನು ಮುರಿದು ಅವರನ್ನು ಪಟ್ಟಣದಿಂದ ಹೇಗೆ ಹೊರಗೆ ಹಾಕುವುದು. ಹಝ್ರತ್ ಅಬೂಉಬೈದ(ರ) ತನ್ನ ತಪ್ಪನ್ನು ಒಪ್ಪಿದರು. ಆದರೆ ಕೊನೆಗೆ ಮಾಡುವುದಾದರೂ ಏನು ಎಂಬುದರ ಬಗ್ಗೆ ತೀರ್ಮಾನವಾಗಲಿಲ್ಲ. ಹಿಮಸಿನಲ್ಲಿ ತಂಗಿ ಸೈನ್ಯದ ಸಹಾಯಕ್ಕಾಗಿ ಕಾಯಬೇಕು ಎಂದು ಜನಸಾಮಾನ್ಯರು ಅಭಿಪ್ರಾಯಪಟ್ಟರು. ಇಷ್ಟು ಸಮಯವೆಲ್ಲಿ ಎಂದು ಹಝ್ರತ್ ಅಬೂಉಬೈದ(ರ) ಕೇಳಿದರು. ಕೊನೆಗೆ ಹಿಮಸ್‌ನಿಂದ ಹೊರಟು ಡಮಸ್ಕಸಿಗೆ ರವಾನೆಯಾಗಲು ತೀರ್ಮಾನಿಸಲಾಯಿತು. ಅಲ್ಲಿ ಖಾಲಿದ್ ಇದ್ದರು. ಅರೇಬಿಯದ ಗಡಿಪ್ರದೇಶ ಅದರ ಸಮೀಪವಾಗಿತ್ತು. ಹೀಗೆ ಮಾಡಲು ದೃಢನಿರ್ಧಾರ ಮಾಡಿದ ನಂತರ ಹಝ್ರತ್ ಅಬೂಉಬೈದ(ರ) ಖಜಾನೆಯ ಅಧಿಕಾರಿಯಾಗಿದ್ದ ಹಬೀಬ್ ಬಿನ್ ಮಸ್ಲಮರನ್ನು ಕರೆದು ಹೇಳಿದರು: ಕ್ರೈಸ್ತರಿಂದ ಪಡೆಯಲಾಗುವ ಜಿಝಿಯ, ಎಂದರೆ ಟಾಕ್ಸನ್ನು ಅವರಿಗೆ ಮರಳಿಕೊಡಬೇಕು. ಏಕೆಂದರೆ ಅದನ್ನು ಅವರ ಒಳಿತಿಗಾಗಿ ಅವರ ಸಂರಕ್ಷಣೆಯ ಕೆಲಸಕ್ಕಾಗಿ ಪಡೆಯಲಾಗುತ್ತದೆ. ಆದರೆ ಈಗ ನಮಗೆ ಅವರನ್ನು ಸಂರಕ್ಷಿಸಲು ಸಾಧ್ಯವಲ್ಲ.

ಅವರೊಡನೆ ಹೇಳು: ನಮಗೆ ನಿಮ್ಮೊಂದಿಗೆ ಇರುವ ಸಂಬಂಧ ಈಗಲೂ ಇದೆ. ಆದರೆ ನಿಮ್ಮನ್ನು ರಕ್ಷಿಸುವ ಜವಾಬ್ದಾರಿ ಈಗ ನಮ್ಮಿಂದ ಸಾಧ್ಯವಲ್ಲ. ಆದ್ದರಿಂದ ಸಂರಕ್ಷಣೆಯ ಬದಲಾಗಿ ನೀವು ನೀಡುವ ಜಿಝಿಯವನ್ನು ನಿಮಗೆ ಮರಳಿಕೊಡಲಾಗುತ್ತಿದೆ.

ಹೀಗೆ ಅವರಿಂದ ವಸೂಲು ಮಾಡಲಾದ ಅನೇಕ ಲಕ್ಷದಷ್ಟು ಹಣವನ್ನು ಮರಳಿ ಕೊಡಲಾಯಿತು. ಕ್ರೈಸ್ತರು ಇದರಿಂದ ಎಷ್ಟು ಪ್ರಭಾವಿತರಾದರು ಎಂದರೆ, ಅವರು ಅಳುತ್ತಾ ಹೋಗುತ್ತಿದ್ದರು ಮತ್ತು ಆವೇಶದಿಂದ ಹೀಗೆ ಹೇಳುತ್ತಿದ್ದರು: ದೇವನು ನಿಮ್ಮನು ಮರಳಿ ತರಲಿ. ಯಹೂದಿಯರ ಮೇಲೆ ಅದಕ್ಕಿಂತ ಹೆಚ್ಚು ಪ್ರಭಾವವುಂಟಾಯಿತು. ಅವರು ಹೇಳಿದರು: ತೌರಾತಿನ ಆಣೆ, ನಾವು ಜೀವಂತವಾಗಿರುವ ತನಕ ರೋಮ್ ಚಕ್ರವರ್ತಿಗೆ ಹಿಮ್ಸ್‌ನ್ನು ವಶಪಡಿಸಲು ಸಾಧ್ಯವಿಲ್ಲ. ಹೀಗೆ ಹೇಳಿ ಪಟ್ಟಣದ ಹೆಬ್ಬಾಗಿಲನ್ನು ಮುಚ್ಚಿದರು ಮತ್ತು ಪ್ರತಿಯೊಂದು ಜಾಗದಲ್ಲಿ ಕಾವಲುಗಾರರನ್ನು ಇರಿಸಿದರು. ಅಬೂಉಬೈದ(ರ) ಹೀಗೆ ವರ್ತಿಸಿದ್ದು ಹಿಮ್ಸಿನ ಜನರೊಂದಿಗೆ ಮಾತ್ರವಲ್ಲ. ಬದಲಾಗಿ ಎಷ್ಟೆಲ್ಲ ಜಿಲ್ಲೆಗಳ ಮೇಲೆ ವಿಜಯ ಸಾಧಿಸಲಾಗಿತ್ತೋ ಅಲ್ಲೆಲ್ಲ ಹೀಗೆ ಪತ್ರ ಬರೆದು ತಿಳಿಸಿದರು. ಎಂದರೆ, ಎಷ್ಟು ಹಣವನ್ನು ವಸೂಲು ಮಾಡಲಾಗಿತ್ತೋ ಅದನ್ನು ಮರಳಿ ಕೊಡಬೇಕು ಎಂದು ಹೇಳಿದರು. ಒಟ್ಟಿನಲ್ಲಿ, ಅಬೂಉಬೈದ ಡಮಸ್ಕಸಿಗೆ ರವಾನೆಯಾದರು. ಈ ಎಲ್ಲ ಸ್ಥಿತಿಗತಿಗಳ ಬಗ್ಗೆ ಹಝ್ರತ್ ಉಮರ್‌ರಿಗೆ ತಿಳಿಸಿದರು.

ರೋಮನ್ನರನ್ನು ಹೆದರಿ ಮುಸ್ಲಿಮರು ಹಿಮ್ಸಿಗೆ ಹೋಗಿರುವರು ಎಂದು ಹಝ್ರತ್ ಉಮರ್‌ರಿಗೆ ಗೊತ್ತಾದಾಗ ಅವರು ಬಹಳ ದುಃಖಿತರಾದರು. ಆದರೆ ಸಂಪೂರ್ಣ ಸೈನಿಕರು ಮತ್ತು ಸೇನಾಧಿಪತಿಗಳು ಇದೇ ತೀರ್ಮಾನವನ್ನು ಮಾಡಿರುವರು ಎಂದು ಗೊತ್ತಾದಾಗ ಅವರು ಸಮಾಧಾನಗೊಂಡರು ಮತ್ತು ಅಲ್ಲಾಹನ ಯಾವುದಾದರೂ ಉದ್ದೇಶದಿಂದ ಎಲ್ಲ ಮುಸ್ಲಿಮರು ಒಮ್ಮತಾಭಿಪ್ರಾಯದಿಂದ ಹೀಗೆ ಮಾಡುವಂತೆ ಮಾಡಿರಬಹುದು ಎಂದು ಹೇಳಿದರು. ಹಝ್ರತ್ ಉಮರ್‌ರೊಡನೆ ಕೇಳಲಾಗಿತ್ತು ಎಂಬುದಾಗಿಯೂ ವರದಿಗಳು ಇವೆ. ನಿಮಗೆ ಸಂರಕ್ಷಿಸಲು ಸಾಧ್ಯವಿಲ್ಲವಾದರೆ ಅವರಿಂದ ಪಡೆಯಲಾದ ಜಿಝಿಯ ಇತ್ಯಾದಿಗಳನ್ನು ಮರಳಿ ಕೊಡಬೇಕೆಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೇ ಹೇಳಿದ್ದರು. ಹಝ್ರತ್ ಉಮರ್(ರ) ಅಬೂಉಬೈದರಿಗೆ ಹೀಗೆ ಪತ್ರ ಬರೆದರು: ಸಹಾಯಕ್ಕಾಗಿ ಸಈದ್ ಬಿನ್ ಅಹ್ಮರ್‌ರನ್ನು ಕಳುಹಿಸುತ್ತೇನೆ. ಆದರೆ ವಿಜಯ ಮತ್ತು ಸೋಲು ಸೈನ್ಯದ ಆಧಿಕ್ಯ ಅಥವಾ ಕೊರತೆಯ ಆಧಾರದಲ್ಲಿ ಆಗಿರುವುದಿಲ್ಲ. ಅಬೂಉಬೈದ ಡಮಸ್ಕಸಿಗೆ ತಲುಪಿ ಎಲ್ಲ ಅಧಿಕಾರಿಗಳನ್ನು ಒಟ್ಟುಸೇರಿಸಿದರು. ಅವರೊಡನೆ ಸಮಾಲೋಚನೆ ನಡೆಸಿದರು. ಯಝೀದ್ ಬಿನ್ ಅಬೀ ಸುಫ್‌ಯಾನ್, ಶರಹ್‌ಬೀಲ್ ಬಿನ್ ಹಸನ, ಮುಆಧ್ ಬಿನ್ ಜಬಲ್ ಎಲ್ಲರೂ ವಿಭಿನ್ನ ಅಭಿಪ್ರಾಯಗಳನ್ನು ಹೇಳಿದರು. ಅದೇ ವೇಳೆ ಅಮ್ರ್ ಬಿನ್ ಆಸ್‌ನ ದೂತನು ಪತ್ರವನ್ನು ಕೊಂಡುಬಂದನು. ಅದರಲ್ಲಿ ಹೀಗೆ ಬರೆಯಲಾಗಿತ್ತು: ಜೋರ್ದನಿನ ಜಿಲ್ಲೆಗಳಲ್ಲಿ ಪೂರ್ಣವಾಗಿ ದಂಗೆಯೆದ್ದಿದೆ. ರೋಮನ್ನರ ಬರುವಿಕೆ ಅತಿಯಾದ ಕೋಲಾಹಲವನ್ನು ಉಂಟುಮಾಡಿದೆ. ಹಿಮ್ಸನ್ನು ಬಿಟ್ಟು ಬಂದದ್ದು ಶತ್ರುಗಳ ಧೈರ್ಯಕ್ಕೆ ಕಾರಣವಾಗಿದೆ. ಅಬೂಉಬೈದ(ರ) ಅದಕ್ಕೆ ಉತ್ತರವಾಗಿ ಹೀಗೆ ಪತ್ರ ಬರೆದರು: ನಾವು ಹಿಮ್ಸಿನಿಂದ ಹೆದರಿ ಹೊರಟಿಲ್ಲ. ಶತ್ರುಗಳು ಸುರಕ್ಷಿತ ಸ್ಥಳಗಳಿಂದ ಹೊರಗೆ ಬರಲಿ ಮತ್ತು ಅನೇಕ ಸ್ಥಳಗಳಲ್ಲಿ ಹರಡಿರುವ ಇಸ್ಲಾಮಿನ ಸೈನಿಕರು ಒಟ್ಟುಸೇರಲಿ ಎಂದಾಗಿದ್ದುವು ಅದರ ಉದ್ದೇಶ. ಪತ್ರದಲ್ಲಿ ಹೀಗೆಯೂ ಬರೆಯಲಾಗಿತ್ತು: ನೀವು ನಿಮ್ಮ ಜಾಗದಿಂದ ಹೊರಡಬೇಡಿರಿ. ನಾನು ಅಲ್ಲೇ ಬಂದು ನಿಮ್ಮನ್ನು ಭೇಟಿಯಾಗುತ್ತೇನೆ. ಎರಡನೇ ದಿನ ಅಬೂಉಬೈದ ಡಮಸ್ಕಸಿನಿಂದ ರವಾನೆಯಾದರು. ಜೋರ್ದನಿನ ಗಡಿಯಲ್ಲಿ ಯರ್ಮೂಕಿಗೆ ಬಂದು ತಂಗಿದರು. ಯರ್ಮೂಕ್ ಎಂಬುದು ಸಿರಿಯದ ಪರಿಸರದಲ್ಲಿರುವ ಇಳಿಜಾರು ಕಣಿವೆಯಾಗಿತ್ತು. ಅಲ್ಲಿ ಜೋರ್ದನ್ ನದಿ ಹರಿಯುತ್ತಿತ್ತು. ಅಮ್ರ್ ಬಿನ್ ಆಸ್ ಸಹ ಇಲ್ಲೇ ಬಂದು ಭೇಟಿಯಾಗಿದ್ದರು. ಈ ಸ್ಥಳ ಯುದ್ಧದ ಆವಶ್ಯಕತೆಗಳಿಗಾಗಿ ಸರಿಯಾದ ಸ್ಥಳವಾಗಿರಲು ಒಂದು ಕಾರಣವೇನೆಂದರೆ, ಇಲ್ಲಿಂದ ಅರೇಬಿಯದ ಗಡಿಪ್ರದೇಶ ಬಾಕಿಯೆಲ್ಲ ಪ್ರದೇಶಗಳಿಗಿಂತ ಸಮೀಪವಾಗಿತ್ತು. ಹಿಂದಿನ ಭಾಗದಲ್ಲಿ ಅರೇಬಿಯದ ಗಡಿಪ್ರದೇಶದ ತನಕ ತೆರೆದ ಮೈದಾನವಾಗಿತ್ತು. ಇದರಿಂದ ಆವಶ್ಯಬಂದರೆ ಇಷ್ಟವಿರುವ ತನಕ ಹಿಂದಕ್ಕೆ ಸರಿಯಬಹುದಾಗಿತ್ತು.

ಸಈದ್ ಬಿನ ಆಮಿರ್‌ರ ಜೊತೆಗೆ ಹಝ್ರತ್ ಉಮರ್(ರ) ಕಳುಹಿಸಿದ ಸೈನ್ಯ ಆಗಲೂ ತಲುಪಿರಲಿಲ್ಲ. ಮತ್ತೊಂದೆಡೆ ರೋಮನ್ನರು ಬರುವಿಕೆ ಮತ್ತು ಅವರ ಸಾಮಾನುಗಳ ಬಗ್ಗೆ ಕೇಳಿ ಮುಸ್ಲಿಮರು ಹೆದರುತ್ತಿದ್ದರು. ಹಝ್ರತ್ ಉಮರ್‌ರ(ರ) ಬಳಿಗೆ ಅಬೂಉಬೈದ(ರ) ಮೊತ್ತೊಬ್ಬ ದೂತನನ್ನು ಕಳುಹಿಸಿದರು ಮತ್ತು ರೋಮನ್ನರು ನೆಲ ಮತ್ತು ಸಮುದ್ರ ಮಾರ್ಗವಾಗಿ ಬರುತ್ತಿರುವುದರ ಬಗ್ಗೆ ಸಂದೇಶ ತಲುಪಿಸಿದರು. ಆವೇಶದ ಸ್ಥಿತಿಯೇನಾಗಿತ್ತು ಎಂದರೆ, ಸೈನ್ಯ ಯಾವ ಮಾರ್ಗದಿಂದ ಹೋಗುತ್ತಿತ್ತೋ, ಏಕಾಂತ ವಾಸದಿಂದ ಹಿಂದೆಂದಿಗೂ ಹೊರಬರದಿದ್ದ ಅಲ್ಲಿಯ ಪುರೋಹಿತರು ಮತ್ತು ಪಾದ್ರಿಗಳು ಕೂಡ ಹೊರಗೆ ಬಂದು ಸೈನ್ಯದೊಂದಿಗೆ ಸೇರುತ್ತಿದ್ದರು ಎಂಬ ಸಂಗತಿಯನ್ನು ಸಹ ತಿಳಿಸಿದರು. ಈ ಪತ್ರ ತಲುಪಿದಾಗ ಹಝ್ರತ್ ಉಮರ್(ರ) ಮುಹಾಜಿರರು ಮತ್ತು ಅನ್ಸಾರರನ್ನು ಒಟ್ಟುಸೇರಿಸಿದರು ಮತ್ತು ಪತ್ರವನ್ನು ಓದಿ ಹೇಳಿದರು. ಎಲ್ಲ ಸಹಾಬರು ಅನಿಯಂತ್ರಿತವಾಗಿ ಅತ್ತುಬಿಟ್ಟರು ಮತ್ತು ಅತ್ಯಂತ ಆವೇಶದಿಂದ ಜೋರಾಗಿ ಹೀಗೆ ಹೇಳಿದರು: ಹೇ ಅಮೀರಲ್ ಮೂಅ್‌ಮಿನೀನ್, ಅಲ್ಲಾಹನ ಸಲುವಾಗಿ ನಮಗೆ ಅನುಮತಿ ಕೊಡಿರಿ. ನಾವು ನಮ್ಮ ಸಹೋದರರಿಗಾಗಿ ಜೀವತ್ಯಾಗ ಮಾಡುವೆವು. ಶತ್ರುಗಳು ಮುಸ್ಲಿಮರ ಕೂದಲನ್ನು ಕೂಡ ಹಾನಿಗೊಳಿಸಿದರೆ ನಾವು ಜೀವಂತವಾಗಿರುವುದೇ ವ್ಯರ್ಥವಾಗುವುದು. ಮುಹಾಜಿರರ ಮತ್ತು ಅನ್ಸಾರರ ಆವೇಶ ವರ್ಧಿಸುತ್ತಾ ಹೋಗುತ್ತಿತ್ತು. ಎಲ್ಲಿಯ ವರೆಗೆ ಎಂದರೆ, ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ಅಮೀರಲ್ ಮೂಮಿನೀನ್, ನೀವು ಸ್ವತಃ ಸೇನಾಧಿಪತಿಯಾಗಿರಿ ಮತ್ತು ನಮ್ಮನ್ನು ಜೊತೆ ಕರೆದುಕೊಂಡು ಹೋಗಿರಿ. ಆದರೆ ಸಹಾಬರಲ್ಲಿ ಈ ಅಭಿಪ್ರಾಯದ ಬಗ್ಗೆ ಭಿನ್ನಾಭಿಪ್ರಾಯವುಂಟಾಯಿತು. ಇನ್ನಷ್ಟು ಸಹಾಯಕ ಸೈನ್ಯವನ್ನು ಕಳುಹಿಸಲು ತೀರ್ಮಾನಿಸಲಾಯಿತು. ಶತ್ರುಗಳು ಎಲ್ಲಿಯ ತನಕ ತಲುಪಿದ್ದಾರೆ ಎಂದು ಹಝ್ರತ್ ಉಮರ್(ರ) ದೂತನೊಡನೆ ಕೇಳಿದರು. ಅವರು ಹೇಳಿದರು: ಯರ್ಮೂಕಿನಿಂದ ಮೂರ್‍ನಾಲ್ಕು ತಂಗುದಾಣಗಳ ದೂರದಲ್ಲಿದ್ದಾರೆ. ಹಝ್ರತ್ ಉಮರ್(ರ) ಬಹಳ ದುಃಖಿತರಾದರು ಮತ್ತು ಹೀಗೆ ಹೇಳಿದರು: ಈಗ ಏನು ಮಾಡುವುದು? ಇಷ್ಟು ಕಡಿಮೆ ಸಮಯದೊಳಗೆ ಹೇಗೆ ಸಹಾಯ ತಲುಪಿಸುವುದು? ಅಬೂಉಬೈದರ ಹೆಸರಲ್ಲಿ ಅತ್ಯಂತ ಪ್ರಭಾವಶಾಲಿ ವಾಕ್ಯಗಳೊಂದಿಗೆ ಒಂದು ಪತ್ರವನ್ನು ಬರೆದರು ಮತ್ತು ದೂತನೊಡನೆ ಹೇಳಿದರು ನೀನು ಸ್ವತಃ ಸೈನ್ಯದ ಪ್ರತಿಯೊಂದು ಪಂಕ್ತಿಗೆ ಹೋಗಿ ಈ ಪತ್ರವನ್ನು ಓದಿ ಹೇಳಬೇಕು. ಅವರೊಡನೆ ಹೀಗೆಯೂ ಹೇಳಬೇಕು: ಉಮರ್ ನಿಮಗೆ ಸಲಾಂ ಹೇಳುತ್ತಾರೆ, ಎಲೈ ಮುಸ್ಲಿಮರೇ, ಧೈರ್ಯದಿಂದ ಹೋರಾಡಿರಿ, ತಮ್ಮ ಶತ್ರುಗಳ ವಿರುದ್ಧ ಸಿಂಹಗಳ ಹಾಗೆ ಎರಗಿರಿ, ಖಡ್ಗಗಳಿಂದ ಅವರ ತಲೆಬುರುಡೆಗಳನ್ನು ತುಂಡುಮಾಡಿರಿ, ಅವರು ನಿಮ್ಮ ಮುಂದೆ ಇರುವೆಗಳಿಗಿಂತ ಕೀಳಾಗಿರುವರು. ಅವರ ಸೈನ್ಯದ ಆಧಿಕ್ಯ ನಿಮ್ಮನ್ನು ಭಯಗೊಳಿಸದಿರಲಿ, ನಿಮ್ಮೊಂದಿಗೆ ಇಲ್ಲಿಯ ವರೆಗೂ ಬಂದು ಸೇರದ ಸಹಾಯಕ ಸೈನ್ಯ ಬಗ್ಗೆ ಯೋಚಿಸಿ ಚಿಂತಿಸಬೇಡಿರಿ. ಕಾಕತಾಳಿಯವೆಂಬಂತೆ, ದೂತನು ಅಬೂಉಬೈದರ ಬಳಿಗೆ ತಲುಪಿದ ಅದೇ ದಿನ ಸಈದ್ ಬಿನ್ ಆಮಿರ್ ಸಹ ಸಾವಿರ ಸೈನಿಕರೊಂದಿಗೆ ಅಲ್ಲಿಗೆ ತಲುಪಿದರು. ಮುಸ್ಲಿಮರು ಬಹಳ ಸುದೃಢಗೊಂಡರು. ಅವರು ಅತ್ಯಂತ ಸ್ಥಿರಚಿತ್ತತೆಯಿಂದ ಯುದ್ಧದ ತಯಾರಿ ನಡೆಸಲು ಶುರುಮಾಡಿದರು.

ಬಹಳ ಉನ್ನತ ಸ್ಥಾನದ ಸಹಾಬಿಯಾದ ಮುಆಧ್ ಬಿನ್ ಜಬಲ್‌ರನ್ನು ಮೈಮನಗೆ ಕಳುಹಿಸಲಾಯಿತು. ಖುಬಾಸ್ ಬಿನ್ ಅಶೀಮ್‌ರನ್ನು ಮೈಸರದ ಮತ್ತು ಹಾಶಿಂ ಬಿನ್ ಉತ್ಬರನ್ನು ಕಾಲಾಳು ಸೈನ್ಯದ ಅಧಿಕಾರಿಗಳನ್ನಾಗಿ ಮಾಡಲಾಯಿತು. ತನ್ನ ಸವಾರಿ ಸೈನ್ಯವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಯಿತು. ಒಂದರ ನೇತೃತ್ವವನ್ನು ಸ್ವತಃ ವಹಿಸಿದರು. ಉಳಿದ ಪ್ರತಿಯೊಂದು ವಿಭಾಗಕ್ಕೆ ಖೈಸ್ ಬಿನ್ ಹಬೀರ, ಮೈಸರ ಬಿನ್ ಮಸ್‌ರೂಕ್, ಅಮ್ರ್ ಬಿನ್ ತುಫೈಲ್‌ರನ್ನು ನಿಶ್ಚಯಿಸಿದರು. ಈ ಮೂವರು ಅರೇಬಿಯದಲ್ಲಿ ಧೈರ್ಯಶಾಲಿಗಳೆಂದು ಕರೆಯಲ್ಪಡುತ್ತಿದ್ದರು. ಅದೇ ಕಾರಣದಿಂದ ಫಾರಿಸುಲ್ ಅರಬ್ ಎಂದು ಕರೆಯಲ್ಪಡುತ್ತಿದ್ದರು. ಎಂದರೆ ಅರೇಬಿಯದ ನುರಿತ ಕುದುರೆ ಸವಾರರು. ರೋಮನರು ಸಹ ಬಹಳ ಸಾಧನ ಸಾಮುಗ್ರಿಗಳೊಂದಿಗೆ ಹೊರಟಿದ್ದರು. ಎರಡು ಲಕ್ಷಕ್ಕಿಂತ ಹೆಚ್ಚಿನ ಸೈನಿಕರ ಸೈನ್ಯವಾಗಿತ್ತು. 24 ಪಂಕ್ತಿಗಳಿದ್ದುವು. ಅವುಗಳ ಮುಂದೆ ಮುಂದೆಯಾಗಿ ಅವರ ಧಾರ್ಮಿಕ ಮುಖಂಡರು ಕೈಗಳಲ್ಲಿ ಶಿಲುಬೆಗಳನ್ನು ಹಿಡಿದುಕೊಂಡು ಸೈನಕರಿಗೆ ಆವೇಶ ತುಂಬಿಸುತ್ತಿದ್ದರು.

ಎರಡು ಪಕ್ಷಗಳ ಸೈನ್ಯಗಳು ಮುಖಾಮುಖಿಯಾದಾಗ ಕ್ರೈಸ್ತರ ಒಬ್ಬ ಧಾರ್ಮಿಕ ಮುಖಂಡನು ಮುಂದೆ ಬಂದು ಹೀಗೆ ಹೇಳಿದನು: ನಾನು ಒಬ್ಬಂಟಿಯಾಗಿ ಹೋರಾಡಲು ಬಯಸುತ್ತೇನೆ. ಮೈಸರ ಬಿನ್ ಮಸ್ರೂಖ್ ಕುದುರೆಯನ್ನು ಮುಂದಕ್ಕೆ ಓಡಿಸಲು ತಯಾರಾದರು. ಆದರೆ ಎದುರಾಳಿ ಅತ್ಯಂತ ಬಲಶಾಲಿ ಮತ್ತು ಯುವಕನಾಗಿದ್ದ ಕಾರಣ ಖಾಲಿದ್ ಅವರನ್ನು ತಡೆದರು ಮತ್ತು ಖೈಸ್ ಬಿನ್ ಹುವೈರರ ಕಡೆಗೆ ನೋಡಿದರು. ಅವರು ಹಾಡುತ್ತಾ ಮುಂದಕ್ಕೆ ಧಾವಿಸಿದರು. ಆ ಕ್ರೈಸ್ತ ಮುಖಂಡನ ಮೇಲೆ ಹಲ್ಲೆ ನಡೆಸಿದರು. ಅವನಿಗೆ ತನ್ನ ಅಸ್ತ್ರವನ್ನು ಕೂಡ ಸರಿಯಾಗಿ ಹಿಡಿಯಲಾಗಲಿಲ್ಲ. ಖೈಸ್ ಬಿನ್ ಹುವೈರರ ಖಡ್ಗ ಅವನ ತಲೆಗೆ ಬಡಿಯಿತು. ತಲೆಯನ್ನು ಕತ್ತರಿಸುತ್ತಾ ಕುತ್ತಿಗೆ ತನಕ ತಲುಪಿತು. ಕ್ರೈಸ್ತ ಮುಖಂಡನು ಅಲುಗಾಡುತ್ತಾ ಕುದುರೆಯಿಂದ ಬಿದ್ದುಬಿಟ್ಟನು. ಅದರೊಂದಿಗೆ ಮುಸ್ಲಿಮರು ತಕ್ಬೀರಿನ ಘೋಷಣೆ ಕೂಗಿದರು. ಇದು ಒಳ್ಳೆಯ ಶಕುನವೆಂದು ಖಾಲಿದ್(ರ) ಹೇಳಿದರು. ಈಗ ಅಲ್ಲಾಹನು ಇನ್ನು ಅಲ್ಲಾಹನು ಇಚ್ಛಿಸಿದರೆ ವಿಜಯ ನಮ್ಮದೇ ಆಗಿರುವುದು. ಕ್ರೈಸ್ತರು ಖಾಲಿದ್‌ರೊಂದಿಗೆ ಇದ್ದ ಸವಾರರಾದ ಅಧಿಕಾರಿಗಳ ಮುಖಾಮುಖಿಯಾಗಿ ಬೇರೆ ಬೇರೆ ಸೈನ್ಯವನ್ನು ನಿಶ್ಚಯಿಸಿದರು. ಆದರೆ ಎಲ್ಲರೂ ಸೋಲನುಭವಿಸಿದರು. ಹೀಗೆ ಯುದ್ಧ ಮುಂದೂಡಲ್ಪಟ್ಟಿತು. ರೋಮನರು ಸೋಲುತ್ತಿರುವುದರಿಂದ ರಾತ್ರಿ ಸಮಯದಲ್ಲಿ ಸೇನಾಧಿಪತಿಯಾದ ಬಾಹಾನನು ಎಲ್ಲ ಸರದಾರರನ್ನು ಒಟ್ಟುಸೇರಿಸಿದರು ಮತ್ತು ಹೀಗೆ ಹೇಳಿದರು: ಅರೇಬಿಯರಿಗೆ

ಸಿರಿಯದ ಸಂಪತ್ತಿನ ರುಚಿಯ ಅಭ್ಯಾಸವಾಗಿದೆ. ಆದ್ದರಿಂದ ಸಂಪತ್ತು ಮತ್ತು ಚಿನ್ನಬಂಗಾರದ ಲಾಲಸೆ ಉಂಟುಮಾಡಿಸಿ ಮುಸ್ಲಿಮರನ್ನು ಇಲ್ಲಿಂದ ಅಟ್ಟಿಸುವುದೇ ಯುದ್ಧ ಮಾಡುವುದಕ್ಕಿಂತ ಉತ್ತಮ. ಎಲ್ಲರೂ ಈ ಅಭಿಪ್ರಾಯವನ್ನು ಒಪ್ಪಿದರು. ಮುಂದಿನ ದಿನ ಅಬೂಉಬೈದರ ಬಳಿಗೆ ದೂತನನ್ನು ಕಳುಹಿಸಿದರು. ದೂತನು ಹೀಗೆ ಹೇಳಿದನು: ಯಾರಾದರೂ ಗೌರವಾನ್ವಿತ ಅಧಿಕಾರಿಯನ್ನು ನಮ್ಮ ಬಳಿಗೆ ಕಳುಹಿಸಿರಿ ನಾವು ಸಂಧಾನದ ಮಾತುಕತೆ ನಡೆಸಲು ಬಯಸುತ್ತೇವೆ. ಖಾಲಿದ್‌ರನ್ನು ಅಬೂಉಬೈದ ಅದಕ್ಕಾಗಿ ಆಯ್ಕೆ ಮಾಡಿದರು. ಸಂದೇಶವನ್ನು ಕೊಂಡುಬಂದ ದೂತನ ಹೆಸರು ಜಾರ್ಜ್ ಎಂದಾಗಿತ್ತು. ದೂತನು ತಲುಪಿದಾಗ ಸಂಜೆಯಾಗಿತ್ತು. ಸ್ವಲ್ಪ ಸಮಯದಲ್ಲಿ ಮಗ್‌ರಿಬ್ ನಮಾಝ್ ಶುರುವಾಗಿತ್ತು. ನಿರ್ವಹಿಸುತ್ತಿದ್ದರು. ಮುಸ್ಲಿಮರು ಆವೇಶ ಮತ್ತು ಆಸಕ್ತಿಯಿಂದ ತಕ್ಬೀರ್ ಹೇಳಿ ನಮಾಝಿಗಾಗಿ ನಿಂತರು. ಮುಸ್ಲಿಮರ ಮಗ್ನತೆ, ಮರ್ಯಾದೆ, ಸಭ್ಯತೆ ಮತ್ತು ವಿನಯವಂತಿಕೆಯನ್ನು ದೂತನು ಬಹಳ ಆಶ್ಚರ್ಯದಿಂದ ನೋಡುತ್ತಿದ್ದನು. ನಮಾಝಿನ ನಂತರ ದೂತನು ಹಝ್ರತ್ ಅಬೂಉಬೈದರೊಡನೆ ಕೆಲವು ಸವಾಲುಗಳನ್ನು ಕೇಳಿದರು. ಅದರಲ್ಲಿ ಒಂದು ಇದಾಗಿತ್ತು: ಈಸಾ ಮಸೀಹರ ಕುರಿತು ನಿಮ್ಮ ವಿಶ್ವಾಸವೇನು? ಅದಕ್ಕೆ ಉತ್ತರವಾಗಿ ಹಝ್ರತ್ ಅಬೂಉಬೈದ(ರ) ಪವಿತ್ರ ಖುರ್‌ಆನಿನ ಸೂರಃ ಆಲಿ ಇಮ್ರಾನಿನ 60ನೇ ವಚನ ಮತ್ತು ಸೂರಃ ನಿಸಾದ 172 ಮತ್ತು 173ನೇ ವಚನವನ್ನು ಪಾರಾಯಣ ಮಾಡಿದರು. ಅದು ಹೀಗಿದೆ:

إِنَّ مَثَلَ عِيسَىٰ عِندَ اللَّهِ كَمَثَلِ آدَمَ خَلَقَهُ مِن تُرَابٍ ثُمَّ قَالَ لَهُ كُن فَيَكُونُ ○

يَا أَهْلَ الْكِتَابِ لَا تَغْلُوا فِي دِينِكُمْ وَلَا تَقُولُوا عَلَى اللَّهِ إِلَّا الْحَقَّ إِنَّمَا الْمَسِيحُ عِيسَى ابْنُ مَرْيَمَ رَسُولُ اللَّهِ وَكَلِمَتُهُ أَلْقَاهَا إِلَىٰ مَرْيَمَ وَرُوحٌ مِّنْهُ فَآمِنُوا بِاللَّهِ
وَرُسُلِهِ وَلَا تَقُولُوا ثَلَاثَةٌ انتَهُوا خَيْرًا لَّكُمْ إِنَّمَا اللَّهُ إِلَٰهٌ وَاحِدٌ سُبْحَانَهُ أَن يَكُونَ لَهُ وَلَدٌ لَّهُ مَا فِي السَّمَاوَاتِ وَمَا فِي الْأَرْضِ وَكَفَىٰ بِاللَّهِ وَكِيلًا ○

لَّن يَسْتَنكِفَ الْمَسِيحُ أَن يَكُونَ عَبْدًا لِّلَّهِ وَلَا الْمَلَائِكَةُ الْمُقَرَّبُونَ ○

ಅರ್ಥ: ನಿಶ್ಚಯವಾಗಿಯೂ ಅಲ್ಲಾಹನ ಬಳಿ ಈಸಾರ ಸ್ಥಿತಿ ಆದಮರ ಸ್ಥಿತಿಯಂತೆಯೇ ಆಗಿದೆ; ಅವರನ್ನು ಅವನು ಮಣ್ಣಿನಿಂದ ಸೃಷ್ಟಿಸಿದನು. ನಂತರ ಅವರೊಡನೆ "ಆಗು" ಎಂದು ಹೇಳಿದನು. ಆಗ ಅವರು ಆದರು. ಎಲೈ ಗ್ರಂಥದವರೇ, ನೀವು ನಿಮ್ಮ ಧರ್ಮ ಕಾರ್ಯಗಳಲ್ಲಿ ಮಿತಿಮೀರಬೇಡಿರಿ. ಅಲ್ಲಾಹನ ಬಗ್ಗೆ ಸತ್ಯವನ್ನಲ್ಲದೆ ನೀವು ಹೇಳಬೇಡಿರಿ. ದಿಟವಾಗಿಯೂ ಮರ್ಯಮ್‌ರ ಪುತ್ರ ಈಸಾ ಮಸೀಹ್ ಅಲ್ಲಾಹನ ಕೇವಲ ಒಬ್ಬ ಸಂದೇಶವಾಹಕರಾಗಿದ್ದರು. ಅವರು ಮರ್ಯಮ್‌ರಿಗೆ ಅವನು ಅವತೀರ್ಣಗೊಳಿಸಿದ ವಚನದ ಈಡೇರಿಕೆಯೂ ಒಂದು ಅನುಗ್ರಹವೂ ಆಗಿದ್ದರು. ಆದುದರಿಂದ ನೀವು ಅಲ್ಲಾಹನಲ್ಲೂ ಅವನ ಎಲ್ಲ ಸಂದೇಶವಾಹಕರಲ್ಲೂ ವಿಶ್ವಾಸವಿಡಿರಿ. 'ದೇವರು' ಮೂವರು ಎಂದು ನೀವು ಹೇಳಬೇಡಿರಿ. ನೀವು (ಹಾಗೆ ಹೇಳುವುದನ್ನು) ಬಿಟ್ಟುಬಿಡಿರಿ. (ಅದು) ನಿಮಗೆ ಗುಣಕರ. ನಿಸ್ಸಂದೇಹವಾಗಿಯೂ ಅಲ್ಲಾಹನು ಒಬ್ಬನೇ ದೇವ. ಅವನಿಗೆ ಸಂತಾನವುಂಟಾಗುವುದೆಂಬುದು ಅವನ ಪರಿಶುದ್ಧತೆಗೆ ಎಷ್ಟೋ ದೂರದ ಮಾತು. ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ರಕ್ಷಕನಾಗಿ ಅಲ್ಲಾಹನೇ ಸಾಕು. ತಾನು ಅಲ್ಲಾಹನ ಒಬ್ಬ ದಾಸನೆಂಬುದನ್ನು ಈಸಾ ಮಸೀಹರು ಕೆಟ್ಟದಾಗಿ ಭಾವಿಸಲಾರರು. ಹಾಗೆಯೇ ಸಾಮೀಪ್ಯ ಪಡೆದ ದೇವದೂತರು ಸಹ ಕೆಟ್ಟದಾಗಿ ಭಾವಿಸಲಾರರು.

ತರ್ಜುಮೆ ಮಾಡುವ ವ್ಯಕ್ತಿ ಈ ಆಯತುಗಳ ತರ್ಜುಮೆ ಮಾಡಿದರು ಆಗ ದೂತನು ಅನಿಯಂತ್ರಿತವಾಗಿ ಜೋರಾಗಿ ಹೀಗೆ ಹೇಳಿದನು: ಈಸಾ ಮಸೀಹರ ಗುಣಗಳು ಇವೇ ಆಗಿವೆ ಎಂದು ನಾನು ಸಾಕ್ಷ್ಯ ವಹಿಸುತ್ತೇನೆ ಮತ್ತು ನಿಮ್ಮ ರಸೂಲ್ ಖಂಡಿತವಾಗಿಯೂ ಸತ್ಯವಂತರಾಗಿರುವರು ಎಂದೂ ನಾನು ಸಾಕ್ಷ್ಯವಹಿಸುತ್ತೇನೆ.

ಅನಂತರ ಅವನು ತೌಹೀದ್ ಕಲಿಮ ಉಚ್ಚರಿಸಿ ಮುಸ್ಲಿಮನಾದನು. ತನ್ನ ಸಮುದಾಯದ ಬಳಿಗೆ ಮರಳಿ ಹೋಗಲು ಬಯಸುತ್ತಿರಲಿಲ್ಲ. ಆದರೆ ಮುಸ್ಲಿಮರು ಪ್ರತಿಜ್ಞೆಯನ್ನು ಉಲಂಘಿಸಿದ್ದಾರೆ ಎಂದು ರೋಮನರು ಭಾವಿಸದಿರಲಿಕ್ಕಾಗಿ ದೂತನೊಡನೆ ಮರಳಿ ಹೋಗಲು ಒತ್ತಾಯಪಡಿಸಿದರು. ನಾಳೆ ಇಲ್ಲಿಂದ ಒಬ್ಬ ದೂತನು ನಿಮ್ಮ ಬಳಿಗೆ ಹೋಗುವನು. ಅವನೊಂದಿಗೆ ನೀನು ಮರಳಿ ಬಾ. ಇಂದು ಇಲ್ಲಿಂದ ಹೋಗಿರಿ ಎಂದು ಅಬೂಉಬೈದ(ರ) ದೂತನೊಡನೆ ಹೇಳಿದರು. ಮುಂದಿನ ದಿನ ಮುಸ್ಲಿಮರ ಕಡೆಯಿಂದ ಹಝ್ರತ್ ಖಾಲಿದ್(ರ) ಪ್ರತಿನಿಧಿಯಾಗಿ ರೋಮನರ ಬಳಿಗೆ ಹೋದರು. ರೋಮನರು ಅವರ ವೈಭವಗಳನ್ನು ತೋರಿಸಿಲಿಕ್ಕಾಗಿ ಮೊದಲೇ ವ್ಯವಸ್ಥೆ ಮಾಡಿದ್ದರು. ರಸ್ತೆಯ ಎರಡೂ ಬದಿಗಳಲ್ಲಿ ದೂರದ ತನಕ ಸವಾರರ ಪಂಕ್ತಿಗಳನ್ನು ಸಜ್ಜಗೊಳಿಸಲಾಗಿತ್ತು. ಆದರೆ ಹಝ್ರತ್ ಖಾಲಿದ್(ರ) ಅವುಗಳಿಗೆ ಯಾವುದೇ ಬೆಲೆಕೊಡದೆ ಎಲ್ಲದರಿಂದ ಮುಖ ತಿರುಗಿಸಿದರು. ರೋಮನರ ಕಮಾಂಡರನಾದ ಬಾಹಾನನು ಹಣ ಮತ್ತು ಸಂಪತ್ತಿನ ಲಾಲಸೆಯನ್ನು ಹಝ್ರತ್ ಖಾಲಿದ್‌ರಿಗೆ ತೋರಿಸಿದರು. ಹಝ್ರತ್ ಖಾಲಿದ್(ರ) ಅದಕ್ಕೂ ಯಾವುದೇ ಬೆಲೆಕೊಡದೆ ನಿರಾಕರಿಸಿದರು. ಸಿಂಹವು ಆಡುಗಳ ಹಿಂಡನ್ನು ಮುರಿಯುತ್ತಾ ಹೋಗುವ ರೀತಿಯಲ್ಲಿ ಅವರು ಅದನ್ನು ನೋಡುತ್ತಿದ್ದರು.

ಬಾಹಾನಿನ ಡೇರೆಯ ಬಳಿಗೆ ತಲುಪಿದಾಗ ಅವನು ಅತ್ಯಂತ ಗೌರವದಿಂದ ಅವರನ್ನು ಸ್ವಾಗತಿಸಿದನು ಮತ್ತು ತನ್ನೊಂದಿಗೆ ಹಝ್ರತ್ ಖಾಲಿದ್‌ರನ್ನು ಕುಳ್ಳಿರಿಸಿದನು. ತರ್ಜುಮೆ ಮಾಡುವವನ ಮೂಲಕ ಮಾತುಕತೆ ಶುರುವಾಯಿತು. ಬಾಹಾನನು ಸಾಮಾನ್ಯ ಮಾತುಕತೆ ನಂತರ ಲೆಕ್ಚರ್ ರೂಪದಲ್ಲಿ ಭಾಷಣ ಮಾಡಲು ಶುರುಮಾಡಿದನು. ಹಝ್ರತ್ ಈಸಾ ಮಸೀಹರನ್ನು ಶ್ಲಾಘಿಸಿದ ನಂತರ ಸೀಸರಿನ ಹೆಸರನ್ನು ಹೇಳುತ್ತಾ ಹೆಮ್ಮೆಯಿಂದ ಹೀಗೆ ಹೇಳಿದನು: ನಮ್ಮ ರಾಜ ಎಲ್ಲರ ರಾಜಾದಿರಾಜನಾಗಿದ್ದಾನೆ. ತರ್ಜುಮೆ ಮಾಡುವವನು ಅದರ ತರ್ಜುಮೆಯನ್ನು ಪೂರ್ತಿ ಕೂಡ ಮಾಡಿರಲಿಲ್ಲ. ಅಷ್ಟರಲ್ಲಿ ಖಾಲಿದ್(ರ) ಬಾಹಾನನ್ನು ತಡೆದು ಹೀಗೆ ಹೇಳಿದರು: ನಿಮ್ಮ ಅರಸ ಹಾಗೆಯೇ ಆಗಿರಬಹುದು. ಆದರೆ ನಾವು ಯಾರನ್ನು ಸರದಾರನಾಗಿ ಮಾಡಿರುವೆವೋ ಅವನಿಗೆ ಒಂದು ಕ್ಷಣಕ್ಕಾದರೂ ಅರಸತನದ ಯೋಚನೆ ಬಂದರೆ, ನಾವು ಅವನನ್ನು ಕೂಡಲೇ ಪದಚ್ಯುತಿಗೊಳಿಸುವೆವು.

ಅನಂತರ ಬಾಹಾನನು ತನ್ನ ಭಾಷಣವನ್ನು ಮುಂದುವರೆಸಿದನು ಮತ್ತು ತನ್ನ ವೈಭವದ ಬಗ್ಗೆ ವಿವರಿಸುತ್ತಾ ಹೇಳಿದನು: ನಿಮ್ಮ ಸಮುದಾಯದ ಅರೇಬಿಯ ನಿವಾಸಿಗಳು ನಮ್ಮ ದೇಶದಲ್ಲಿ ಬಂದು ನೆಲೆಸಿದ್ದರು. ನಾವು ಯಾವಾಗಲೂ ಅವರೊಂದಿಗೆ ಗೆಳೆತನದ ಸಂಬಂಧವನ್ನು ಇರಿಸಿದ್ದೆವು. ಇದಕ್ಕೆಲ್ಲ ಅರೇಬಿಯರು ಕೃತಜ್ಞತೆ ಅರ್ಪಿಸುವರು ಎಂದು ನಾವು ಭಾವಿಸಿದೆವು. ಆದರೆ ನಮ್ಮ ಪ್ರತೀಕ್ಷೆಗೆ ವಿರುದ್ಧವಾಗಿ ನೀವು ನಮ್ಮ ದೇಶಕ್ಕೆ ದಾಳಿ ನಡೆಸಿದ್ದೀರಿ. ನಮ್ಮನ್ನು ನಮ್ಮ ದೇಶದಿಂದ ಹೊರಹಾಕಲು ನೀವು ಬಯಸುತ್ತೀರಿ. ಅನೇಕ ಸಮುದಾಯಗಳ ಜನರು ಹೀಗೆ ಉದ್ದೇಶಿಸಿದ್ದರು. ಆದರೆ ಅವರಲ್ಲಿ ಯಾರೂ ಎಂದಿಗೂ ಯಶಸ್ಸು ಗಳಿಸಲಿಲ್ಲ. ಈಗ ನೀವು ಬಂದಿದ್ದೀರಿ. ಲೋಕದಲ್ಲಿ ನಿಮಗಿಂತ ಮೂಢರು ಬೇರೆಯಿಲ್ಲ. ನೀವು ನಮ್ಮನ್ನು ಆಕ್ರಮಿಸಲು ಧೈರ್ಯಪಟ್ಟಿದ್ದೀರಿ. ಆದರೆ ನಾವು ಅದನ್ನು ಸಹ ಕ್ಷಮಿಸುವೆವು. ಮಾತ್ರವಲ್ಲ ನೀವು ಇಲ್ಲಿಂದ ಹೋಗುವುದಾದರೆ, ಉಡುಗೊರೆಯಾಗಿ ನಿಮ್ಮ ಸೇನಾಧಿಪತಿಗೆ ಹತ್ತು ಸಾವಿರ ದೀನಾರ್, ಅಧಿಕಾರಿಗಳಿಗೆ ಸಾವಿರ ದೀನಾರ್ ಮತ್ತು ಸಾಮಾನ್ಯ ಸಿಪಾಯಿಗಳಿಗೆ ನೂರು ನೂರು ದೀನಾರ್ ನೀಡುವೆವು. ಸತ್ಯದಲ್ಲಿ ಮುಸ್ಲಿಮರ ವಿರುದ್ಧ ಮುಸ್ಲಿಮರನ್ನು ನಾಶಮಾಡಲು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸೈನಿಕರನ್ನು ರೋಮನರೇ ಒಟ್ಟು ಸೇರಿಸಿದ್ದರು. ಆದರೆ ಯುದ್ಧ ಜಯಿಸುವುದು ಸುಲಭವಲ್ಲವೆಂದು ಗೊತ್ತಾದಾಗ ಈ ನಿಬಂಧನೆಗಳನ್ನು ಹಾಕಿದರು. ಹೇಗಿದ್ದರೂ ಬಾಹಾನನು ತನ್ನ ಭಾಷಣವನ್ನು ಮುಕ್ತಾಯಗೊಳಿಸಿದಾಗ ಹಝ್ರತ್ ಖಾಲಿದ್ ಎದ್ದು ನಿಂತು ಅಲ್ಲಾಹನಿಗೆ ಸ್ತುತಿ ಅರ್ಪಿಸಿದ ನಂತರ ಹೀಗೆ ಹೇಳಿದರು: ನಿಸ್ಸಂಶಯವಾಗಿಯೂ ನೀವು ಶ್ರೀಮಂತರಾಗಿರುವಿರಿ. ಅಧಿಕಾರಿಗಳಾಗಿದ್ದೀರಿ, ನೀವು ನಿಮ್ಮ ನೆರೆಕೆರೆಯರಾದ ಅರೇಬಿಯರೊಡನೆ ವರ್ತಿಸಿದ್ದ ರೀತಿಯ ಬಗ್ಗೆ ಸಹ ನಮಗೆ ಗೊತ್ತಿದೆ. ಆದರೆ ಅದು ನಿಮ್ಮ ಔದಾರ್ಯವಾಗಿರಲಿಲ್ಲ. ಬದಲಾಗಿ ಧರ್ಮಪ್ರಚಾರದ ಒಂದು ರೀತಿಯಾಗಿತ್ತು. ಅದರ ಪ್ರಭಾವವೇನಾಯಿತು ಎಂದರೆ, ಆ ಅರೇಬಿಯರು ಕ್ರೈಸ್ತರಾದರು. ಇಂದು ಸ್ವತಃ ನಮ್ಮ ವಿರುದ್ಧವಾಗಿ ನಿಂತು ನಿಮ್ಮ ಜೊತೆಗೆ ಯುದ್ಧ ಮಾಡುತ್ತಿದ್ದಾರೆ. ನಾವು ಅತ್ಯಂತ ನಿರ್ಗತಿಕರು, ದರಿದ್ರರು ಮತ್ತು ವಸತಿಯಿಲ್ಲದವರೂ ಆಗಿದ್ದೆವು. ನಮ್ಮ ದೌರ್ಜನ್ಯ ಮತ್ತು ಮೂಢತನದ ಅವಸ್ಥೆಯೇನಾಗಿತ್ತು ಎಂದರೆ, ನಮ್ಮಲ್ಲಿ ಶಕ್ತರು ನಮ್ಮಲ್ಲಿರುವ ಬಲಹೀನರನ್ನು ತುಳಿದು ಹಾಕುತ್ತಿದ್ದರು. ಪರಸ್ಪರ ಜಗಳಾಡಿ ನಾಶವಾಗುತ್ತಿದ್ದೆವು. ಆದರೆ ಅಲ್ಲಾಹನು ನಮ್ಮ ಮೇಲೆ ಕರುಣೆದೋರಿದನು. ನಮ್ಮ ಸಮುದಾಯದವರೇ ಆದ ಒಬ್ಬ ಸಂದೇಶವಾಹಕನನ್ನು ಅಲ್ಲಾಹನು ಕಳುಹಿಸಿದನು. ಅವರು ನಮ್ಮಲ್ಲಿ ಅತ್ಯಂತ ಸಭ್ಯರೂ, ಅತ್ಯಂತ ಉದಾರಿಯೂ ಅತ್ಯಂತ ಪರಿಶುದ್ಧರೂ ಆಗಿದ್ದರು. ಅವರು ನಮಗೆ ತೌಹೀದ್ ಎಂದರೆ, ಏಕದೇವವಿಶ್ವಾಸ ಕಲಿಸಿದರು. ಅಲ್ಲಾಹನಿಗೆ ಯಾವುದೇ ಸಹಭಾಗಿಯಿಲ್ಲವೆಂದೂ, ಅವನಿಗೆ ಪತ್ನಿ ಮಕ್ಕಳು ಇಲ್ಲವೆಂದೂ ಅವನೂ ಪರಿಪೂರ್ಣವಾಗಿ ಏಕನಾಗಿದ್ದಾನೆ ಎಂದು ಹೇಳಿಕೊಟ್ಟರು. ಆ ವಿಶ್ವಾಸಗಳನ್ನು ಲೋಕದೆಲ್ಲರ ಮುಂದೆ ಇರಿಸಲು ಅವರು ಆದೇಶಿಸಿದ್ದರು. ಅವರನ್ನು ನಂಬಿದವರು ಮುಸ್ಲಿಮರು ಮತ್ತು ನಮ್ಮ ಸಹೋದರರು. ಯಾರು ನಂಬುವುದಿಲ್ಲವೋ, ಆದರೆ ಜಿಝ್ಯ ನೀಡಲು ತಯಾರಿರುವರೋ ಅವರಿಗೆ ನಾವು ನೆರವು ನೀಡುವೆವು ಮತ್ತು ಅವರನ್ನು ನಾವು ಸಂರಕ್ಷಿಸುವೆವು. ಎರಡನ್ನೂ ನಿರಾಕರಿಸಿದವರಿಗೆ ಖಡ್ಗ. ನೀವು ಸಮ್ಮತಿಸುವುದಿಲ್ಲವೆಂದಾದರೆ ಮತ್ತು ಯುದ್ಧ ಮಾಡಲು ನೀವು ತಯಾರಿದ್ದೀರಿ ಎಂದಾದರೆ, ನಾವು ಸಹ ತಯಾರಿದ್ದೇವೆ. ಬಾಹಾನನು ಜಿಝ್ಯದ ಹೆಸರು ಕೇಳಿ ತಂಪಾದ ಒಂದು ಉಸಿರನ್ನು ಎಳೆದನು ಮತ್ತು ತನ್ನ ಸೈನ್ಯದ ಕಡೆಗೆ ಬೊಟ್ಟು ಮಾಡುತ್ತಾ ಹೇಳಿದನು: ಇವರು ಸತ್ತರೂ ಜಿಝ್ಯ ಕೊಡಲಾರರು. ನಾವು ಜಿಝ್ಯ ಪಡೆಯುವವರಾಗಿದ್ದೇವೆ. ಜಿಝ್ಯ ಕೊಡುವವರಲ್ಲ. ಒಟ್ಟಿನಲ್ಲಿ ಯಾವುದೇ ವಿಷಯ ತೀರ್ಮಾನಿಸಲ್ಪಡಲಿಲ್ಲ ಮತ್ತು ಖಾಲಿದ್ ಎದ್ದು ಹೊರಟರು. ಈಗ ಈ ಕೊನೆಯ ಯುದ್ಧದ ತಯಾರಿಗಳು ಶುರುವಾದುವು. ಇದರ ನಂತರ ರೋಮನ್ನರು ಮತ್ತೆಂದಿಗೂ ಚೇತರಿಸಿಕೊಳ್ಳಲಿಲ್ಲ. ಹಝ್ರತ್ ಖಾಲಿದ್ ಹೊರಟು ಹೋದ ನಂತರ ಬಾಹಾನನು ಸರದಾರರನ್ನು ಒಟ್ಟುಗೂಡಿಸಿ ಹೀಗೆ ಹೇಳಿದರು: ನೀವು ಕೇಳಿದ್ದೀರಾ? ನೀವು ಅವರ ಪ್ರಜೆಯ ಆಗುವ ತನಕ ನೀವು ಅವರ ದಾಳಿಯಿಂದ ಸುರಕ್ಷಿತರಲ್ಲವೆಂದು ಅರಬರು ವಾದಿಸುತ್ತಿದ್ದಾರೆ. ನೀವು ಅವರ ದಾಸ್ಯವನ್ನು

ಸ್ವೀಕರಿಸಲು ತಯಾರಿದ್ದೀರಾ? ಎಲ್ಲ ಅಧಿಕಾರಿಗಳು ಬಹಳ ಆವೇಶದಿಂದ ಹೇಳಿದರು: ನಾವು ಸಾಯಲು ತಯಾರಿದ್ದೇವೆ. ಆದರೆ ಈ ನಿಂದನೆಯನ್ನು ನಾವು ಸಹಿಸಲಾರೆವು.

ಮರುದಿನ ಬೆಳಿಗ್ಗೆ ರೋಮನರು ಆವೇಶ ಮತ್ತು ಸಾಧನಸಾಮಗ್ರಿಗಳೊಂದಿಗೆ ಹೋರಾಟಕ್ಕಾಗಿ ಹೊರಟರು. ಮುಸ್ಲಿಮರು ಸಹ ಇದನ್ನು ಕಂಡು ಆಶ್ಚರ್ಯಗೊಂಡರು. ಹಝ್ರತ್ ಖಾಲಿದ್(ರ) ಸಹ ಅರೇಬಿಯದ ಸಾಮಾನ್ಯ ರೀತಿಯನ್ನು ಬಿಟ್ಟುಕೊಂಡು ಹೊಸ ಶೈಲಿಯಲ್ಲಿ ಸೈನ್ಯವನ್ನು ತಯಾರಿ ಮಾಡಿದರು. ಮೂವತ್ತು ಮೂವತ್ತೈದು ಸಾವಿರ ಸೈನಿಕರಿದ್ದ ಸೈನ್ಯವನ್ನು 36 ಭಾಗಗಳನ್ನಾಗಿ ಮಾಡಿ ಅದನ್ನು ಅತ್ಯಂತ ನೈಪುಣ್ಯ ಮತ್ತು ಅತ್ಯುತ್ತಮ ರೀತಿಯಲ್ಲಿ ಪಂಕ್ತಿಬದ್ಧವಾಗಿ ನಿಲ್ಲಿಸಿದರು. ಮಧ್ಯಭಾಗವನ್ನು ಅಬೂಉಬೈದರಿಗೆ ಕೊಟ್ಟರು. ಬಲಭಾಗದಲ್ಲಿ ಅಮ್ರ್ ಬಿನ್ ಆಸ್ ಮತ್ತು ಶರಹ್‌ಬೀಲ್ ನಿಶ್ಚಯಿಸಲ್ಪಟ್ಟರು. ಎಡಭಾಗದ ಸೇನಾಧಿಪತಿ ಯಝೀದ್ ಬಿನ್ ಅಬುಸುಫ್‌ಯಾನ್ ಆಗಿದ್ದರು. ಅದಲ್ಲದೆ ಧೈರ್ಯ ಮತ್ತು ಯುದ್ಧಕಲೆಯಲ್ಲಿ ಪ್ರಸಿದ್ಧರಾಗಿದ್ದ ವ್ಯಕ್ತಿಗಳನ್ನು ಪ್ರತಿ ಪಂಕ್ತಿಯಲ್ಲಿ ನಿಶ್ಚಯಿಸಲಾಗಿತ್ತು. ಭಾಷಣಗಾರರು ಸೈನ್ಯಕ್ಕೆ ಆವೇಶ ಮತ್ತು ಧೈರ್ಯವನ್ನು ತುಂಬಿಸಿ ಒಂದು ಹೊಸ ಲವಲವಿಕೆ ಮತ್ತು ಉತ್ಸಾಹ ಉಂಟುಮಾಡುತ್ತಿದ್ದರು. ಅವರಲ್ಲಿ ಅಬುಸುಫ್‌ಯಾನ್ ಸಹ ಇದ್ದರು. ಅವರು ಸೈನಿಕರ ಮುಂದೆ ಹೀಗೆ ಹೇಳುತ್ತಾ ಸುತ್ತುತ್ತಿದ್ದರು: ಅಲ್ಲಾಹ್, ಅಲ್ಲಾಹ್, ನೀವು ಅರೇಬಿಯದ ಸಂರಕ್ಷರು, ಇಸ್ಲಾಮಿನ ಸಹಾಯಕರು ಆಗಿದ್ದೀರಿ. ಅವರು ರೋಮಿನ ಸಂರಕ್ಷಕರು ಮತ್ತು ಶಿರ್ಕಿನ ಸಹಾಯಕರು ಆಗಿದ್ದಾರೆ. ಹೇ ಅಲ್ಲಾಹ್, ಈ ದಿನ ನಿಮ್ಮ ದಿವಸಗಳಲ್ಲಿ ಒಂದಾಗಿದೆ. ಹೇ ಅಲ್ಲಾಹ್, ನಿನ್ನ ದಾಸರ ಮೇಲೆ ನಿನ್ನ ಸಹಾಯವನ್ನು ಇಳಿಸು. ಅಮ್ರ್ ಬಿನ್ ಆಸ್ ಹೀಗೆ ಹೇಳುತ್ತಾ ಸುತ್ತುತ್ತಿದ್ದರು: ಎಲೈ ಜನರೇ, ನಿಮ್ಮ ದೃಷ್ಟಿಗಳನ್ನು ತಗ್ಗಿಸಿರಿ, ಮೊಣಕಾಲೂರಿ ಕುಳಿತುಕೊಳ್ಳಿರಿ, ತಮ್ಮ ಈಟಿಗಳನ್ನು ಹಿಡಿಯಿರಿ, ತಮ್ಮ ಜಾಗ ಮತ್ತು ತಮ್ಮ ಪಂಕ್ತಿಗಳಲ್ಲಿ ಸ್ಥಿರವಾಗಿ ನಿಲ್ಲಿರಿ. ನಿಮ್ಮ ಶತ್ರು ನಿಮ್ಮ ಮೇಲೆ ಹಲ್ಲೆ ನಡೆಸಲು ಬರುವಾಗ ಅವರಿಗೆ ಸಾವಕಾಶ ಕೊಡಿರಿ. ಅವರು ಸಮೀಪ ಬಂದು ನಿಮ್ಮ ಈಟಿಗಳನ್ನು ಮುಟ್ಟುವಾಗ ಅವರ ಮೇಲೆ ಸಿಂಹಗಳ ಹಾಗೆ ಹಲ್ಲೆ ನಡೆಸಿರಿ. ಅಲ್ಲಾಹನಾಣೆ, ಯಾರು ಸತ್ಯದಿಂದ ಸಂತೋಷಗೊಳ್ಳುತ್ತಾನೋ ಮತ್ತು ಪ್ರತಿಫಲವನ್ನು ನೀಡುತ್ತಾನೋ ಹಾಗೂ ಯಾರು ಸುಳ್ಳಿನಿಂದ ಬೇಸರಗೊಂಡು ಅದಕ್ಕೆ ಶಿಕ್ಷೆ ನೀಡುತ್ತಾನೋ, ಅದೇ ರೀತಿಯಲ್ಲಿ ಔದಾರ್ಯಕ್ಕೆ ಪ್ರತಿಫಲವನ್ನು ನೀಡುತ್ತಾನೋ ಅಂತಹ ಮುಸ್ಲಿಮರು ಗ್ರಾಮಗಳ ನಂತರ ಗ್ರಾಮಗಳು ಮತ್ತು ಅರಮನೆಯ ನಂತರ ಅರಮನೆಯ ಮೇಲೆ ವಿಜಯ ಸಾಧಿಸುವರು ಎಂದು ನನಗೆ ಸುವಾರ್ತೆ ನೀಡಿರುವನು. ಎದುರಾಳಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮತ್ತು ಅವರ ಶಕ್ತಿಯ ಕಾರಣದಿಂದ ನೀವು ಭಯಗೊಳ್ಳಬೇಡಿರಿ. ನೀವು ಸ್ಥಿರಚಿತ್ತರಾಗಿ ಯುದ್ಧ ಮಾಡಿದರೆ ಈ ಎದುರಾಳಿಗಳು ಹಕ್ಕಿಗಳ ಮರಿಗಳ ಹಾಗೆ ಭಯಗೊಂಡು ಚದುರಿಹೋಗುವರು.

ಮುಸ್ಲಿಮ್ ಸೈನಿಕರ ಸಂಖ್ಯೆ ಕಡಿಮೆಯಾಗಿದ್ದರೂ ಎಂದರೆ ಮೂವತ್ತು ಮೂವತ್ತೈದು ಸಾವಿರಕ್ಕಿಂತ ಹೆಚ್ಚಿರಲಿಲ್ಲ. ಆದರೆ ಅವರು ಪೂರ್ತಿ ಅರೇಬಿಯದ ಚುನಾಯಿತ ವ್ಯಕ್ತಿಗಳಾಗಿದ್ದರು. ಅದರಲ್ಲಿ ನೂರು ಬದರೀ ಸಹಾಬಿಯರು ಮತ್ತು ಹಝ್ರತ್ ಪೈಗಂಬರರನ್ನು(ರ) ಕಂಡಿದ್ದ ಒಂದು ಸಾವಿರದಷ್ಟು ಹಿರಿಯರು ಇದ್ದರು. ಹತ್ತು ಸಾವಿರಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಅಝ್‌ದ್ ಗೋತ್ರದ ಜನರಿದ್ದರು. ಹಮೀರಿನ ಒಂದು ದೊಡ್ಡ ಸಂಘವಿತ್ತು. ಹಮ್‌ದಾನ್, ಖೂಲಾನ್, ಲಹಂ, ಜುಧಾಮ್ ಮುಂತಾದ ಸ್ಥಳಗಳ ಪ್ರಸಿದ್ಧ ಧೀರರು ಇದ್ದರು. ಮಹಿಳೆಯರು ಕೂಡ ಈ ಯುದ್ಧದಲ್ಲಿ ಭಾಗವಹಿಸಿದ್ದರು ಎಂಬುದು ಈ ಯುದ್ಧದ ಒಂದು ವೈಶಿಷ್ಟ್ಯವಾಗಿದೆ. ಅವರು ಬಹಳ ಧೈರ್ಯದಿಂದ ಹೋರಾಡಿದ್ದರು. ಅವರಲ್ಲಿ ಅಬೂಸುಫ್‌ಯಾನನ ಪತ್ನಿಯಾದ ಹಝ್ರತ್ ಹಿಂದ ಸಹ ಇದ್ದರು. ಅವರು ದಾಳಿ ಮಾಡುತ್ತಾ ಮುಂದಕ್ಕೆ ಧಾವಿಸುತ್ತಿದ್ದರು ಮತ್ತು ಹೀಗೆ ಜೋರಾಗಿ ಹೇಳುತ್ತಿದ್ದರು: ಸತ್ಯನಿಷೇಧಿಗಳನ್ನು ನಿಮ್ಮ ಖಡ್ಗಗಳಿಂದ ತುಂಡುಮಾಡಿರಿ. ಅದೇ ರೀತಿಯಲ್ಲಿ ಅಬೂಸುಫ್‌ಯಾನಿನ ಮಗಳಾದ ಮತ್ತು ಅಮೀರ್ ಮುಆವಿಯರ ಸಹೋದರಿಯಾದ ಜುವೈರಿಯ ಒಂದು ಸಂಘದೊಂದಿಗೆ ಹೊರಟು ತನ್ನ ಪತಿಯ ಜೊತೆ ಸೇರಿ ರೋಮ್ ಸೈನ್ಯವನ್ನು ಎದುರಿಸಿದರು ಮತ್ತು ಒಂದು ತೀವ್ರ ಹೋರಾಟದ ವೇಳೆ ಶಹೀದ್ ಆದರು. ಅತ್ಯಂತ ಮಧುರ ಸ್ವರವನ್ನು ಹೊಂದಿದ್ದ ಮಿಖ್‌ದಾದ್ ಎಂಬವರು ಸೈನ್ಯದ ಮುಂದೆ ಮುಂದೆ ನಿಂತುಕೊಂಡು, ಜಿಹಾದಿಗೆ ಪ್ರೇರಣೆ ನೀಡುವ ಸೂರತ್ತಾದ ಅನ್‌ಫಾಲ್ ಪಾರಾಯಣ ಮಾಡುತ್ತಿದ್ದರು.

ರೋಮನರ ಆವೇಶದ ಸ್ಥಿತಿಯೇನಾಗಿತ್ತು ಎಂದರೆ, ಮೂವತ್ತು ಸಾವಿರ ಜನರು ಸ್ಥಿರತೆಯಿಂದ ನಿಲ್ಲಲಿಕ್ಕಾಗಿ ಪಾದಗಳಲ್ಲಿ ಸಂಕೋಲೆಗಳನ್ನು ಹಾಕಿದ್ದರು. ಪರಾರಿಯಾಗುವ ಆಲೋಚನೆ ಕೂಡ ಬರದಿರಲು ಪರಸ್ಪರ ಸಂಕೋಲೆಗಳಲ್ಲಿ ಕಟ್ಟಿಹಾಕಿದ್ದರು.

ಯುದ್ಧದ ಆರಂಭ ರೋಮನರ ಕಡೆಯಿಂದ ಆಯಿತು. ಎರಡು ಲಕ್ಷಗಳ ಸೈನಿಕರ ಹಿಂಡು ಮುಂದಕ್ಕೆ ಧಾವಿಸಿತು. ಸಾವಿರಾರು ಪಾದರಿಗಳು ಮತ್ತು ಬಿಶಪರು ಕೈಗಳಲ್ಲಿ ಶಿಲುಬೆಗಳನ್ನು ಹಿಡಿದು ಹಝ್ರತ್ ಈಸಾ ಮಸೀಹರಿಗೆ ಜೈಕಾರ ಹಾಕುತ್ತಿದ್ದರು. ಕ್ರೈಸ್ತರು ಅತ್ಯಂತ ಶಕ್ತವಾದ ದಾಳಿ ನಡೆಸಿತು. ಬಾಣಗಳ ಮಳೆ ವರ್ಷಿಸಲು ತೊಡಗಿದರು. ಮುಸ್ಲಿಮರು ಬಹಳ ದೀರ್ಘ ಸಮಯದ ವರೆಗೆ ಅಚಂಚಲರಾಗಿದ್ದರು. ಆದರೆ ದಾಳಿ ಎಷ್ಟು ಶಕ್ತವಾಗಿತ್ತೆಂದರೆ, ಮುಸ್ಲಿಮರ ಬಲಗಡೆಯ ಸೈನ್ಯಭಾಗದ ಪಂಕ್ತಿ ಮುರಿದುಹೋಯಿತು ಮತ್ತು ಯಾವುದೇ ಕ್ರಮವಿಲ್ಲದೆ ಹಿಂದಕ್ಕೆ ಸರಿಯಿತು. ಹೀಗೆ ಪರಾರಿಯಾದವರು ಹಿಂದಕ್ಕೆ ಸರಿಯುತ್ತಾ ಮಹಿಳೆಯರ ಡೇರೆ ತನಕ ತಲುಪಿದರು. ಮಹಿಳೆಯರಿಗೆ ಮುಸ್ಲಿಮರ ಈ ಸ್ಥಿತಿ ಕಂಡು ಬಹಳ ಕೋಪಬಂತು. ಡೇರೆಯ ಕೋಲುಗಳನ್ನು ಕಿತ್ತುಕೊಂಡು, ಹೇಡಿಗಳೇ ಇಲ್ಲಿಗೆ ಬಂದಿದ್ದೀರಾ? ಕೋಲುಗಳಿಂದ ನಿಮ್ಮ ತಲೆಯನ್ನು ತುಂಡುಮಾಡುವೆವು. ಅಬುಸುಫ್‌ಯಾನನ ಪತ್ನಿ ಹಿಂದ ಕೈಯಲ್ಲಿ ಲಾಠಿಯನ್ನು ತೆಗೆದುಕೊಂಡು ಮುಂದಕ್ಕೆ ಧಾವಿಸಿದರು. ಇತರ ಸ್ತ್ರೀಯರು ಸಹ ಅವರನ್ನು ಹಿಂಬಾಲಿಸಿದರು. ಅಬುಸುಫ್‌ಯಾನ್ ಓಡಿಹೋಗುವುದನ್ನು ಕಂಡಾಗ ಅವರ ಕುದುರೆಯ ಮುಖಕ್ಕೆ ಆಣಿಯನ್ನು ಬಡಿಯುತ್ತಾ ಹೇಳಿದರು: ಎಲ್ಲಿಗೆ ಹೋಗುತ್ತಿದ್ದೀರಿ? ಮರಳಿ ಹೋಗು, ಯುದ್ಧ ಮೈದಾನಕ್ಕೆ ಹೋಗು.

ಅದೇ ರೀತಿಯಲ್ಲಿ ಒಂದು ವರದಿಯ ಪ್ರಕಾರ ಹೀಗಿದೆ: ಹಿಂದ ಕೋಲನ್ನು ಹಿಡಿದು ಅಬುಸುಫ್‌ಯಾನರ ಸಮೀಪಕ್ಕೆ ಧಾವಿಸಿದರು ಮತ್ತು ಹೀಗೆ ಹೇಳಿದರು: ಅಲ್ಲಾಹನಾಣೆ, ನೀನು ಸತ್ಯಧರ್ಮವನ್ನು ವಿರೋಧಿಸುವುದರಲ್ಲಿ ಮತ್ತು ಅಲ್ಲಾಹನ ಸತ್ಯ ಪ್ರವಾದಿಯನ್ನು ಸುಳ್ಳಾಗಿಸುವುದರಲ್ಲಿ ಬಹಳ ಕಠಿಣತೆ ತೋರಿಸುತ್ತಿದ್ದೆ. ಇಂದು ನಿನಗೆ ಯುದ್ಧದಲ್ಲಿ ಸತ್ಯಧರ್ಮದ ಗೌರವವನ್ನು ಕಾಪಾಡಲು ಮತ್ತು ಅಲ್ಲಾಹನ ಪ್ರವಾದಿಯ ಸಂತುಷ್ಟಿಯನ್ನು ಪಡೆಯಲು ತನ್ನ ಜೀವವನ್ನು ತ್ಯಾಗಮಾಡಲು ಮತ್ತು ಅಲ್ಲಾಹನ ಮುಂದೆ ಗೌರವಾನ್ವಿತನಾಗಲು ನಿನಗೆ ಅವಕಾಶವಿದೆ.

ಅಬುಸುಫ್‌ಯಾನ್ ಅಭಿಮಾನದಿಂದ ಯುದ್ಧ ಮೈದಾನದ ಕಡೆಗೆ ಮರಳುತ್ತಾ, ಕೈಯಲ್ಲಿ ಖಡ್ಗವನ್ನು ಹಿಡಿಯುತ್ತಾ ಎದುರಾಳಿಗಳ ಸೈನ್ಯಕೂಟಕ್ಕೆ ನುಗ್ಗಿದರು. ಧೀರಳಾದ ಮುಸ್ಲಿಂ ಮಹಿಳೆಯೊಬ್ಬರು ಪದ್ಯವನ್ನು ಹೇಳುತ್ತಾ ಸಿಪಾಯಿಗಳಿಗೆ ಧೈರ್ಯ ನೀಡುತ್ತಿದ್ದರು. ಅದು ಹೀಗಿತ್ತು:

**ಯಾ ಹಾರಿಬನ್ ಅನಿನ್ನಿಸ್‌ವತಿ ತಖಿಯಾತಿ, ಫಅನ್ ಖಲೀಲ್ ಮಾ ತರಾ ಸಬಿಯಾತ್; ವಲಾ ಹಸಿಯಾತ್, ವಲಾ ರಝಿಯಾತ್;**

ಈ ಸ್ಥಿತಿಯನ್ನು ಕಂಡು, ಬಲಗಡೆಯ ಒಂದು ಭಾಗದ ಸೇನಾಧಿಪತಿಯಾಗಿದ್ದ ಮುಆಧ್ ಬಿನ್ ಜಬಲ್(ರ) ಕುದುರೆಯಿಂದ ಜಿಗಿದು ಹೀಗೆ ಹೇಳಿದರು: ನಾನಂತು ಕಾಲ್ನಡಿಗೆಯಾಗಿ ಹೋರಾಡುವೆನು. ಆದರೆ ಯಾರಾದರೂ ಈ ಕುದುರೆಯ ಹಕ್ಕನ್ನು ಈಡೇರಿಸುವರಾದರೆ, ಅವರಿಗಾಗಿ ಈ ಕುದುರೆಯನ್ನು ಕೊಡುವೆನು. ಅವರ ಮಗನು ಅದಕ್ಕೆ ಉತ್ತರವವಾಗಿ ಹೀಗೆ ಹೇಳಿದನು. ನಾನು ಅದರ ಹಕ್ಕನ್ನು ಈಡೇರಿಸುವೆನು. ಏಕೆಂದರೆ ನಾನು ಸವಾರನಾಗಿ ಉತ್ತಮವಾಗಿ ಹೋರಾಡಬಲ್ಲೆನು. ಒಟ್ಟಿನಲ್ಲಿ ತಂದೆ ಮತ್ತು ಮಗನು ಇಬ್ಬರೂ ಶತ್ರು ಸೈನ್ಯಕ್ಕೆ ನುಗ್ಗಿದರು. ಧೈರ್ಯದಿಂದ ಯುದ್ಧ ಮಾಡಿದರು. ಮುಸ್ಲಿಮರ ಅಸ್ಥಿರವಾದ ಪಾದಗಳು ಸುದೃಢಗೊಂಡುವು. ಅದರೊಂದಿಗೆ ಝುಬೀದ ಗೋತ್ರದ ಸರದಾರನಾದ ಹಜ್ಜಾಜ್ ಐನ್ನೂರು ವ್ಯಕ್ತಿಗಳೊಂದಿಗೆ ಮುಂದಕ್ಕೆ ಧಾವಿಸಿದರು. ಮುಸ್ಲಿಮರನ್ನು ಹಿಂಬಾಲಿಸುತ್ತಾ ಬರುತ್ತಿದ್ದ ಕ್ರೈಸ್ತರನ್ನು ಅವರು ತಡೆದರು. ಬಲಗಡೆಯ ಸೈನ್ಯದಲ್ಲಿ ಅಝ್‌ದ್ ಗೋತ್ರದವರು ಆರಂಭದಿಂದಲೇ ಸ್ಥೈರ್ಯದಿಂದ ಇದ್ದರು. ಕ್ರೈಸ್ತರು ಯುದ್ಧದ ಎಲ್ಲ ಬಲವನ್ನು ಅವರ ಮೇಲೆ ಹಾಕಿದರು. ಆದರೆ ಅವರು ಪರ್ವತದ ಹಾಗೆ ಗಟ್ಟಿಯಾಗಿ ನಿಂತಿದ್ದರು. ಯುದ್ಧದ ತೀವ್ರತೆ ಎಷ್ಟಿತ್ತೆಂದರೆ ಎಲ್ಲ ಕಡೆಯಿಂದಲೂ ಕೈಕಾಲುಗಳು ಮುರಿದು ಬೀಳುತ್ತಾ ಹೋಗುತ್ತಿತ್ತು. ಆದರೆ ಈ ಗೋತ್ರದ ಸಿಪಾಯಿಗಳ ಸ್ಥಿರತೆಯಲ್ಲಿ ಯಾವುದೇ ಕೊರತೆ ಉಂಟಾಗುತ್ತಿರಲಿಲ್ಲ. ಈ ಗೋತ್ರದ ಸರದಾರ ಖಡ್ಗವನ್ನು ಬೀಸುತ್ತಾ ಮತ್ತು ಯುದ್ಧಗರ್ಜನೆಯನ್ನು ಮಾಡುತ್ತಾ ಹೀಗೆ ಹೇಳುತ್ತಿದ್ದರು: ನೋಡಿರಿ, ಮುಸ್ಲಿಮರಿಗೆ ನಿಮ್ಮ ಕಾರಣದಿಂದ ಕೆಟ್ಟ ಹೆಸರು ಬರಬಾರದು. ಹೀಗೆ ಅವರ ಒಂಬತ್ತು ದೊಡ್ಡ ದೊಡ್ಡ ಧೀರರು ಎದುರಾಳಿಗಳ ಕೈಗಳಿಂದ ಶಹೀದ್ ಆದರು. ಕೊನೆಗೆ ಅವರ ಸರದಾರ ಸಹ ಸ್ವತಃ ಶಹೀದ್ ಆದರು.

ಅಚಾನಕ್ಕಾಗಿ ಹಝ್ರತ್ ಖಾಲಿದ್‌ರ(ರ) ಸೈನ್ಯ ಪಂಕ್ತಿಗಳನ್ನು ಮುರಿಯುತ್ತಾ ಮುಂದಕ್ಕೆ ಸಾಗಿತ್ತು. ಎಷ್ಟು ಶಕ್ತವಾಗಿ ಆಕ್ರಮಣ ನಡೆಸಿತು ಎಂದರೆ, ಅದು ರೋಮನರ ಪಂಕ್ತಿಗಳನ್ನು ತಲೆಕೆಳಗಾಗಿ ಮಾಡಿತು. ಅವರನ್ನು ಅದುಮುತ್ತಾ ಸೇನಾಧಿಪತಿ ದರಿಂಜಾರ್ ತನಕ ತಲುಪಿದರು. ಇಕ್ರಿಮ ಬಿನ್ ಅಬೂಜಹಲ್ ಕ್ರೈಸ್ತರಿಗೆ ಪಂಥಾಹ್ವಾನ ನೀಡುತ್ತಾ ಸಾಯಲು ಸಿದ್ಧರೆಂದು ಪ್ರತಿಜ್ಞೆ ಮಾಡಿದ್ದ ನಾನ್ನೂರು ವ್ಯಕ್ತಿಗಳೊಂದಿಗೆ ಮುಂದಕ್ಕೆ ಧಾವಿಸಿದರು. ಅವರಲ್ಲಿ ಬಹುತೇಕ ಎಲ್ಲರೂ ಶಹೀದಾದರು. ಆದರೆ ಶತ್ರುಗಳ ಸಾವಿರಾರು ಜನರನ್ನು ಅವರು ಕೊಂದುಹಾಕಿದರು.

ಅದೇ ವೇಳೆ ರೋಮ್ ಸೈನ್ಯದ ಸರದಾರ ಇಬ್ನು ಖಿನಾತೀರ್ ಮುಸ್ಲಿಮರ ಎಡಭಾಗದ ಸೈನ್ಯದ ಮೇಲೆ ದಾಳಿ ನಡೆಸಿದನು. ಎಡಭಾಗದ ಬಹುತೇಕ ಸಿಪಾಯಿಗಳು ಲಹಮ್ ಮತ್ತು ಗಸಾನ್ ಗೋತ್ರದವರಾಗಿದ್ದರು.

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 21 October 2021, Issue No. 42

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಅವರು ದೀರ್ಘಕಾಲದಿಂದ ರೋಮನರಿಗೆ ಕಪ್ಪಕೊಡುವವರಾಗಿದ್ದರು ಮತ್ತು ಸಹಜವಾಗಿಯೇ ರೊಮನರಿಗೆ ಹೆದರುತ್ತಿದ್ದರು. ಅವರಿಗೆ ಈ ಆಕ್ರಮಣವನ್ನು ಸಹಿಸಲು ಸಾಧ್ಯವಾಗಲಿಲ್ಲ ಮತ್ತು ಹಿಂದಕ್ಕೆ ಸರಿದರು. ಹಿಂದೆಯಿದ್ದ ಮುಸ್ಲಿಂ ಮಹಿಳೆಯರು ಮುಂದಕ್ಕೆ ಹೋಗಿ ಬಹಳ ಧೈರ್ಯದಿಂದ ಕ್ರೈಸ್ತರನ್ನು ಮುಂದೆ ಬರುವುದರಿಂದ ತಡೆದರು. ಮುಸ್ಲಿಂ ಸೈನ್ಯದ ಸ್ಥಿತಿಗತಿ ಹೀನಾಯವಾಗುತ್ತಿತ್ತು. ಆದರೆ ಅಧಿಕಾರಿಗಳ ಧೈರ್ಯ ನೋಡಬೇಕಾದದ್ದೇ ಆಗಿತ್ತು. ಯುದ್ಧದಲ್ಲಿ ಅಷ್ಟರ ವರೆಗೆ ರೋಮನರು ಮೇಲುಗೈ ಸಾಧಿಸಿದ್ದರು. ಸೈನ್ಯದ ಎಡಭಾಗದ ಹಿಂದೆ ನಿಶ್ಚಯಗೊಂಡಿದ್ದ ಖೈಸ್ ಬಿನ್ ಹಬೀರ ಅಚಾನಕ್ಕಾಗಿ ಹಿಂದಿನಿಂದ ದಾಳಿ ನಡೆಸಿದರು. ಈ ದಾಳಿ ಎಷ್ಟು ತೀವ್ರವಾಗಿತ್ತು ಎಂದರೆ ರೋಮನರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅವರ ಎಲ್ಲ ಪಂಕ್ತಿಗಳು ಚದುರಿ ಹೋದುವು. ಅದರೊಂದಿಗೆ ಸಈದ್ ಬಿನ್ ಝೈದ್ ಯುದ್ಧ ಮೈದಾನದ ನಡುವಿನಿಂದ ಹೊರಟು ಆಕ್ರಮಣ ನಡೆಸಿದರು. ರೋಮನರು ದೂರದ ವರೆಗೆ ಸರಿಯುತ್ತಾ ಮೈದಾನದ ಬದಿಯಲ್ಲಿದ್ದ ಚರಂಡಿಯ ಮೂಲೆ ತನಕ ತಲುಪಿದರು. ಸ್ವಲ್ಪ ಸಮಯದಲ್ಲಿ ಅವರ ಶವಶರೀರಗಳಿಂದ ಆ ಮೋರಿ ತುಂಬಿ ಹೋಯಿತು ಮತ್ತು ಮೈದಾನ ಖಾಲಿಯಾಯಿತು. ಒಟ್ಟಿನಲ್ಲಿ ಅಲ್ಲಾಹನು ಈ ಅತಿ ಪ್ರಧಾನವಾದ ಯುದ್ಧದಲ್ಲಿ ಮುಸ್ಲಿಮರಿಗೆ ಮಹತ್ತಾದ ವಿಜಯವನ್ನು ನೀಡಿದನು.

ಈ ಯುದ್ಧದ ಒಂದು ಘಟನೆಯು ನೆನಪಿಡಲು ಯೋಗ್ಯವಾದುದಾಗಿದೆ. ಅದೇನೆಂದರೆ, ಘೋರವಾದ ಯುದ್ಧ ನಡೆಯುತ್ತಿದ್ದಾಗ ಒಬ್ಬ ಮುಸ್ಲಿಂ ಸಿಪಾಯಿಯಾದ ಹಬ್ಬಾಬ್ ಬಿನ್ ಖೈಸ್ ಎಂಬವರು ಜೀವನ ಹಂಗು ತೊರೆದು ಹೇಗೆ ಹೋರಾಡಿದರು ಎಂದರೆ, ಅವರ ಒಂದು ಕಾಲು ಮುರಿದು ಹೋಯಿತು ಆದರೆ ಅದು ಅವರಿಗೆ ಗೊತ್ತೇ ಆಗಲಿಲ್ಲ.

ಈ ಯುದ್ಧದಲ್ಲಿ ರೋಮನರ ಎಪ್ಪತ್ತು ಸಾವಿರ ಅಥವಾ ಒಂದು ಲಕ್ಷದಷ್ಟು ಸಿಪಾಯಿಗಳು ಕೊಲ್ಲಲ್ಪಟ್ಟರು. ಮುಸ್ಲಿಮರ ಕಡೆಯಲ್ಲಿ ಮೂರು ಸಾವಿರದಷ್ಟು ಜನರ ಜೀವಹಾನಿಯುಂಟಾಯಿತು. ಅಂತಾಕಿಯದಲ್ಲಿ ಸೋಲಿನ ಸುದ್ದಿ ಲಭಿಸಿದ ಕೂಡಲೇ ಸೀಸರ್ ಇಸ್ತಂಬೂಲ್ ರವಾನೆಯಾದನು. ವಿಜಯದ ಸುವಾರ್ತೆ ಲಭಿಸಿದ ಕೂಡಲೇ ಹಝ್ರತ್ ಉಮರ್(ರ) ಸಾಷ್ಟಾಂಗವೆರಗಿದರು ಮತ್ತು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. (ಅಲ್‌ಫಾರೂಖ್, ಶಿಬ್ಲಿ ನುವಮಾನ, ಪುಟ–119–130, ದಾರುಲ್ ಇಶಾಅತ್ ಕರಾಚಿ 1991) (ಅಲ್‌ಇಕ್‌ತಿಫಾ ನಿಮಾ ತಝ್‌ಮಿನ......, ಭಾಗ–2, ಪುಟ–271, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1420ಹಿಜರಿ) (ಫತೂಹ್ ಅಶ್ಶಾಮ್ ವಾಖಿದಿ, ಭಾಗ–1, ಪುಟ–242, ಅಲ್‌ಮಕ್‌ತಬುತ್ತೌಫೀಖಿಯಾ ಮಿಸರ್ 2008) (ತಾರೀಖ್ ಅತ್ತಿಬರಿ ಲಿಇಬ್ನೆ ಜರೀರ್ ಭಾಗ–2, ಪುಟ–338, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ತಾರೀಖೆ ಇಸ್ಲಾಮ್ ಕೀ ಬಹಾದುರ್ ಖವಾತೀನ್, ಪುಟ–116, ಮೌಲಾನಾ ಸನಾಉಲ್ಲಾಹ್ ಸಅದ್ ಶುಜಾಬಾದಿ, 2011) (ಅಲ್‌ಬಿದಾಯ ವನ್ನಹಾಯ, ಸಂಪುಟ–9, ಪುಟ–560, ದಾರೆ ಹಿಜರ್ 1998)

ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಈ ಯುದ್ಧದ ಬಗ್ಗೆ ವಿವರಿಸಿದ್ದಾರೆ. ಅವರಿಗೆ ಚರಿತ್ರೆಯ ಬಗ್ಗೆ ಆಳವಾದ ಜ್ಞಾನವಿತ್ತು. ಹಝ್ರತ್ ಉಮರ್‌ರೊಡನೆ(ರ) ಕೇಳಿ ಹಝ್ರತ್ ಅಬೂಉಬೈದ್(ರ) ಟಾಕ್ಸ್ ಇತ್ಯಾದಿಗಳನ್ನು ಕ್ರೈಸ್ತರ ನಾಗರಿಕರಿಗೆ ಮರಳಿಸಿದ್ದರು ಎಂದಾಗಿತ್ತು ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಅನಿಸಿಕೆ.

ಹಝ್ರತ್ ಇಕ್ರಿಮ(ರ) ಮತ್ತು ಅವರ ಹನ್ನೆರಡು ಸಂಗಡಿಗರ ತ್ಯಾಗದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯುದ್ಧದ ನಂತರ ನೀರು ಕುಡಿಸುವ ವ್ಯಕ್ತಿ ಅವರ ಬಳಿಗೆ ತಲುಪಿದಾಗ ಹಝ್ರತ್ ಇಕ್ರಿಮ ಮುಂದಿನ ಗಾಯಾಳು ವ್ಯಕ್ತಿಯ ಕಡೆಗೆ ಬೊಟ್ಟು ಮಾಡುತ್ತಾ ಹೀಗೆ ಹೇಳಿದರು: ಮೊದಲು ಅವರಿಗೆ ನೀರು ಕುಡಿಸಿರಿ, ಅವರಿಗೆ ನನಗಿಂತ ಹೆಚ್ಚು ನೀರಿನ ಆವಶ್ಯಕತೆಯಿದೆ. ನೀರು ಕುಡಿಸುವ ವ್ಯಕ್ತಿಯು ಮುಂದಿನ ಗಾಯಾಳುವಿನ ಬಳಿಗೆ ಹೋದಾಗ, ಅವರು ಮುಂದಿನ ಗಾಯಾಳುವಿನ ಕಡೆಗೆ ಬೊಟ್ಟು ಮಾಡುತ್ತಾ, ಅವರಿಗೆ ನೀರಿನ ಆವಶ್ಯಕತೆ ನನಗಿಂತ ಹೆಚ್ಚಿದೆ, ಅವರಿಗೆ ಕುಡಿಸಿರಿ ಎಂದು ಹೇಳಿದರು. ಹೀಗೆ ನೀರು ಕುಡಿಸುವವನು ಯಾವ ಸಿಪಾಯಿಯ ಬಳಿಗೆ ಹೋದರೂ ಅವರು ಬೇರೆಯವರ ಕಡೆಗೆ ಅವನನ್ನು ಕಳುಹಿಸುತ್ತಿದ್ದರು ಮತ್ತು ಯಾರೂ ನೀರು ಕುಡಿಯುತ್ತಿರಲಿಲ್ಲ. ನೀರು ಕುಡಿಸುವ ವ್ಯಕ್ತಿ ಕೊನೆಯ ಗಾಯಾಳು ವ್ಯಕ್ತಿಯ ಬಳಿಗೆ ತಲುಪಿದಾಗ ಅವರು ಮೃತಪಟ್ಟಿದ್ದರು. ಅವರು ಇಕ್ರಿಮರ ಬಳಿಗೆ ಮರಳಿ ಬಂದಾಗ ಅವರು ಕೂಡ ಮೃತಪಟ್ಟಿದ್ದರು. ಇತರ ಗಾಯಾಳುಗಳ ಅವಸ್ಥೆ ಕೂಡ ಇದೇ ಆಗಿತ್ತು. ನೀರು ಕುಡಿಸುವವನು ಮರಳಿ ತಲುಪುವಷ್ಟರಲ್ಲಿ ಅವರೆಲ್ಲರೂ ಮೃತಪಟ್ಟಿದ್ದರು. (ಹರ್ ಅಹ್ಮದಿ ಔರತ್ ಅಹ್ಮದಿಯತ್ ಕಿ ಸದಾಖತ್ ಕಾ ಎಕ್ ನಿಶಾನ್, ಅನ್ವಾರುಲ್ ಉಲೂಮ್, ಸಂಪುಟ–26, ಪುಟ–229–231)

ಈ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

************

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 41ರ ವರದಿಯ ಉಳಿದ ಭಾಗ)**

* ಮಿತ್ರರೊಬ್ಬರು ಸಗೀರ್ ಸಾಹಿಬ್ ಹೇಳಿದರು. ಇದು ನಾನು ಭಾಗವಹಿಸುತ್ತಿರುವ ಎರಡನೆಯ ಜಲ್ಸವಾಗಿದೆ. ಈ ಜಲ್ಸ ನನಗೆ ತುಂಬಾ ಪ್ರಾಮುಖ್ಯತೆ ಹೊಂದಿದ್ದಾಗಿದೆ. ಏಕೆಂದರೆ ಈ ಜಲ್ಸದಲ್ಲಿ ನನಗೆ ಬೈಅತ್ ಮಾಡಿ ಅಹ್ಮದಿಅತ್ ಸೇರುವ ಭಾಗ್ಯ ದೊರೆತಿದೆ. ನನ್ನ ಯಾವ ಪ್ರಶ್ನೆಯು ಇಲ್ಲ. ನಾನು ಕೇವಲ ಹುಝೂರ್ ಅನ್ವರ್‌ಗೋಸ್ಕರ ದುಆ ಮಾಡುತ್ತೇನೆ. ಅಲ್ಲಾಹನು ಹುಝೂರ್‌ರಿಗೆ ಆರೋಗ್ಯ ದಯಪಾಲಿಸಲಿ, ದೀರ್ಘಯುಷ್ಯ ನೀಡಲಿ. ಆಮೀನ್.

* Aldina ಎಂಬ ಮಹಿಳೆಯೋರ್ವಳು ಹೇಳಿದರು. ಇಲ್ಲಿ ಬರುವುದಕ್ಕಿಂತ ಮುಂಚೆ ಇಸ್ಲಾಂ ಧರ್ಮದ ಬಗ್ಗೆ ಏನೂ ಜ್ಞಾನವಿರಲಿಲ್ಲ. ಜಲ್ಸದಲ್ಲಿ ಭಾಗವಹಿಸಿ ಖಲೀಫತುಲ್ ಮಸೀಹ್ ಅವರ ಭಾಷಣಗಳನ್ನು ಕೇಳಿ ಇಸ್ಲಾಮಿನ ನಿಜವಾದ ಶಿಕ್ಷಣ ತಿಳಿಯುವಂತಾಯಿತು. ಇದಕ್ಕಿಂತ ಮುಂಚೆ ತಿಳಿಯದಂತಹ ವಿಷಯ ತಿಳಿಯುವಂತಾಯಿತು. ಜಲ್ಸದ ಎಲ್ಲಾ ಏರ್ಪಾಡುಗಳು ತುಂಬಾ ಚೆನ್ನಾಗಿದ್ದವು.

* Emina ಸಾಹಿಬಾ ಹೇಳಿದರು. ನಾನು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾಗಿದ್ದೇನೆ. ನನ್ನ ಪುತ್ರ Balkan ನಲ್ಲಿ ಬಹುಶಃ ಪ್ರಥಮ ವಖ್ಫೆ ನೌ ಆಗಿದ್ದಾನೆ. ನನ್ನ ಬಹುಮುಖ್ಯ ಅಭಿಲಾಷೆ ಎಂದರೆ ನನ್ನ ಮಗ ಸಾತ್ವಿಕನು ಮತ್ತು ಧರ್ಮಸೇವಕನಾಗಲಿ ಎಂದು. ನನ್ನ ತಾಯಿ ಯುದ್ಧ ಪರಿಣಾಮವಾಗಿ ಮಾನಸಿಕ ರೋಗಿಯಾಗಿದ್ದಾಳೆ. ನನ್ನ ತಂದೆಯ ಹೃದಯದಲ್ಲಿ ಇಸ್ಲಾಮಿಗೋಸ್ಕರ ಯಾವ ಸ್ಥಾನವು ಇಲ್ಲ.

ಅವರು ಹೇಳಿದರು. ನಾನು ನನ್ನ ಕುಟುಂಬದಲ್ಲಿ ಪ್ರಥಮ ಅಹ್ಮದಿ ಮಹಿಳೆಯಾಗಿದ್ದೇನೆ. ಪರದೆ ಧರಿಸುವ ಕಾರಣ ತಮ್ಮವರಿಂದಲೇ ಕಷ್ಟಗಳನ್ನು ಎದುರಿಸಬೇಕಾಯಿತು. ಆದರೆ ಈ ಕಷ್ಟಗಳಿಂದ ನಾನು ಹೆದರುವವಳಲ್ಲ. ನನಗೆ ಇವೆಲ್ಲ ಯಾವ ಲೆಕ್ಕಕ್ಕೂ ಇಲ್ಲ. ಅವರು ತಮ್ಮ ಹೆತ್ತವರ ಮಾರ್ಗದರ್ಶನಕ್ಕಾಗಿ (ಹಿದಾಯತ್) ಪ್ರಾರ್ಥಿಸಲು ಕೇಳಿಕೊಂಡರು. ಅಲ್ಲಾಹನು ತನ್ನ ತಂದೆಯವರಿಗೆ ಅಹ್ಮದಿಅತ್ತಿನ ಸ್ವೀಕಾರಕ್ಕಾಗಿ ಅವರ ಮನಸನ್ನ ಮೃದುಗೊಳಿಸಲಿ.

**(ಮುಂದುವರಿಯುವುದು)**

## *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
NATIONAL TOLL FREE
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.